ಕರ್ನಾಟಕ ಸರ್ಕಾರ

ಮಿಣಬ್ಬುಳಿ

ಅರೆಬಾಸೆ ಕಥಾ ಜೊಂಗೆ

ಡಾ. ಪುನೀತ್ ರಾಘವೇಂದ್ರ ಕುಂಟುಕಾಡು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಮಿಣ್ಬುಳಿ

ಅರೆಬಾಸೆ ಕಥಾ ಜೊಂಗೆ

ಡಾ. ಪುನೀತ್ ರಾಘವೇಂದ್ರ ಕುಂಟುಕಾಡು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಮಡಿಕೇರಿ, ಕೊಡಗು ಜಿಲ್ಲೆ - 571 201

'MINPULI- Arebase Kathajonge' in Arebhase language written by Dr. Punith Raghavendra Kuntukadu, Published by 'Karnataka Arebhase Samskrithi Mathu Sahitya Academy.

ಪ್ರಕಟಣೆ **: 2019**

ಪ್ರತಿಗಳು **: 500**

ಬೆಲೆ : ರೂ. 80/- Price : Rs. 80/-

ಪುಟಗಳು : 90

ಸಲಹ ಸಮಿತಿ :

ಶ್ರೀ ಎ.ಕೆ. ಹಿಮಕರ

ಶ್ರೀ ಪರಷುರಾಮ ಚಿಲ್ತಡ್ಕ

ಶ್ರೀಮತಿ ತಿರುಮಲೇಶ್ವರಿ

ಶ್ರೀಮತಿ ಶ್ವೇತಾ ಮಡಪ್ಪಾಡಿ

ಪ್ರಕಾಶಕರು : ರಿಜಿಸ್ಟ್ರಾರ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ,

ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.

ದೂ. : 08272-223055

ಮುದ್ರಣ :

ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,

ಮಡಿಕೇರಿ, ಕೊಡಗು

Ph : 08272-224919, 9448135592

ಅಧ್ಯಕ್ಷರ ಮಾತ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಇದೀಗ ಮೂರನೇ ತಂಡದ ಅಧಿಕಾರಾವದಿಲಿ ನಡೀತಾ ಉಟ್ಟು. ಈ ಹಿಂದೆನ ಸಮಿತಿನವೂ ಬಾರೀ ಒಳ್ಳೊಳ್ಳೆ ಕಾರ್ಯಕ್ರಮನ ಹಾಕಿಕಂಡ್, ಬಾಸೆಗೂ, ಅಕಾಡೆಮಿಗೂ ಬಾರೀ ಹೆಸ್ರ್‌ನ ತಂದ್‌ಕೊಟ್ಟೊಳೊ. ನಾವುಗೆ ಒಳ್ಳ ಅಡಿ ಹಾಕಿ ಕೊಟ್ಟೊಳೊ. ಈಗ ನಾವು ಅದಕ್ಕಿಂತಲೂ ಒಳ್ಳೊಳ್ಳೆ ಕಾರ್ಯಕ್ರಮನ ರೂಪಿಸಿಕಂಡ್, ಸುಳ್ಯ, ಕೊಲ್ಲಮೊಗ್ರ, ಹಾಲೆಮಜಲ್, ಸುಬ್ರಹ್ಮಣ್ಯ, ಪುತ್ತೂರು, ದೇವಸ್ತೂರ್, ಮಡಿಕೇರಿ ದುಗ್ಗಲಡ್ಕಲಿ ಬೇರೆ ಬೇರೆ ಕಾರ್ಯಕ್ರಮನ ಹಾಕಿ ಯಶಸ್ವಿಯಾಗಿ ನಡ್ಸಿಯೊಳೊ. ಅಕಾಡೆಮಿನ ಕಾರ್ಯಕ್ರಮಗಳಿಗೆ ಅರೆಬಾಸೆನವು ಮಾತ್ರ ಅಲ್ಲದೆ, ಬೇರೆ ಬೇರೆ ಜಾತಿ ಧರ್ಮದವು, ಬೇರೆ ಬೇರೆ ಮನೆಮಾತ್ ಇಸಿಕಂಡವು ಬಂದ್ ಭಾಗವಹಿಸ್ಯೊಳೊ. ಸುಳ್ಯಲಿ ಅರೆಬಾಸೆನೇ ರಾಜಬಾಸೆ. ಎಲ್ಲಾ ಜಾತಿ ಜನಾಂಗದವುನೂ ಮಾರ್ಗಲಿ, ಆಫೀಸ್‌ಲಿ ಪ್ರೀತಿ ಗೌರವಂದ ಅರೆಬಾಸೆನ ಮಾತಾಡ್ತಾ ಒಳೊ. ಈಗ ನಮ್ಮ ಬಾಸೆನ ಹೆಮ್ಮೆಂದ ಮಾತಾಡುವಂತ ಪರಿಸ್ಥಿತಿ ಬರ್‍ತಾ ವುಟ್ಟು.

ಮುಂದೆ ನಾವು ನಮ್ಮ ಬಾಸೆಗೆ ಅಲ್ಪಸಂಖ್ಯಾತ ಬಾಸೆಂತ ಸರಕಾರ ಗಣನೆಗೆ ತಕಂಕುತೇಳಿ ಒತ್ತಾಯ ಮಾಡುವ ಮತ್ತೆ ನಮ್ಮ ಬಾಸೆನ ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರ್‍ಸೊಕೂಂತ ಒತ್ತಾಯ ಮಾಡ್ತಾ ಒಳೊ. ಇದೇ ಉದ್ದೇಶನ ಮುಖ್ಯ ವಾಹಿನಿಗೆ ತಂದ್ ಜನಮನ್ನಣೆಗೆ, ಜನಮತಗಣನೆಗೆ ಸುಳ್ಯಲಿ ಅರೆಬಾಸೆ ಸಾಹಿತ್ಯ ಸಮ್ಮೇಳನ ನಡ್ಸತಾ ಒಳೊ. ಈ ಸಮ್ಮೇಳನಲಿ ಬಾರೀ ಸಂಖ್ಯೆಲಿ ಜನ ಬೆಂಬಲ ಸಿಕ್ಕಿದೆ. ಅದೇ ದಿನ ಬೇರೆ ಬೇರೆ ಐದ್ ಪುಸ್ತಕಗ ಬಿಡುಗಡೆ ಆದೆ. ಕವಿಗೋಷ್ಠಿ, ವಿಚಾರಗೋಷ್ಠಿ ನಡ್ದದೆ. ಗಣ್ಯಾತಿಗಣ್ಯರ್ ಬಂದ್ ಸೇರುವೆ.

ಇಂದ್ ಬಿಡುಗಡೆ ಆಗುವ ಈ ಪುಸ್ತಕ ಡಾ. ಪುನೀತ್ ರಾಘವೇಂದ್ರ, ಕುಂಟುಕಾಡ್‌ನವರ್‍ದ್. ಇವು ಬರ್‍ದ ಪುಸ್ತಕ ಒಳ್ಳೆ ಒಂದು ಸಾಹಿತ್ಯ ಪುಸ್ತಕ. ಅಕಾಡೆಮಿ ಸಂತೋಷಲಿ ಅವರ ಪುಸ್ತಕನ ಪ್ರಿಂಟ್ ಮಾಡಿ, ಜನತೆನ ಕೈಗೆ ಇಸ್ತಾ ಉಟ್ಟು, ಜನ ಪ್ರೀತಿಲಿ ಸ್ವೀಕರಿಸ್ಲೊಕು, ಲೇಖಕರಿಗೆ ಅಭಿನಂದನೆ.

ಪಿ.ಸಿ. ಜಯರಾಮ

ಅಧ್ಯಕ್ಷರ್

ಸಂಚಾಲಕನ ಮಾತ್

ಕರ್ನಾಟಕ ಅರೆಬಾಸೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸ್ಥಾಪನೆ ಆದ್ದೇ ಮುಖ್ಯ ಮೂರು ಉದ್ದೇಶಕ್ಕಾಗಿ. ಒಂದು ಅಧ್ಯಯನ, ಎರಡ್ ಸಂಶೋಧನೆ, ಮೂರ್ನೆದ್ ಪ್ರಕಾಶನ. ನಮ್ಮ ಅಕಾಡೆಮಿ ಇದೀಗ ಅಧ್ಯಯನ ಮತ್ತೆ ಸಂಶೋಧನೆ ಸುರು ಮಾಡ್ತಾ ಉಟ್ಟು. ನಮ್ಮ ಸಂಸ್ಕೃತಿ ಮತ್ತೆ ಸಮಾಜದ ಕುರಿತಾಗಿ ಒಟ್ಟು ಹತ್ತ್ ಅಧ್ಯಯನಗ ಏಕಕಾಲಕ್ಕೆ ನಡೀತಾ ಉಟ್ಟು. ಹತ್ತ್ ಜನ ಸಂಶೋಧಕರ್ ಅಧ್ಯಯನ ನಡೆಸ್ತಾ ಒಳೊಂತೇಳುದೇ ಹೆಗ್ಗಳಿಕೆ. ಹಾಂಗೇನೇ ಮುಂದೆ ಇನ್ನೂ ಹತ್ತ್ ಜನಕ್ಕೆ ಫೆಲೊಶಿಫ್ ಕೊಡುವ ಯೋಜನೆನೂ ಉಟ್ಟು. ಈ ಅಧ್ಯಯನಗ ಮುಗ್ದ ಮೇಲೆ ಒಳ್ಳೊಳ್ಳೆ ಸಂಶೋಧನಾ ಗ್ರಂಥಗ ಬಾಕೆ ಉಟ್ಟು.

ಅಕಾಡೆಮಿನ ಇನ್ನೊಂದು ಗುರಿ ಸೃಜನಶೀಲ ಸಾಹಿತ್ಯ ರಚೆನೆಗೆ ಪ್ರೋತ್ಸಾಹ ಕೊಟ್ಟು ನಮ್ಮೊಲ್ಲಿ ಒಳ್ಳೊಳ್ಳೆ ಸಾಹಿತ್ಯ ಕೃತಿಗ ಇದೀಗ ಬಾಕೆ ಸುರಾಗುಟು. ಇತ್ತೀಚೆಗೆ ಬೇರೆ ಸಾಹಿತ್ಯದ ಬಗ್ಗೆ ಕೆ.ಆರ್. ತೇಜಕುಮಾರ್ ಬರ್ದ 'ಕಾಡ್‌ನ ಮಕ್ಕ', ಕೊಲ್ಲಮೊಗ್ರಲಿ ಬುಡುಗಡೆ ಆಗುಟು. ಪ್ರಸಿದ್ಧ ಕಾದಂಬರಿಗಾರ್ತಿ ಎಂ.ಜಿ. ಕಾವೇರಮ್ಮನವು ಬರ್ದ 'ಬೊದ್ಕು' ಹೊರಬಂದುಟು. ಹಾಂಗೆನೆ ವಿನೋದ್ ಮೂಡಗದ್ದೆ ಬರ್ದ ಪುಸ್ತಕನ ಅಕಾಡೆಮಿ ಮುದ್ರನ ಮಾಡ್ಸಿಟು.

ಈಗ 5 ಪುಸ್ತಕಗಳ ಒಂದು ಕಂತೆ 2019 ರ ಮಾರ್ಚ್ 2 ರಂದ್ ಸುಳ್ಯಲಿ ಲೋಕಾರ್ಪಣೆ ಮಾಡಿಕೆ ಅಕಾಡೆಮಿ ನಿರ್ಣಯ ಮಾಡಿಟ್ಟು. ಕೋಡಿಯವು ಬರ್ದ 'ಅರೆಬಾಸೆ ವ್ಯಾಕರಣ ಪುಸ್ತಕ', ಪಿ.ಜಿ. ಅಂಬೆಕಲ್ ಬರ್ದ 'ತಬ್ಲಿ ಮಂಜ' ಕತೆಪುಸ್ತಕ, 'ಅಪ್ಪ ಹೇಳ್ದ ಹತ್ತ್ ಕತೆಗ'–ಅಡ್ತಲೆ ಭವಾನಿಶಂಕರ್‌ನವರ್ದ್. ಡಾ. ನಿಡಿಂಜಿ ಕರುಣಾಕರನವರ 'ನೆಗೆಬೇಕು ಕೇದೆಗೆ ಗೊನೆ ಹಾಂಗೆ' (ಕವನ) ಮತ್ತೆ ಡಾ. ಪುನೀತ್ ಅವರ 'ಮಿಣ್ಪುಳಿ' ಕತೆಗಳ ಪುಸ್ತಕ ಒಂದೇ ದಿನ ಬಿಡುಗಡೆ ಕಂಡದೆ.

ಡಾ. ಪುನೀತ್ ರಾಘವೇಂದ್ರ ಕುಂಟುಕಾಡ್‌ನವು. ಉದ್ಯೋಗಲಿ ವೈದ್ಯ ಆದರೂ ಸಾಹಿತ್ಯದ ಚಟ ಒಳ್ಳೆದುಟ್ಟು. ಕುಸಾಲ್, ತಮಾಸೆ, ವಿಡಂಬನೆ, ಸಣ್ಣ ಸಣ್ಣ ಸಂಗತಿಗಳ ಕತೆರೂಪಕ್ಕೆ ತಂದೊಳೊ. ಪುಸ್ತಕ ಸುರೂದಾದರೂ, ಬರ್‍ಯೋದು ಸುರೂದ್ ಅಲ್ಲ. ಬಾರೀ ಸಮಯಂದಳೇ ಬರ್‍ಯಿತಾ ಒಳೊ. ಮತ್ತೆ ಒಂದು ರೀತಿನ ತರ್ಕಬದ್ಧ ವಿಚಾರಗ, ಸಾಮಾಜಿಕ ಕಳಕಳಿ ಎದ್ದ್ ಕಂಡದೆ. ಮತ್ತೆ ಅವರ ಜೀವನನೇ ಅಸಾಮಾನ್ಯ. ಅವರ್ದೇ ಆದ ಚಿಂತನೆಗಳೂ, ಕಳಕಳಿನೂ ಉಟ್ಟು. ಮುಂದೆ ದೊಡ್ಡ ಸಾಹಿತಿ ಆಗುವ ಒಳ್ಳೆ ಲಕ್ಷಣ ಕಂಡದೆ. ಡಾ॥ ಪುನೀತ್ ಅವರ ಈ ಪುಸ್ತಕನ ನೀವು ಓದಿ ಕುಸಿಪಡಿ. ಬರ್ದ ಪುನೀತ್ ಅರೆಬಾಸೆಗೆ ಒಂದು ದಾರಿನ ಅವರ್ದೇ ಹೆಸ್ರ್‌ಲಿ ತೋರ್‍ಸಿದಾಂಗೆ ಆಗಿಟ್ಟು.

– ಹಿಮಕರ,

ತಾ : 25–2–2019 ಸಂಚಾಲಕ, ಪುಸ್ತಕ ಪ್ರಕಟಣಾ ಸಮಿತಿ

ಲೇಖಕನ ಮಾತ್

ಊರ್ ಬುಟ್ಟು ಬೆಂಗ್ಳೂರ್ ಸೇರಿ ಜಿಗಣಿ ಎಟಿಎಂ ಮುಂದೆ ಸಾಲ್‌ಲಿ ನಿತ್ತ್‌ಕಂಡಿದ್ದವನ ಹೆಣ್ಣ್‌ನ ಫೋನ್ ಅಡಿಂದ ಕೊಡಿ ಮುಟ್ಟ ದರ್ಪ್‌ಸಿತ್. (ಹೆಣ್ಣ್‌ಗೆ ಹೆದ್ರಿ ಅಲ್ಲ... ಮೊಬೈಲ್ ವೈಬ್ರೇಷನ್‌ಲಿ ಇತ್ತ್. ಅಷ್ಟೇ!!) ಫೋನ್ ರಿಸೀವ್ ಮಾಡಿ ಮಾತಾಡಿಕೆ ಸುರು ಮಾಡ್ರೆ ಮುಂದೆ ನಿತ್ತಂವ ಮೂರ್ ಮೂರ್ ಸರ್ತಿ ತಿರ್ಗಿ ನೋಡ್ತುಟ್ಟು. ಈ ಸಾವಾಸ ಆಕಿಲೆತ ಪಕ್ಕ ಫೋನ್ ನಿಲ್ಸಿದೆ. ಆ ಜನ ತಿರ್ಗಿ "ನೀವು ಸುಳ್ಯದವಾ... ಅರೆಬಾಸೆ ಕೇಳಿಕೆ ಬಾರೀ ಲಾಯಿಕ್ ಆದೆ. ನೀವ್ ಎಲ್ಲಿ ಒಳದ್?" ಕೇಳ್ದವಂಗೆ ಕೆಬಿ ಒಮ್ಮೆ ಚೌಳಿ ಕಚ್ಚಿದ ಕೆಬಿನಾಂಗೆ ಕುತ್ತ ಆತ್. ನಾನೂ ವಿಚಾರ್ಸಿದೆ. ಅವರ ಬಗ್ಗೆ ತಿಳ್ಕಂಡೆ. ಅವು ಸುಳ್ಯಲಿ ಸುಮಾರ್ ಹತ್ತ್ ವರ್ಷ ಕಳ್ದವುಗಡ. ಈಗ ಇಲ್ಲಿ ಸೆಟ್ಲ್. ಜಾತಿಲಿ ಮಾಪ್ಳೆ. ನೀವೆಂಗೆ ಅರೆಬಾಸೆ ಕಲ್ತರಿತ ಕೇಳ್ದಕ್ಕೆ ಅವ್ ಹೇಳ್ದ ಮಾತ್ ಮಾತ್ರ ಇನ್ನೂ ಕೆಬಿಲಿ ಗುಂಯ್ ಗುಡ್ತುಟ್ಟು. "ಸುಳ್ಯಲಿದ್ದ್ ಅರೆಬಾಸೆಲಿ ಮಾತಾಡದವಂಗೆ ಬೆಲೆ ಇಲ್ಲೆ ಬುಡಿ!!"

ಆಗ ನಂಗೆ ನಮ್ಮ ಇಂದ್‌ನ ಪರಿಸ್ಥಿತಿ ನೆಂಪಾತ್. ಆಯ್ಯೆ, ಅಪ್ಪ, ಮಕ್ಕಳೊಟ್ಟಿಗೆ ಮಾತಾಡಿಕೆ ಸುರು ಮಾಡ್ದೇ ಕನ್ನಡಲಿ. ಇನ್ನ್ ಸಾಲೆಗೆ ಸೇರ್ದ ಮೇಲೆ ಕೇಳೊಕೂಂತಲೇ ಇಲ್ಲೆ!! ನಮ್ಮ ಬಾಸೆಲಿ ನಾವೇ ಮಾತಾಡದಿದ್ದರೆ ಇನ್ನ್ ಯಾರ್ ಮಾತಾಡ್ವೆ? ನನ್ನಪ್ಪ ಕುಂಟುಕಾಡ್ ರಾಮಯ್ಯ ಮಾಸ್ಟ್ರ ಹೇಳ್ತಿದ್ದೊ– ಮಕ್ಕ ಕನ್ನಡ, ಇಂಗ್ಲೀಷ್ ಸಾಲೆಗೆ ಹೋದ ಮೇಲೆ ಕಲ್ತವೆ. ಹಿಂಗಿರ್ಕಾಕನ ಅರೆಬಾಸೆನ ಎಲ್ಲಿ ಮಾತಾಡ್ವೆ, ಅದ್ಕೆ ಮನೆಂದಳೇ ಮಾತಾಡೊಕು. ಪದ್ಯಗ ಬರ್ದರೆ ಅರೆಬಾಸೆಲಿ ವಾಕ್ಯಗ ಮಾಡಿಕೆ ಎಲ್ಲವ್ಕೆ ಗೊತ್ತಾದ್ಲೆ. ಅಪರೂಪದ ಶಬ್ಧಗಳ ಸೇರ್ಸಿ ಬರ್ದರೆ ಎಲ್ಲವ್ಕೂ ಗೊತ್ತಾದೆ. ಹಿಂಗೆಲ್ಲಾ ಯೋಚನೆ ಮಾಡಿಕಂಡಿದ್ದವಂಗೆ ಹೊಳ್ದದ್ ಅರೆಬಾಸೆಲಿ ಬರ್ಯಕೆ ಸುರು ಮಾಡೊನೊತ. ಅಲ್ಲಿಂದಳೇ ಸಣ್ಣ ಸಣ್ಣ ಕತೆಗಳ ಬರ್ದೆ. ಹೆಸ್ರಾಕಿ ವಾಟ್ಸಪ್‌ಲಿ ಬುಟ್ಟೆ, ನಾಕೈದ್ ಗ್ರೂಪ್‌ಲಿ ಸುತ್ತಿ ಮಾಯ ಆತ್.... ಗಾಳಿಲಿ ಹೊಗೆ, ಧೂಳು, ಪೊರ್ಮಳ, ನಾತ ಸೇರ್ದಂಗೆ!!! ಕಡೆಗೊಂದ್ ದಿನ ನನ್ನ ಕಥೆನೇ ನಂಗೆ ಫಾರ್ವರ್ಡ್ ಆಗಿ ಬಾತ್... ಅಡಿಲಿದ್ದ ನನ್ನ ಹೆಸ್ರ್ ಮಾತ್ರ ಮಾಯ!! ಇನ್ನ್ ಇದರ ಕುಲಗೆಡ್ಸುದು ಬೇಡಾಂತ 'ಮಿಣ್ಪುಳಿ – ಅರೆಬಾಸೆ ಬರಹಗಳ ಜೊಂಗೆ' ಬ್ಲಾಗ್ ಮಾಡ್ದೆ. (ಯಾರಾರ್ ನನ್ನ ಕಥೆಗಳ ಕಾಫಿ ಮಾಡ್ರೆ ಬ್ಲಾಗ್ ಲಿ ಪಬ್ಲಿಷ್ ಮಾಡ್ದ ಸಮಯ, ದಿನಾಂಕದ ಆಧಾರದ ಮೇಲೆ ಕೇಸ್ ಕೂಡ ಹಾಕಕ್. ಇದರ ಆಧಾರಲಿ KDK App ನವು ನನ್ನ ಕಥೆಗಳ

ಬೇರೆಂವ ಒಬ್ಬ ಅವನ ಹೆಸ್ರ್‌ಲಿ ಹಾಕಿದರ ನೋಡಿ ಡಿಲೀಟ್ ಮಾಡ್ದೊ ಉಟ್ಟು!!)

ಮಿಣ್ಚುಳಿ.... ಅಮಾಸೆ ಕತ್ತಲೆಲಿ ಮಿಣ್ಕಿ ಬೆಳ್ಕ್ ಕೊಟ್ಟದೆ. ಅಷ್ಟಕ್ಕೂ ಅದ್ ಪೂರ್ತಿ ಬೆಳ್ಕಲ್ಲ. ಕತ್ತಲೆಗೆ ಮಾಯ ಆದದರೆಲ್ಲ ಒಮ್ಮೆ ತೋರ್ಸಿಕೊಟ್ಟದೆ. ಹಂಗೇ ಈ ಬ್ಲಾಗ್ / ಪುಸ್ತಕ ಕೂಡ. ಅರೆಬಾಸೆಲಿ ಮರ್ತೋ‌ಗಿರುವ ಪದಗಳ ಮತ್ತೆ ಹೆರ್ಕಿ ತಂದ್ ಎಲ್ಲವ್ಕೆ ಒಮ್ಮೆ ರುಚಿ ತೊರ್ಸುವ ಸಣ್ಣ ಪ್ರಯತ್ನ ಅಷ್ಟೇ. ಇನ್ನ್ ಇಲ್ಲಿರುವ ಎಲ್ಲಾ ಕಥೆಗ ಕಾಲ್ಪನಿಕ ಅಲ್ಲ. ನಮ್ಮ ಸುತ್ತ ಮುತ್ತ ಇರ್ವ ಪಾತ್ರಗಳೇ. ಅಲ್ಲೇನೂ ಹೊಸ ಬಗೆ ಇಲ್ಲೆ. ಅದೆಷ್ಟೋ ಕಥೆಗಳಿಗೆ ನಾನೇ ಪಾತ್ರಧಾರಿ. ಅರ್ಧ ಸತ್ಯ, ಅರ್ಧ ಸುಳ್ಳು, ಅಷ್ಟೇ!! ಕಥೆಗಳ ಓದಿಕಣ್ತಾ ಹೋದಂಗೆ ಅದ್ ನೀವ್ಗೇ ಅರ್ಥ ಆದೆ. ಕೆಲವೊಂದ್ ಕಥೆಗಲ್ಲಿ ಅಷ್ಟ್ ಸುದ್ಧ ಅರೆಬಾಸೆ ಪದಗ ಸಿಕ್ಕಿಕಿಲೆ. ಅವೆಲ್ಲಾ ಸುರು ಸುರುನ ಕಥೆಗ. ಅದ್ಕೆ ಕಾರಣನೂ ಉಟ್ಟು. ಮಾತಾಡಿಕೆ ಜನ ಇದ್ದರಷ್ಟೇ ಅಂಥಾ ಪದಗ ಮತ್ತೆ ಮತ್ತೆ ನೆಂಪಾಗ್ತಿರ್ದು ಅಲ್ಲ? ಆಗ ನಂಗೆ ಬೆಂಬಲಕ್ಕೆ ನಿತ್ತದೇ ನನ್ನ ಗುರುಗ ಶ್ರೀ ಗಂಗಾಧರ ಕುರುಂಜಿಯವರ ಅರೆಬಾಸೆ-ಕನ್ನಡ ಶಬ್ಧಕೋಶ. ಪುರ್ಸೊತ್ತಿರ್ದಾಕನ ಓದಿ ಓದಿ ಪದಗಳ ಗುಡ್ಡೆ ಹಾಕಿ ಇಸಿಕಣ್ತಿದ್ದೆ. ಡಾಕ್ಟ್ರ ಆಗಿ ಸಂಪೂರ್ಣ ವ್ಯವಹಾರ ಇಂಗ್ಲೇಷ್ಲೇ ಆದರೂ ಪದಗಳ ಪೋಣ್ಸಿಕೆ ಭಂಗ ಆತ್ಲೆ.... ಕಾರಣ ನನ್ನ ಪ್ರಾಥಮಿಕ ಶಿಕ್ಷಣ ಸಂಪೂರ್ಣ ಕನ್ನಡ!!

ಇಂಗ್ಲೀಷ್ ಮಾಧ್ಯಮಲಿ ಓದಿರೆ ಮುಂದೆ ಕೆಲ್ಸ ಮಾಡ್ಬಾಕನ ಸುಲ್ಭ. ಕನ್ನಡಲೇ ಮಾತಾಡ್ರೆ ಮಕ್ಕಳಿಗೆ ಸಾಲೆಗೆ ಹೋಕಾಕನ ವ್ಯವಹಾರಕ್ಕೆ ಒಳ್ಳೆದ್. ಇನ್ನ್ ಅರೆಬಾಸೆಗೆ ಲಿಪಿ ಇಲ್ಲೆ. ಓಂಗಿರ್ದಾಕನ ಭಾಷೆ ಒಳಿದೋ? ಅಷ್ಟಕ್ಕೂ ಅರೆಬಾಸೆಲೇ ಮಾತಾಡಿ ಪ್ರಯೋಜನ ಏನ್? ಈಗ ನಾ ನನ್ನ ಗುರುಗ ಬಾಲಣ್ಣ ಮಾಷ್ಟ್ರ ನೆನ್ಸಿಕಣ್ತೊಳೆ. ಅವು ಹೇಳ್ದಾಂಗೆ 'ಕನ್ನಡ ಮಾಧ್ಯಮಲಿ ಕಲ್ತ ಮಕ್ಕ ಇಂಗ್ಲೀಷ್‌ನ ಕನ್ನಡಲಿ ಅರ್ಥ ಮಾಡಿಕಂಡವೆ. ಆದರೆ ಇಂಗ್ಲೀಷ್ ಮಾಧ್ಯಮದವು? ಅತ್ತ ಪೂರ್ತಿ ಇಂಗ್ಲೀಷೂ ಬಾರದೆ ಸರಿಯಾಗಿ ಕನ್ನಡನೂ ಗೊತ್ತಿಲ್ಲದೆ ಒಟ್ಟಾರೆ ಭಾಷೆ ಇಲ್ಲದವಾದವೆ!! ಇಂಗ್ಲೀಷ್‌ಲಿ ಕಲ್ತರೆ ಮಾತ್ರ ಮುಂದೆ ಬಂದವೆತ ಹೇಳ್ದು ಪೂರ್ತಿ ಅಲ್ಲ. ಕನ್ನಡ ಕಲ್ತರೆ ಶಾಲೆಲಿ ಕಲಿಯಕೆ ಲಾಯಿಕ್, ಅರೆಬಾಸೆಲಿ ಎಂತ ಕಲ್ತವೆ? ಎಂಬುದೂ ಸುಳ್ಳು. ಬರೇ ಭ್ರಮೆ ಅಷ್ಟೇ!... ಇದ್ಕೆ ಉದಾಹರಣೆನೇ ನಾ! ಅರೆಬಾಸೆಲಿ ಬರ್ದದರ ಓದಿ ವಿದೇಶಂದಲೂ ನನ್ನೊಟಿಗೆ ವ್ಯವಹಾರ ಮಾಡುವೆ. ಇದೆಲ್ಲಾ ಸಾಧ್ಯ ಆದ್ ಅರೆಬಾಸೆಂದಲೇ ಅಲ್ಲನಾ? ಇನ್ನ್ ಲಿಪಿ ಇಲ್ಲದ ಬಾಸೆ ಒಳಿದಾಂತ ಕೇಳ್ರೆ ಖಂಡಿತಾ ಒಳಿದು. ಇಂಗ್ಲೀಷ್‌ಗೆ ಸ್ವಂತ ಲಿಪಿ ಎಲ್ಲುಟ್ಟು? ಸಂಸ್ಕೃತಕಕ್ಕೂ ಉಟ್ಟಾ? ಹಂಗೇ ನಮ್ಮ ಅರೆಬಾಸೆ ಕೂಡಾ... 'ಬುಡ

ಚಿಗ್‌ರ್ದ ಹೊತ್ತ್' ಕಥೆಲಿ ಅದರ ತಿಳ್ಸ್ಯಳೆ. ಎಲ್ಲಕ್ಕೂ ಮುಖ್ಯ ನಮ್ಮ ಮನ್ಸ್.

ಭಗವದ್ಗೀತೆಲಿ ಅರ್ಜುನ ಕೇಳ್ದೆ... "ಚಂಚಲಂ ಹಿ ಮನಃ ಕೃಷ್ಣಾ ಪ್ರಮಾಥಿ ಬಲವದ್ದೃಢಮ್' (ಕೃಷ್ಣಾ, ಮನ್ಸ್ ಯಾಗೋಳ್ ಚಂಚಲ, ಅದರ ಬಲ, ಶಕ್ತಿ ನಮ್ಮನೇ ಬೊಗ್ಗ್‌ಸಿ ಅದರ ವಶಲಿ ಇಸಿಕಂಡದೆ). ಅದ್ಕೆ ಕೃಷ್ಣ ಹೇಳ್ದೆ "ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ" (ಯಾಗೋಳು ಮಾಡುವ ಅಭ್ಯಾಸಂದ ಮತ್ತು ವೈರಾಗ್ಯಂದ ನಾವ್ ಮನಸ್ಸ್‌ನ ಗೆಲ್ಲಕ್)ಹೆಂಗೆ? ನಾವು ವಾಟ್ಸಪ್‌ಲಿ ಮಾಡುವ ಮೆಸೇಜ್, ಫೇಸ್ಬುಕ್‌ಲಿ ಇರುವ ಕಮೆಂಟ್ ಅರೆಬಾಸೆಲೇ ಇದ್ದರೆ ಲಾಯಿಕ್. ಓದಿದ ಮನ್ಸ್‌ಗೂ ತೃಪ್ತಿ.

ಸರಿಯಾಗಿ ನೋಡ್ರೆ ಬರೇ ಬಾಸೆ ಮಾತ್ರ ಅಲ್ಲ, ನಮ್ಮೊಳಗೆನ ಸಂಬಂಧಗ ಕೂಡಾ ದೂರ ಆಗ್ತೊಳೊ. ಯಾರಾರ್ ಸಿಕ್ಕಿರೆ ಅಂಕಲ್‌ಗೆ ಹಾಯ್ ಹೇಳ್, ಆಂಟಿಗೆ ಹಾಯ್ ಹೇಳ್ತೇಳ್ವೆ ಹೊರ್ತ್‌ ಸಣಪ್ಪ, ಚಿಕಂವಗ ಮಾಯ ಆಗೊಳೊ. ಅದರ ತಿಳ್ಕಂಬಕೆ 'ಕುಂಞಿಮೋನುನ ಚಾಮಿ' ಕತೆ ಓದಿ. ಎದ್ರ್ ಸಿಕ್ಕಿದವರೊಟ್ಟಿಗೆ ಏನ್ ಬಾವ, ಒಳ್ಳದ್ ಬಾವ... ಹೇಳ್ವ ಆದರತೆನ ಹಾಯ್, ಹಲೋ ನುಂಗಿರೆ ಹೊರ್ಡ್‌ಕಾಕನ ನಾ ಬನ್ನೆ, ಇನ್ನೊಮ್ಮೆ ಸಿಕ್ಕೊಮೊ ಹೇಳ್ದರ ಬಾಯ್, ಸೀಯೂ ನುಂಗಿಟು. ಸಂಸ್ಕೃತಿ ಮರೆಯಾಗಿ ಆಟಿ, ಕೆಡ್ಡಾಸಗ ಕೂಟಕ್ಕೆ ಬಂದೊ. ಇನ್ನ್ ಹಬ್ಬ, ಹರಿದಿನಗ ಎಲ್ಲಿ ಕಾಂಬಕೆ ಸಿಕ್ಕುದು!! ಅದೆಷ್ಟೋ ವಿಷಯಗಳ ನಾ ಓಂಗಾಗಿಯೇ ಕಳ್ಕಂಡೆ. ಹಂಗೇಂತ ನಮ್ಮ ಮುಂದೆನ ಮಕ್ಕಳಿಗೆ ನಂಗೆ ಗೊತ್ತಿದ್ದದನ್ನೂ ತಿಳ್ಸದೆ ಹೋದರೆ ನನ್ನ ಬೊಡ್ಕ್ ಅಜ್ಜಿಗೆ ಸಿಂಗಾರ ಮಾಡ್ದಂಗೆ. ಉಪಯೋಗನೇ ಇಲ್ಲೆ!! ಹಂಗಾಗಿ ಮುಂದೆನ ಜನಾಂಗಕ್ಕೆ ದಾಟ್ಸಿಕೆ ಮಾಡ್ದ ಪ್ರಯತ್ನನೇ "ಮಿಣ್ಬುಳಿ'. ನಮ್ಮ ಬೊಡ್ಕ್‌ಲಿ ಯಾರೆಲ್ಲಾ ಬಂದವೆತ ಗೊತ್ತಾಕೆ ಕುಂಞಿಮೋನುನ ಚಾಮಿ ಓದಿ. ಇಂದ್ ನಮ್ಮ ಸುಳ್ಯದ ಮಕ್ಕ ಓದಿದ್ ರೆಟ್ಟುದೇ ಬೆಂಗ್ಳೂರ್ ತಪ್ಪಿರೆ ದುಬೈ, ಊರುಲಿರವ್ಕೆ ಹೇಳಿಕೆ ಲಾಯ್ಕ್. ಆದರೆ ಅವರ ಬೊಡ್ಕ್ ನನೂ ತಿಳ್ಸುವ ಪ್ರಯತ್ನ ಮಾಡ್ಯಳೆ. ಹಳ್ಳಿ ಜೀವನ, ಪೇಟೆ ಜೀವನ, ಹಾಸ್ಟೆಲ್ಲೈಫ್, ಕನ್ನಡ ಮಾಧ್ಯಮ, ಇಂಗ್ಲೀಷ್ ಮಾಧ್ಯಮ ಎಲ್ಲದರ ಬಣ್ಣ ಕೇಡ್‌ಗಳ ಅನುಭವ ನಂಗುಟ್ಟು. ಅವುಗಳೇ ನನ್ನ ಎಲ್ಲಾ ಕತೆಗಳಿಗೆ ಸ್ಫೂರ್ತಿ.

ಯಾವುದೇ ಭಾಷೆಲಿ ಇಲ್ಲದ ಪದಪ್ರಯೋಗ, ಅಲಂಕರಣಗ ಅರೆಬಾಸೆಲಿ ಉಟ್ಟುಂತೇಳ್ದು ನಂಗೊಂದು ಹೆಮ್ಮೆ, ಉದಾಹರಣೆಗೆ 'ಇಾಯಿಂಕ ಆದ ಹಪ್ಪಳ' ಇದ್ಕೆ ಸರಿ ಸಮ ಆದ ಪದಗ ನಂಗೆ ಇಲ್ಲಿ ಮುಟ್ಟ ಸಿಕ್ಕಿತ್ತೆ!! ಕುಂಡೋಳಿಂಜ ಕಚ್ಚಿದ ಕುಂಡತನಾಂಗೆ, ಬೈನೆ ಒಲೆಲಿ ನೇಲಿಂಡಿರುವ ಕಣ್ಡೋಳ್ ಮೂಡೆನಾಂಗೆ ಜೀಪ್‌ಲಿ ಜನ ನೇಲಿಕಂಡ್ ಹೋದೂ ಈಗ ಕಾಂಬಕೆ ಸಿಕ್ಕುದಾ? ಇಲ್ಲಿ ಇರುವ ಎಂಪಿ, ಪಾಚು

ಬರೇ ಕಥಾ ಪಾತ್ರಗ ಅಲ್ಲ, ನನ್ನ ಜೀವಾಳದ ಜೋಸ್ತಿಗ. ಮುದ್ದಣ – ಮನೋರಮೆಯರ ಹಾಂಗೆ ಪಾಚೆ–ಅಮ್ಮಣಿ ಒಂದ್ ಅನುರೂಪ ಜೋಡಿ ಅಪ್ಪೆ. ಅರೆಬಾಸೆಲಿ ಬರ್ಯಕೆ ಸುರು ಮಾಡ್ದ ಮೇಲೆ ಸಿಕ್ಕಿದ ನೆಂಟ್ರ್‌ಗ ದೋಸ್ತಿಗೆ ಅದೆಷ್ಟೋ. ಅರೆಬಾಸೆಗೆ ಯಾಗೋಳು ಬೆಂಬಲ ಕೊಡ್ತಿರುವ ಮುಡ್ಪು ಸಂಪಾದಕ ವಿನೋದ್ ಮೂಡಗದ್ದೆ, ಅವಾಗಿಯೇ ಕರ್ದ್ ಫೇಸ್ಬುಕ್ 'ಅರೆಬಾಷೆ ಗೌಡ' ಪೇಜ್‌ನ ಅಡ್ಮಿನ್‌ಶಿಪ್ ಕೊಟ್ಟ್ ಕಥೆಗಳಿಗೆ ಜಾಗೆ ಮಾಡಿ ಕೊಟ್ಟ ಮಿಥುನ್ ಬಿಲ್ಲರ, ಕಥೆ ಬರ್ಯದಿದ್ದರೆ ಕುಟ್ಟಿ ಕುಟ್ಟಿ ಹೊಸ ಕಥೆ ಹೊರ್ಡ್‌ಸಿಯೂ ಬುಟ್ಟವೆ KDK Appನ ನನ್ನ ಹಳೇ ಚಡ್ಡಿ ದೋಸ್ತಿಗ ಮಂಜು ಕುರುಂಜಿ ಮತ್ತು ಅಖಿಲ್ ಕುಂಬಳಚೇರಿ, ಹಂಗೇ ಒಳ್ದ ಅಡ್ಮಿನ್‌ಗಳೂ ಅರೆಬಾಸೆ ಬೆಳ್ಸುದರೊಟ್ಟಿಗೆ ನನ್ನ ಕಥೆಗಳಿಗೂ ಜಾಗೆ ಮಾಡಿ ಕೊಟ್ಟವು. ನನ್ನಣ್ಣ ಕುಡಕಲ್ಲು ಯಶವಂತನೇ ಈ ಅರೆಬಾಸೆ ಬರಹಗಳಿಗೆ ಮೂಲ ಸ್ಫೂರ್ತಿ. ಬರ್ದ ಪ್ರತಿಯೊಂದೂ ಪದಪುಂಜದ ಪ್ರಾಮುಖ್ಯತೆ ತಿಳ್ಸಿಕೊಡ್ದೂ ಅವನೇ, ಬರ್ದದರ ಓರೆ ಕೋರೆ ತೋರ್ಸಿಕಂಡ್ ಬರ್ಯಕೆ ಇನ್ನಸ್ಟ್ ಶಕ್ತಿ ತುಂಬಿದವು ಹೊದ್ದೆಟ್ಟಿ ಚಿದಾನಂದ ಮಾವ. ಅಂಬೆಕಲ್ಲ್ ಪುಟ್ಟಣ್ಣ ದೊಡ್ಡಪ್ಪ. ಎಷ್ಟೇ ಹಾಳ್ ಹಾಳ್ ಬರ್ದರೂ 'ಪೊವ್ವ ಆವುಟು ಬಾವ'ತ ಎತ್ತಿಕಟ್ಟುವ ಕುಂಞಿಬಾವ ಕಾರ್ತಿಕ್ ಪದೆಲ, ಮರ್ತ ಕಾಲನ ನೆಂಪುಸಿಕಾಂಬಾಂಗೆ ಮಾಡುವ ಕಿರಣ್ ಕುಂಬಳಚೇರಿ, ಪುಸ್ತಕ ಮಾಡುವ ಹುಚ್ಚ್ ಹಿಡ್ಸಿದ ಜೀವನ್ ಪುರ, ಹಂಗೇ 'ಸೂರಡಿ... ಅರೆಬಾಸೆ ಸಂಸ್ಕೃತಿನ ಮಾಡ್ ನಡಿಲಿ' ನನ್ನೊಟ್ಟಿಗೆ ಕುದ್ದ್‌ಕಂಡಿರುವ ಮನೋಜ್ ಕುಡೆಕಲ್ಲು, ಲೋಕೇಶ್ ಊರುಬೈಲ್, ಈ ಡಾಕ್ಟ್ರಗೇ ಮೊದ್ದ್ ಕೊಡುವ ಡಾಕ್ಟ್ರ ದೋಸ್ತಿ ಲಕ್ಷ್ಮೀಶ ಕಲ್ಲುಮುಟ್ಲು ಇವೆಲ್ಲವೂ ನಂಗಿಲ್ಲಿ ಪ್ರೀತಿ ಪಾತ್ರರ್.

ಸಣ್ಣದರ್‌ಂದಲೇ ಅರೆಭಾಷೆ ಪದಪ್ರಯೊಗಗಳ ಕಲ್ಸಿ ಪುತ್ತು, ಪುತ್ತುತ ಮುದ್ದು ಮಾಡ್ವ ಉಳುವಾರು ಬಾಲೆಕಿ ದೊಡ್ಡಮ್ಮ, ಯಾಗ ನೋಡ್ರೂ ನಾ ಸಣ್ಣ ಆಗಳೆತ ಹೊಟ್ಟೆ ಉರ್ಸಿಕಂಬ ಮಡ್ತಿಲ ಜಾನಕಿ ಅತ್ತೆ ಮತ್ತು ಬೆಳ್ಯಪ್ಪ ಮಾವ, ಹೆಣ್ಣ್ ಕೊಟ್ಟ್ ಬೊದ್ಕ್ ತಿಳ್ಸಿದ ಬಿಳಿಯಾರ್ ಕೃಷ್ಣಪ್ಪ ಮಾವ ಶೀಲಾವತಿ ಅತ್ತೆ, ಹೊಸ ಹೊಸ ವಿಷಯಗಳ ನನ್ನ ಗಮನಕ್ಕೆ ತರ್ತಾ ಬೊದ್ಕ್‌ಗೆ ಅಡಿಪಾಯ ತಿಳ್ಸುವ ಅಂಕಲ್ ಕುದ್ಕುಳಿ ಲಿಂಗಪ್ಪ ಮಾಸ್ತರ್ ರಮಾ ಆಂಟಿ, ನಾ ಅಳಿಯ ಆದರೂ ದೋಸ್ತಿನಾಂಗೆ ಬೆನ್ನ್ ಹಿಂದೆ ನಿತ್ತ್ ಸಾತ್ ಕೊಡುವ ರಾಜ ಮಾಮ ಹೊದ್ದೆಟ್ಟಿ ಪೆರಾಜೆ. ಮಾವ ಮಾರೀಚ ಅಳಿಯ ಕುಂಡಚ್ಚ, ತ ಹೊತ್ತ್‌ಕಂಬೊತಿದ್ದ ದೊಡ್ಡ ಮಾವ, ದೊಡ್ಡತ್ತೆ, ಶಾಲೆಮಾವ, ಮಾಮಿ, ನಮ್ಮ ಹಿರೀಕೊಂಡಿ ಸೋಮಪ್ಪ ದೊಡ್ಡಪ್ಪ ಕುಂಟುಕಾಡು ಹಂಗೇ ಕುಟುಂಬದ ಎಲ್ಲಾ ಚಿಕ್ಕಪ, ದೊಡ್ಡಪ, ಚಿಕ್ಕಮ, ದೊಡ್ಡಮಂದ್ರ್ ಮತ್ತು ಅಣ್ಣ ತಮ್ಮಂದ್ರೆಲ್ಲರ ನೆಂಪುಸಿಕಣೆ.

ಯಾರೇ ಮೀನ್, ಮಾಸ ಗಮ್ಮತ್ ಎಷ್ಟೇ ಲಾಯಕ್ ಮಾಡ್ರೂ ಇದ್ ಮಾಡ್ದಾಂಗೆ ನಂಗೆ ಓಡ್ಸಿಕೇಲೆ. ಅದುವೇ ನನ್ನಕ್ಕ ಕವನ ಚೇತನ್, ಪ್ರೀತಿಯ ಬಾವ ಚೇತನ್ ಗೌಡ ದೇವರಮನೆ, ಅಳಿಯ ಅದ್ವೈತ್ ಗೌಡ, ಅವರ ಮಕ್ಕಳಷ್ಟೇ ಲಾಯಿಕ್‌ಲಿ ನನ್ನನೂ ನೋಡಿಕಂಬ ದೇವರಮನೆ ಬೆಳಿಯಪ್ಪ ಗೌಡ ಮತ್ತು ಧರ್ಮತ್ತೆ, ಈ ಗೋಸ್ವಾರಿನ ಸರಿ ಮಾಡ್ದರ್ಲೇ ಕಾಲ ಕಳ್ದ್, ಏಗಿ, ಬೊಚ್ಚಿ ಹೋದ ನನ್ನ ಹೆಣ್ಣ್ ಪುಷ್ಪಿತಾ, ಹಂಗೇ ಇಲ್ಲಿ ಮುಟ್ಟ ಹೆತ್ತ್ ಹೊತ್ತ್ ಸಾಂಕಿ ಬೊದ್ಕ್ ಕಟ್ಟಿಕೊಟ್ಟ್, ಮಾತ್ರ್ಲೋದ ಪದಗಳ ಹುಡ್ಕಿಕೊಡ್ತಾ ಇಂದ್, ಪುಳ್ಳಿ ಹಿರಣ್ಮಯ ರಾಂನೊಟ್ಟಿಗೆ ಬಿಝೀ ಆಗಿರ್ವ ನನ್ನಮ್ಮ ಶ್ರೀಮತಿ ಲಕ್ಷ್ಮೀ ಟೀಚರ್ ಇವ್ಕೆ ನಾ ಸದಾ ಚಿರಋಣಿ. ಹಂಗೇ ಈ ಇಬ್ಬರ್ ನಮಗೆ ಪ್ರಾತಃಸ್ಮರಣೀಯರ್, ಒಂದ್ ನನ್ನಪ್ಪ ದಿ. ರಾಮಯ್ಯ ಮಾಸ್ತರ್ ಕುಂಟುಕಾಡು ಅರೆಬಾಸೆ ಕಡ್ಡಾಯ ಮಾಡಿ ನೀವ್ಗೆಲ್ಲಾ ನನ್ನ ಕೊಟ್ಟವ್, ಇನ್ನೊಬ್ಬ ಸಣ್ಣತರ್‌ಂದಲೇ ಅವರ ಪುಳ್ಳಿಕಳೊಂದಿಗೆ ನನ್ನನೂ ಒಬ್ಬತ ತಿಳ್ಕಂಡ್ ಜಾತ್ರೆಗೆ ಹೋಕೆ ದುಡ್ಡೂ ಕೊಟ್ಟ್‌ಕಂಡ್ ಸಾಂಕಿದ್ ನನ್ನೆಲ್ಲಾ ಕೆಲ್ಸಗಳಿಗೆ ಶುಭ ಹಾರೈಸಿ ಆಶೀರ್ವಾದ ಮಾಡ್ತಿದ್ದ ಅವ್ವ ಟೀಚರ್ ದಿ. ದೇವಿ ಟೀಚರ್ ಹೊದ್ದೆಟ್ಟಿ.

ನಾ ಬರ್ದದಿಕೆಲ್ಲಾ ಫೇಸ್ಬುಕ್‌ಲಿ ಲೈಕ್ ಕೊಟ್ಟ್, ಕಮೆಂಟ್ ಮಾಡಿ ತಿದ್ದಿ, ತೀಡಿ ರೂಪ ಕೊಟ್ಟ ನನ್ನೆಲ್ಲಾ ದೊಸ್ತಿಗಳಿಗೆ; ಬ್ಲಾಗ್‌ಲಿದ್ದವರ ಫೈಲ್ ಮಾಡಿ ಕೊಟ್ಟ ಸಾಗರ್ ಕಂಪ್ಯೂಟರ್‌ನವ್ಕೆ, ಪುಸ್ತಕ ರೂಪಲಿ ಹೊರತಾಕೆ ಕೈ ಜೋಡ್ಸಿದ ಎ.ಕೆ. ಹಿಮಕರ ಸಣಪ, ಮುದ್ರಣ ಮಾಡಿದ ಶ್ರೀ ಕೃಷ್ಣ ಪ್ರಿಂಟರ್ಸ್‌ನವು ಹಂಗೇ ಇಂದ್ ಈ ಪುಸ್ತಕ ಬಾಕೆ ಪ್ರಮುಖ ಕಾರಣಕರ್ತರಾದ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್, ಅಧ್ಯಕ್ಷರಿಗೆ ಮತ್ತೆ ಸರ್ವ ಸದಸ್ಯರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗ ತಿಳ್ಸಿನೆ.

– ಡಾ. ಪುನೀತ್ ರಾಘವೇಂದ್ರ ಕುಂಟುಕಾಡು

ಒಳಪುಟಲಿ

ಅರೆಭಾಷೆ...

ಅರೆಭಾಷೆ... ನಾ ಕಲ್ತ ಸುರೂನ ಭಾಷೆ.... ಅಮ್ಮ, ಅಪ್ಪ ಕಲ್ಸಿದ ಭಾಷೆ.. ಅವ್ವ, ತಾತ ಬೆಳ್ಸಿದ ಭಾಷೆ.... ನನ್ನ ಭಾವನೆಗಳ ನಾನೇ ಅರ್ಥ ಮಾಡಿಕಂಬೊದರ ಕಲ್ಸಿಕೊಟ್ಟ ಭಾಷೆ... ನಾವ್ ಎಷ್ಟೇ ದೊಡ್ಡ ಮೊನ್ಸರೇ ಆಗಲಿ, ನೂರಾರ್ ಭಾಷೆಗಳ ಕಲ್ತರೂ ನಮ್ಮೊಟ್ಟಿಗೆ ನಾವ್ ಮಾತಾಡಿಕಂಬೊದು ಕಲ್ತ ಸುರೂನ ಭಾಷೆಲೇ ಅಲ್ಲ!! ನಾವ್ ನಮ್ಮ ಮಾತೃಭಾಷೆಲಿ ಮಾತಾಡ್ಡಾಕನ ಸಮಾಜಲಿ ನಾವ್ಗೆ ಸಿಕ್ಕುವ ಗೌರವನೇ ಬೇರೆ. ಆದರೆ ಇಂದ್ ನಮ್ಮಲ್ಲಿ ಎಷ್ಟ್ ಜನ "ಅರೆಭಾಷೆ"ಲಿ ಮಾತಾಡುವೆ? ಮನೆಲಿ ಅಯ್ಯೆ, ಅಪ್ಪ ಮಕ್ಕ ಶಾಲೆಗೆ ಹೋಕೆ ಮೊದ್ಲೇ ಕನ್ನಡಲಿ ಮಾತಾಡಿಕೆ ಶುರು ಮಾಡ್ವೊ. ಇನ್ನ್ ಮಕ್ಕಳೋ... ಹೈಸ್ಕೂಲ್, ಕಾಲೇಜ್ ಮುಗ್ಸಿ ಲಕ್ಷಗಟ್ಟಲೆ ಸಂಬಳ ಹಿಡ್ದ್ ಕನ್ನಡ, ಇಂಗ್ಲೀಷ್, ಹಿಂದಿ, ತಮಿಳು, ಮಲೆಯಾಳ... ಅಷ್ಟೇ ಏಕೆ ಫಾರಿನ್ಗೆ ಹೋಗಿ ಫ್ರೆಂಚ್, ಜರ್ಮನ್ ಮಾತಾಡ್ರೂ "ಅರೆಭಾಷೆ" ಮಾತಾಡಿಕೆ ಗೊತ್ತಿರ್ದುಲೆ. ಕಾರಣ.. ನಾಚಿಕೆನಾ? ಅಲ್ಲಾ ಈ ಭಾಷೆಲಿ ನಾವ್ಗೆ ಬೊದ್ಕ್ ಕಟ್ಟಿಕಂಬಕೆ ಆದುಲೇಂತನಾ?

ಎಡ್ರೂ ಅಲ್ಲ... ನಾವ್ಗೆ ನಮ್ಮ ಭಾಷೆಲಿ ಇರುವ "ಆ ರುಚಿ" ಗೊತ್ತ್ಲೆ... ಆಳ ಗೊತ್ತ್ಲೆ... ಹಿರಿಮೆ ಗೊತ್ತ್ಲೆ...

ಕನ್ನಡ ಭಾಷೆ ಮಾತ್ರ ಅಲ್ಲ... ಹಳೆಗನ್ನಡಲೂ ಸಿಕ್ಕದ ಅದೆಷ್ಟೋ ಅಪರೂಪದ ಶಬ್ದಗ/ನುಡಿಗಟ್ಟ್‌ಗ ಅರೆಭಾಷೆಲಿ ಸಿಕ್ಕಿದೇಂತ ಹೇಳಿಕೆ ನಂಗೆ ಗರ್ವ ಆದೆ.

ಕನ್ನಡ ಭಾಷೆಲಿ ಹೆಚ್ಚ್ ಕಮ್ಮಿ ಮಾಯನೇ ಆಗಿರುವ 'ಙ, ಞ' ಪದಗ ಇಂದ್ ಜೀವಂತ ಒಳದ್ ಅರೆಭಾಷೆಂದಲೇತೇಂಳಿಕೆ ಹೆಮ್ಮೆ ಆದೆ. ಅವುಗಳ ಪರ್ಚಯ ಮಾಡಿಕೆ/ ಅರೆಭಾಷೆನ ಒಳ್ಸಿ, ಬೆಳ್ಸಿ ನನ್ನ ಮುಂದೆನ ಜನಾಂಗಕ್ಕೂ ತಿಳ್ಸಿಕೆ ನಾ ಶುರು ಮಾಡ್ತಿರುವ ಸಣ್ಣ ಪ್ರಯತ್ನನೇ.. ಈ ಬ್ಲಾಗ್ "ಮಿಣ್ಪುಳಿ". ನಮ್ಮಲ್ಲಿ ಎಷ್ಟೋ ಹೈದ, ಗೂಡೆಗಳಿಗೆ "ಮಿಂಚು ಹುಳ"ಕ್ಕೆ "ಮಿಣ್ಪುಳಿ" ಹೇಳುವೇಂತ ಕೇಳಿಯೇ ಗೊತ್ತಿರಿಕಿಲೆ. ಅಮವಾಸ್ಯೆ ಕತ್ತಲೆಲಿ ಮಿಣ್ಪುಳಿಗ ಎಲ್ಲಾ ಒಮ್ಮೆಗೆ ಹೊಳ್ಯಕಾಕನ ನಾವು ಕಾಂಬ ಲೋಕನೇ ಒಂದ್ ಬೇರೇ... ಅದ್ ಒಂಥರಾ ಸ್ವರ್ಗ... ಆಗ ನಮ್ಮ ಸುತ್ತ ಎಷ್ಟೇ ಕತ್ತಲೆ ಇದ್ದರೂ ಆ ಕತ್ತಲೆ ಒಳಗೆ ಇರ್ವ ಎಲ್ಲಾ ವಸ್ತುಗ ಒಮ್ಮೆ ಕಂಡವೆ. ಹಂಗೇ ಈ ಕಥೆಗ ಕೂಡ.... ಅರೆಭಾಷೆಲಿ ಬರ್ದದರ ನಾವ್ ಓದ್ಯಾಕನ ಸಿಕ್ಕುವ, ನಮ್ಮೊಳಗೆ ಅಣ್‌ಂಗಿರುವ ಒಂದ್ ಮನಸ್ಸಮಾಧಾನ, ಸಂತೋಷ... ಅದರ ಬರೇ ಹೇಳಿಕಾಕಿಲೆ... ಸ್ವತಃ ಅನ್ಭವ್ಸೋಕಷ್ಟೆ. ಅದ್ ನಾವ್ ಯಾವ್ದೇ ದೊಡ್ಡ ಇಂಗ್ಲೀಷ್ ಕಾದಂಬರಿಗಳ ಓದಿರೂ ಸಿಕ್ಕುದ್ದೆ!!

ಸರ್ವಜ್ಞ ಬರ್ದ ಒಂದ್ ವಚನ ನೆನ್ಪಾದೆ...
ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ
ಬಲ್ಲವಿಲ್ಲ ಬಲ್ಲವರಿದ್ದು
ಸಾಹಿತ್ಯ ಎಲ್ಲರಿಗಲ್ಲ ಸರ್ವಜ್ಞ!!

ಈ ವಚನದಾಂಗೆ ನಂಗೆ ಗೊತ್ತಿದ್ದದ್ ನನ್ನೊಟ್ಟಿಗೇ ಮೊಣ್ಣಾಗಿ ಹೋಕೆ ಬೊತ್ತ್‌ತೇಂಳುವ ಸಣ್ಣ ಆಸೆ ನಂಗೆ. ಕತ್ತಲೆ ಒಳಗೆ ಮಾಯ ಆಗಿ ಹೋದದರ ಮತ್ತೆ ತೋರ್ಸುವ "**ಮಿಣ್ಪುಳಿ**" ನಾಂಗೆ, ಮರ್ತ್ ಹೋದ ಶಬ್ದಗಳ ವಾಪಸ್ ಪರ್ಚಯಿಸಿ, ಕಳ್ದ್ ಹೋದ ಕತೆಗಳ ಪುನಃ ನೆನ್ಪುಸಿ ಅರೆಭಾಷೆನ ಒಳ್ಸಿ, ಬೆಳ್ಸುವ "**ಅರೆಭಾಷೆ ಕಥೆಗಳ ಜೊಂಗೆ (ಗೊಂಚಲು)**" ಆಗಿ ಬರ್ಲೀಂತ ನನ್ನ ಬಯ್ಕೆ. ತಪ್ಪಿದ್ದಲ್ಲಿ ತಿಳ್ಸಿ, ನಾವ್ ತಪ್ಪುಗಳಂದಲೇ ಕಲಿಯೊದು ಅಲ್ಲ?? ನಾ ಬರ್ದ ಎಲ್ಲಾ ಬರಹಗಳಿಗೆ ನಿಮ್ಮೆಲ್ಲರ ಆಶೀರ್ವಾದ, ಶುಭಹಾರೈಕೆ ಯಾಗೋಳು ನನ್ನೊಟ್ಟಿಗೆ ಇರ್ಲೀಂತ ಕೈಜೋಡ್ಸಿ ಕೇಳಿಕಣೆ.

* * * *

ಕುಂಞಿ ಮೋನುನ ಚಾಮಿ!!!

ಅರೆಭಾಷೆ ಗೌಡ್ರ್‌ಗಳ್ಲಿ "ಕುಂಞಿಮೋನು" ಅಂತ ಸಣ್ಣ ಹೈದಂಗಳ ಕರಿದು ಸಾಮಾನ್ಯ. ಅದಲ್ಲೂ ಗುಂಡು ಗುಂಡಂಗೆ ಇದ್ದ್ ಇಟ್ಟಿ ರೆಟ್ಟಿದಾಂಗೆ ರೆಟ್ಟಿಕಂಡಿರುವ ಉರಿಕೊಳ್ಳಿ ಹೈದಗಳಿಗಂತೂ ಅಜ್ಜಿಕ ಇದೇ ಹೆಸ್ರುಲೇ ಕರಿದು.

"ಕುಂಞಿಮೋನು" ಮೂಲತಃ ಮಲ್ಯಾಳಂದ ಬಂದ ಪದ ಆದರ್‌ಂದ ಮಲ್ಯಾಳ ಜಾಸ್ತಿಇದ್ದ ಕಡೆನ ಗೌಡ್ರ್‌ಗ ಜಾಸ್ತಿ ಬಳ್ಸುವೆ. "ಸಣ್ಣ ಹೈದ" ಇದರ ಅರೆಭಾಷೆ ಅರ್ಥ. ಅಜ್ಜಿಕ ಎಲ್ಯಾಡಿಕೆ ಗುದ್ದಿಕಿದ್ದರೆ, ನೆಶ್ಯೆ ಡೊಬ್ಬಿಗೆ/ಬುರ್ಡೆಗೆ ಹೊಡಿ ತುಂಬುಸಿಕೆ ಇಲ್ಲರೆ ಮಡೆಗುತ್ತಿ ಸೂಸಿಕೆ... ಹಿಂಗೇ ಏನಾರ್ ಹೊಡಿಪೊಡಿ ಕೆಲ್ಸಗ ಇದ್ದರೆ "ಕುಂಞಿ ಮೋನೇ..." ತೇಳಿ ಮೋಕೆಲಿ ಕರಿದೂ ಉಟ್ಟು!! ಹಂಗೇ ಈ ನಮ್ಮ ಕುಂಞಿ ಮೋನುನೂ ಭಾರೀ ಕೊಂಡಾಟದ ಅಜ್ಜಿ ಪುಳ್ಳಿ. ಮನೆಲಿ ಅಂವನ ಉಪದ್ರ ತಡ್ಯಕೆ ತೀರದೆ ಅಪ್ಪ ತ್ಯಾಂಪಣ್ಣ ಅಂಗನವಾಡಿಗೆ ಎಳ್ಕಂಡೋಗಿ ಬುಟ್ಟರೆ ನೋಡಿ.... ನಾಕೇ ದಿನ... ಒಂದಿನ ಮಧ್ಯಾಹ್ನ ಅಂಗನವಾಡಿ ಟೀಚರೇ ಇವನ ಕರ್ಕಂಡ್ ಬಂದ್ "ನೋಡಿ ತ್ಯಾಂಪಣ್ಣ... ನಿಮ್ಮ ಮಂಜನ ದೆಸೆಂದ ನಾ ಗದ್ದೆ ಪುಣಿಲಿ

ರೆಟ್ಟೆಬೀಳದ್ ಪುಣ್ಯ!! ನನ್ನ ಚಪ್ಪಲ್‌ನ ಬಾರ್ ಜಾರ್ಸಿಸಿಟು!! ಉರಿಕೊಳ್ಳಿ... ಮೊನ್ನೆ ಉಚ್ಚೆಹೊಯ್ಯಕೆ ಬುಟ್ಟರೆ ಮಾದಣ್ಣನ ಮಂಜನ ಚಡ್ಡಿ ಒಳಗೆ ಚೌಳಿ ಹಿಡ್ದ್ ಹಾಕಿಟು!! ಮಕ್ಕಳ ಸ್ಲೇಟ್‌ಗಳ ಮೇಲೆ ಕುದ್‌ಕುದ್ದ್ ಎಲ್ಲಾ ಹೊಡಿ ಹೊಡಿ!! ನಿನ್ನೆ ಅಂಗನವಾಡಿನ ಒಲೆಗೆ ಒಂದ್ ಪಾಟೆ ನೀರ್ ಹೊಯಿದಿಸಿ, ನಾ ಮತ್ತೆ ಮನೆಲಿ ಸಜ್ಜಿಗೆ ಬೇಸಿಕಂಡ್ ಬಂದದ್ ಗೊತ್ತುಟಾ? ನಿಮ್ಮ ಕಾಲ್ ಬೇಕರೆ ಹಿಡ್ಕಣೆ. ದಮ್ಮಯ್ಯ... ಇನ್ನ್ ಮೇಲೆ ಅಂಗನವಾಡಿಗೆ ಮಾತ್ರ ಇಂವನ ಕಳ್ಸುದು ಬೇಡ!!" ಹೇಳಿ ಅಪ್ಪನ ಕೈಗೆ ಮಂಜನ ಒಪ್ಪುಸಿ, ಕೊಟ್ಟ ಮೊಜ್ಜಿಗೆ ನೀರ್‌ನೂ ಕುಡಿಯದೆ ಸೇಂಕ್ಯಂಡ್ ಬುಕ್ಯಂಡ್ ಓಡ್ಯೋಳೊ. ತ್ಯಾಂಪಣ್ಣನ ಅವ್ವ ತಂಗಮ್ಮಕ್ಕಂಗೂ ಪುಳ್ಳಿ ಮನೇಲಿ ಇದ್ದರೆ ನಂಗೂ ಆರಾಮತನೆನ್ಸಿ "ಆ ಕೂಸುನ ನಾ ನೋಡಿಕಣೆ ತ್ಯಾಂಪ"ತೇಳಿ ಕುಂಞಿ ಮೋನುನ ಮನೆಲೇ ಒಳ್ಸಿಕಂಡೊ. ಮನೆಲಿರುವ ಹೈದಂಗೆ ಇನ್ನೇನ್ ಕೆಲ್ಸ....ಕಾಪು ಕುದ್ದ ಹೇಂಟೆನ ಕುಂಡೆ ಪೊಕ್ಕುಸಿ ಪಿಳ್ಳೆಬಂದುಟಾಂತ ನೋಡ್ದು, ನಾಯಿ ಮೊರಿಗಳ ನೀರಡಿ ಕೊಟೆಗೆಗೆ ತಕಂಡೋಗಿ ಮೀಂವ ನೀರ್ ಅಂಡೆಗೆ ಕಂತ್ಸಿ ತೆಗಿದು, ಅಜ್ಜಿ ಹೊಯಿದ ಮಾಂಬಳಕ್ಕೆ ಕುಂಡತ ಬರದಾಂಗೆ ನೋಡಿಕಂಬೊದು... ಇದೇ.. ಅದರೊಟ್ಟಿಗೆ ಒಂದು ಹೊಸಾ ಆಸೆ... ದೊಡ್ಡ ಹುಂಜನ ಗೈಪು ಮಾಡ್ರೆ ತಿಂಬಕೆ ಕರಿಯಡ ಸಿಕ್ಕುದಲ್ಲಾತ!! ಅವ್ವನೊಟ್ಟಿಗೆ ಅದರ ಆಚೆ ವರ್ಷ ಜಾಂಡಿಸ್ ಆಗಿ, ಬೊದ್ಕಿರೆ ಸಾಕ್‌ತಿರ್ಕಾಕನ.. ತಂಗಮ್ಮಕ್ಕನೇ ತ್ಯಾಂಪಣ್ಣನೊಟ್ಟಿಗೆ ಹರ್ಕೆ ಹಾಡ್ ಹೇಳ್ಸಿ ಕಲ್ಲುರ್ಟಿಗೆ ಕೋಲ ಕೊಟ್ನೇಂತ ಹೇಳಿ ಒಳ್ಸಿಕಂಡದ್.

'ಈ ಹೈದಂಗೆ ಅದರ ಮೇಲೇ ಕಣ್ಣ್ ಬೀತ್‌ತೇಳ್ರೆ ಇದ್ ಬೇರೆಂತದೂ ಅಲ್ಲ. ಕಲ್ಲುರ್ಟಿದೇ ಕೆಲ್ಸ!!' ಮಂಜಂಗೆ ಪರ್ರಾಂಚಿ ಜೋರ್ಮಾಡಿ ಅಜಲನಕ್ಕಲೆ, ವಾಲಗದವರಕ್ಕಲೆ ಬೆರ್ಸಿ ಕೋಲಕ್ಕೆ ದಿನ ನಿಗಂಟ್ ಮಾಡ್ದೊ. ಕುಂಞಿ ಮೋನುಗೆ ಚಾಮಿ ನೋಡಿಕ್ಕೆ ಉಟ್ಟೂತ ಪುಸಲಾಯ್ಸುದರೊಟ್ಟಿಗೆ ಕೋಳಿ ಗೈಪೂ ಮಾಡುವೆತ ಆಸೆನೂ ಹುಟ್ಟುಸಿದೊ. ಈ ಹೈದಂಗೆ ಚಾಮಿ ತೇಳ್ರೆ ಗೊತ್ತಿಲ್ಲದಂವ ಕೋಳಿ ಗೈಪು ಸಿಕ್ಕಿದೆತ ಕೊಣಿಯಕೆ ಸುರು ಮಾಡ್ತ್!!

ನಿಗಂಟ್ ಆದ ದಿನಕ್ಕೆ ನಾಕ್ ದಿನ ಇರ್ಕಾಕನೇ ಕೆಳಗೆ ಬೈಲ್ ಹೈದಂಗಳ ಕರ್ಕಂಡ್ ಬಂದ್ ಚಪ್ಪರ ಹಾಕ್ಸಿ, ಅಂಗಳ ಗುಡ್ಸಿ ರೆಡಿ ಮಾಡ್ಸಿತ್ ತ್ಯಾಂಪಣ್ಣ. ದೆವ್ವದ ದಿನ ಮನೆಲಿ ಜನನೋ ಜನ. ಉಗ್ಗವ್ವ, ದೊಡ್ಡಂವ್ವ, ಚಿಕ್ಕಂವ್ವ, ಸಂಣ್ಣವ್ವ, ದೊಡ್ಡತ್ತೆ, ಸಣ್ಣತ್ತೆ, ಕುಂಞತ್ತೆ, ಶಾಲೆತ್ತೆ, ಉಗ್ಗಪ್ಪ, ಸಂಣ್ಣಪ್ಪ, ಕುಂಞಪ್ಪ, ದೊಡ್ಡ

ಮಾವ, ಕುಂಞಿ ಮಾವ, ಶಾಲೆ ಮಾವ... ಎಲ್ಲರ ನೋಡಿ ಹೈದ ಕೊಣ್ಣಾದ್ದುಟ್ಟು (ಇಂದ್‌ನ ಮಕ್ಕಳಿಗೆ ಇವರೆಲ್ಲರ ಕಾಂಬ ಭಾಗ್ಯನೇ ಇಲ್ಲೆ. ಬರೇ ಅಂಕಲ್, ಆಂಟಿ!!) ಕತ್ತಲೆ ಆಕನ ದೆವ್ವದ ಕೊಣ್ತ ಸುರು. ಕುಂಞಿಮೋನುಗೆ ಇದ್ ಹೊಸಾ ಅನುಭವ!! ದೆವ್ವ ಕಣ್ಣ್ ಹೊರ್ಳ್‌ಸಿ ಸೂಟೆನ ಎದೆಗೆ ಹಿಡ್ದರ ನೋಡಿ ಹೆದ್ರಿಕಂಡೇ ಅವ್ವನ ಸೆರ್‌ಂಗ್ ಎಡೇಂದ ನೋಡಿ ಚಾಮಿಗೆ ಭಯಂಕರ ಶಕ್ತಿ ಉಟ್ಟೂತ ನೆನ್ಸಿತ್. ದ್ಯಾಪು ಚಿಕ್ಕನ ದರ್ಶನ ನೋಡಿ ಆ ನಂಬಿಕೆ ಇನ್ನೂ ಜಾಸ್ತಿ ಆಗುಟ್ಟು. ಅದ್ರೊಟ್ಟಿಗೆ ಇಷ್ಟ್ ದಿನ ದೇವ್ರ ಕೋಣೆಲಿ ಮುಡ್ಡು ಕರೆಲಿ ಇದ್ದ ಬೆಳ್ಳಿ ಕಟ್ಟ್‌ನ ಬೆತ್ತ ದೆವ್ವದ ಕೈಲಿ ನೋಡಿ "ಚಾಮಿ ಯಾಗೊಳು ಮನೆ ಒಳಗೇ ಇದ್ದದೆನಾಂತ" ಆಶ್ಚರ್ಯನೂ ಆತ್. ಚಪ್ಪರದಡಿಲಿ ಕುದ್ದ ಹೆಮ್ಮಕ್ಕಳ್ದ್, ಅಜ್ಜಿಕಳ್ದ್ ಮಾತೇ ಮಾತ್. ಅದೇ ಹಳೇ ಪಂಡ್‌ನ ಕಟ್ಟೆಪುರಾಣ!! ದೆವ್ವ ಏನ್ ಹೇಳ್ರೂ ಯಾರಿಗೂ ಕೇಳ್ತನೇ ಇಲ್ಲೆ. ಕಡೆಗೆ ದೆವ್ವ ಕಟ್ಟಿದಂವನೇ ಅವರೆಲ್ಲಾ ಸುಮ್ಮನೆ ಇರಿಕೆ ಹೇಳಿ, ಇವನ ಕೈಲಿ ಬೆತ್ತ ಇಸಿ..

"ಅಪ್ಪೆನ ಪಿರವು ಬಾಲೆ ಬತ್ತಿನ ಲೆಕ್ಕ, ಪೆರ್ಗ್‌ದ ಪಿರವು ಕಿನ್ನಿ ಬತ್ತಿನಲೆಕ್ಕ, ಪೆತ್ತದ ಪಿರವು ಕಂಜಿ ಬತ್ತಿನ ಲೆಕ್ಕ, ಸೂಜಿದ ಪಿರವು ನೂಲು ಬತ್ತಿನ ಲೆಕ್ಕ ಬತ್ತ್‌ತ್ ಗೆಂಡದ ಬರ್ಸೊಗೊ ಕರ್ಬದ ಕೊಡೆ ಆತ್ ಉಂತುದು ಕಾತೊನ್ವೆ.. ಭಯ ಬೋಡ್ಚಿ, ಭಯ ಬೋಡ್ಚಿ!!"

(ಅಮ್ಮನ ಹಿಂದೆ ಕೂಸು ಬಂದಾಂಗೆ, ಹೇಂಟೆನ ಹಿಂದೆ ಪಿಳ್ಳೆಗ ಬಂದಾಗೆ, ಹಸ್‌ನ ಹಿಂದೆ ಕರ್ ಬಂದಾಂಗೆ, ಸೂಜಿನ ಹಿಂದೆ ನೂಲ್ಬಂದಾಂಗೆ ಬಂದ್ ಕೆಂಡದ ಮಳೆ ಬಾಕನ ಕಬ್ಬಿಣದ ಕೊಡೆ ಆಗಿ ನಿತ್ತ್ ಕಾಪಾಡ್ನೆ. ಭಯ ಬೇಡ, ಭಯ ಬೇಡ!!) ದೆವ್ವ ಹೇಳ್ದ್... ಇವಂಗೆ ಏನೊಂದೂ ಅರ್ಥ ಆಗದಿದ್ದರೂ ಚಾಮಿ ಮಾತ್ರ ಒಂದ್ ಅಭೂತ ಶಕ್ತಿತ ಮನ್ಸ್‌ಗೆ ಬಂದ್ ಭಯ, ಭಕ್ತಿಲಿ ಕೈಮುಗ್ತ್ ಕುಂಞಿಮೋನು.

ದೆವ್ವ ಬಂದ ನೆಂಟ್ರ್‌ಗಳ, ಕೊಟ್ಟ ಹೆಣ್ಮಕ್ಕಳ್ಗೆಲ್ಲಾ ಅಭಯ ಕೊಟ್ಟ್ ಪಿರ್ದ್‌ದ್, ದೆವ್ವದ ಭಂಡಾರ ಒಳಗೆ ಎತ್ತಿ ಇಸಿದೊ. ಕೆಲವು ಗಂಡ್‌ಸರ್ ಸಿಗ್ದ ಕೊಮ್ಮುನ ದಂಬೆಗಳ ಇಜ್ಜಲ್‌ಗೆ ಹಾಕಿ ಉಂಬಕೆ ಕುದ್ರಿಕೆ ರೆಡಿ ಮಾಡ್ರೆ ಕೆಲವು ಅಜ್ಜಂದ್ರ್ ಕೋಲದ ಬಗ್ಗೆ ಚರ್ಚೆಲೇ ಮುಳ್ಗ್ಯೊಳೊ... ಮತ್ತೇನಿಲ್ಲೆ.... ವಾಲಗದಂವ 'ಪೆಪೇಂ... ಪೇಪೇಂಪೇ...ಪೇ' ಊದುದು ಬುಟ್ಟು 'ಪೇಪೇಪೇಪೇ... ಪೇಂಂ...' ಊದಿತ್‌ಂತ ಇವ್ಕೆ ತಲೆಬಿಸಿ!!! (ಒಳಗೆ ಹೋದ ಅಮೃತನೂ ಕೆಲ್ಸ ಮಾಡ್ತುಟ್ಟೂಂತ

ಅವ್ಕಷ್ಟೇ ಗೊತ್ತು!!!) ಹೈದ ಕೋಳಿಗೈಪುನ ಆಸೆಗೆ ಎಲ್ಲರೊಟ್ಟಿಗೆ ಉಂಬಕೆ ಕುದ್ದ್ ಕರೆಲಿ ಚುರ್ಕರ ಕುಂಡೆ ಊರ್ದ ಕುಂಞಪ್ಪನೊಟ್ಟಿಗೆ ಬಾಳ್ಗೆ ಕಿಳ್ಳಿನೂ ಕಟ್ಟ್‌ಸಿ ಕಂಡತ್!! ಚೂರ್ ಹುಗ್ಗೆನೂ ಇಕ್ಕಿದ್ ಕೋಳಿ ಗೈಪುನೂ ಇಕ್ಕಿದೊ. ಕರಿಯಡ ತಿಂಬ ಆಸೆಲಿದ್ದ ಕುಂಞಿಮೋನು ಬಾಳ್ಗೆ ನೋಡ್ರೆ ಅಲ್ಲಿ ಎಂತ... ಕೊಡ್ಕಿ ಕೊಡ್ಕಿ ಇಕ್ಕಿದ್ ಒಂದ್ ಮುಲ್ಲೆಗೆಂಡೆನೂ... ರೆಂಕೆ ಕೊಂಡಿಮಾತ್ರ!!

(ನಾಳಿತುಂಡ್, ಎಲುಗಂಟ್ ಅಂತೂ ಗೈಪು ಇಕ್ಕಂವ ಹೈದ ತಿಂಬಕಿಲೇಂತ ಸೌಂಟ್‌ಗೆ ಬಂದದನ್ನೂ ಅತ್ತಲೇ ಮೊಗ್ಚಿಕಂಡುಟು!!). ಇವಂಗೆ ಬೇಜಾರಾಗಿ, ಕಣ್ಣ್‌ಲಿ ನೀರ್ ತುಂಬುಸಿಕಂಡ್ ಬೊಬ್ಬೆ ಹೊಡ್ದರೆ ಉಟ್ಟಲ್ಲಾ... ಎಂತಾತ್... ಎಂತಾತ್‌ತ... ಅತ್ತೆಕ.... ಅಯ್ಯೆಕ ಎಲ್ಲವೂ ಬಂದ್ ಎತ್ತಿದೊ... ಹೈದ ಕಣ್ಣ್ ಒರ್ಸಿಕಂಡ್ ಒಂದೇ ಪದ...

"ನಂಗೆ ಕರಿಯಡ ಬೇಕೂಊಊಊ!!". ತಂಗಮ್ಮಕ್ಕ 'ನಾಳೆ ಇನ್ನೊಂದ್ ಕೋಳಿನ ಗೈಪು ಮಾಡೊನೊ' ತೇಳ್ರು ಹೈದ ಮರ್ದಟ ನಿಲ್ಸುದೇಲೆ.. ಅಂಗಳಲೇ ಹೊಣ್ಕಿ ಹೊಣ್ಕಿಮರ್ಟದೆ.. ನಮ್ಮ ಉರಿಯೋಳು!! ಕಡೆಗೆ ಪೂಜಾರಿ ದ್ಯಾಪಣ್ಣ ದೆವ್ವಕೆ ಇಕ್ಕಿದ ಅಗೆಲ್‌ಲಿದ್ದ ಕರಿಯಡ ತುಂಡುನೂ, ಹನೀಸ್ ಚೂರ್ ರೊಟ್ಟಿನೂ ಕೊಟ್ಟಮೇಲೆ ಅಳ್ಗೆಲ್ ನಿಲ್ಸಿತ್. ಉಂಡ್ ಮಲ್ಗಿರೂ ಕುಂಞಿಮೋನುಗೆ ತಲೆಲಿ ಏನೇನೋ ಪ್ರಶ್ನೆಗ... 'ಚಾಮಿ ಹಗ್‌ಲ್ ಎಲ್ಲಿದ್ದದೆ? ಕತ್ತಲೆಗೆ ಎಲ್ಲಿ ಮಲ್ಗಿದೆ? ಚಾಮಿನ ಮನೆ ಎಲ್ಲಿ? ಅದರ ಬಣ್ಣ ಕಪ್ಪು ಯಾಕೆ? ಅದ್ ಯಾವುದೋ ಭಾಷೆಲಿ ಮಾತಾಡ್ದು ಯಾಕೆ? ಚಾಮಿ ಪೊಪ್ಪನಾಂಗೆ ಕಂಬೈಯಾಕೆ ಉಡ್ತುಲೆ? ಅದ್ಕೆ ಅಮ್ಮ, ಪೊಪ್ಪ ಯಾರೂ ಇಲ್ಲೆನಾ? ಕಿಚ್ಚಿನ ಎದೆಗೆ ಹಿಡ್ಯಕಾಕನ ಹೊತ್ತುದ್ಲೆನಾ? ಅಂತೂ ಕರಿಯಡ ನಂಗೆ ಸಿಕ್ಕಿತ್.... ಹೆಚ್ಚಿನಂಶ ಚಾಮಿಗೆ ಹೊಟ್ಟೆ ಇಸ್‌ತಿತ್ಲೆ ಕಂಡದೆ...' ಹಿಂಗೇ ಅವನ್ದೇ ಪ್ರಶ್ನೆಗಳಿಗೆ ಅವನೇ ಉತ್ತರ ಕೊಟ್ಟ್‌ಕಂಡಿರ್ಕಾಕನ ಹೊರಗೆ ಜಿರಿಜಿರಿ ಸದ್ದ್‌ಲಿ ಏನೋ ಗೆಜ್ಜೆ ಸದ್ದ್ ನಾಂಗೇ ಕೇಳಿ... ಚಾಮಿ ಪುನಃ ಬಾತ್‌ತ ನೆನ್ಸಿ.... ಹೆದ್ರಿ ಅವ್ವನ ತೊಬ್ಬಿ ಹಿಡ್ದ್ ಕಣ್ಣ್ ಮುಚ್ಚಿ ಮಲ್ಗಿದ ಹೈದಂಗೆ ನಿದ್ದೆ ಹತ್ತಿದೇ ಗೊತ್ತಾತ್ಲೆ.

* * * *

ಪುಂಡುನ ಗೂಡೆ ಪದ್ರಡ್ ಗಡ!!!

ಕೆಲವೊಮ್ಮೆ ಏನೋ ಮಾಡಿಕೆ ಹೋಗಿ ಏನೇನೋ ಆದೆ. ಗಣಪತಿನ ಮಾಡಿಕೆ ಹೋಗಿ ಅವನ ಅಪ್ಪನ ಮಾಡ್ದ ಹಾಂಗೆ!!! ಪೂರ್ತಿ ಮೊರ್ಲರ ಬೇಕರೂ ಒಂದ್ ನಮೂನೆಗೆ ಸರಿಮಾಡಕ್. ಆದರೆ ಈ ಅರೆ ಮೊರ್ಲರ ಸರಿ ಮಾಡ್ದು ಭಾರೀ ಭಂಗ!!! ಹಂಗೇ ಇಲ್ಲೊಬ್ಬ ಅರೆಮೊರ್ಲನೇ ನಮ್ಮ "ಪುಂಡು". ಪುಂಡಿವುನೆ ನಾರ್ಣಣ್ಣನ ಕಡೇ ಮಂಜ. ಮೇಲೆಂದ ಮೇಲೆ ಸಾಲಾಗಿ ಐದ್ ಹೆಣ್ಣ್ ಮಕ್ಕಳೇ ಆದದರ ಕಂಡ್ ನಾರ್ಣಣ್ಣಂಗೆ ಭಾರೀ ಬೆಚ್ಚಲಿತ್ತ್. ಧರ್ಮಸ್ಥಳ, ಸುಬ್ರಹ್ಮಣ್ಯ ಎಲ್ಲಾ ಸುತ್ತಿ, ಕಂಡ ಕಂಡ ದೇವ್ರುಗಳಿಗೆಲ್ಲಾ ಹರ್ಕೆ ಹೊತ್ತ್ ಕಡೆಗೆ ದೇವ್ರ್‌ಗಳಿಗೇ ಇವನ ಉಪದ್ರ ತಡೆಯಕೆ ಬೊತ್ತದಾಗಿಯೋ ಏನೋ ಕೊಟ್ಟ ಒಂದ್ ಕಿಳೆ ಮೊರಿ ಕೊಳ್ಳಿ ಕುಮಾರನೇ ಈ ಪುಂಡು. ಅದರ್‌ಂದಾಗಿಯೋ ಗೊತ್ಲೆ ಹೈದನ ಕಣ್ಣ್ ಚೂರ್ ಕೋಸ್, ತಿರ್ರ್‌ಂಟೆಲ್ ಕೆಬಿ ಒಟ್ಟಿಗೆ ಎಡ್ದ ಕಾಲ್ ಚೂರ್ ಚೊಟ್ಟೆ, ನಡ್ಯಕಾಕನ ಚೂರ್ ಏಂಟಿಕಂಡೇ ನಡಿದು. ಇನ್ನ್ ಮಾತ್ ಮಾತ್ರ... ಅಹಾ... ಸೂಪರ್... ಕೊಂಞಿ... ಕೊಂಞಿ... ಕೊಂಞ್ಞೀ!!! ಒಬ್ಬನೇ ವುಂಜಾಂತ

ಮನೆಯವೆಲ್ಲಾ ಮೋಕೆಲೇ ಸಾಂಕಿದೊ. ತಿಂಬಕೆ ಕುಡಿಯಕೆ ಬಿಣ್ಣರಬಿಕ್ಕರ ಬೇಕಾದಾಂಗೆ ಬಗೆ ಬಗೆ ಮಾಡಿ ಅಯ್ಯೆ ಇಕ್ಕಿರೆ, ಅಕ್ಕಂದ್ರ್ ಇವಂಗೆ ಕುಂಡೆ ಪೊಕ್ಕ್‌ಸಿ ಒಂದೂ ಕೆಲ್ಸ ಮಾಡಿಕೆ ಬುಡಿಕಿಲೆ. ಹಂಗಾಗಿ ಪುಂಡುನ ಪ್ರಾಯದೊಟ್ಟಿಗೆ ದೇಹ ಬೆಳ್ತಷ್ಟೇಹೊರ್ತ್ ಬುದ್ಧಿ ಮಾತ್ರ ಬೆಳ್ತೇಲೆ!!!

ನಾರ್ಣಣ್ಣಂಗೂ ಪ್ರಾಯ ಆಕಂಡ್ ಬಾತ್. ಮುನ್ನೂರು ಮುಡಿ ಗದ್ದೆ, ಇಪ್ಪತ್ತೈದ್ ಖಂಡಿ ಅಡ್ಕೆ, ಕೆಲ್ಸದವರೆಲ್ಲಾ ನೋಡಿಕಂಬೊದು ಇನ್ನ್ ಇನ್ನ್ ಆಕೇಲೇ. ಈ ಪುಂಡುಗೋ ಗದ್ದೆ ಪುಣಿಲಿ ನಡ್ದ್ ಹೋಗಿಯೇ ಗೊತ್ಲೆ. ಇನ್ನ್ ಬೇಸಾಯ ನೋಡಿಕಂಬೊದೆಲ್ಲಿಂದ??!! ಆಗ ಹೊಳ್ದ ಐಡಿಯಾನೇ ಮಂಜಂಗೆ ಮೊದ್ವೆ ಮಾಡ್ದೂಂತ.. ಹುಚ್ಚು ಬುಡದೆ ಮೊದ್ವೆ ಆಕಿಲೆ.. ಮೊದ್ವೆ ಆಗದೆ ಹುಚ್ಚು ಬುಡಿಕಿಲೆ ಎಂಬಾಂಗೆ!! ಹಂಗಾರ್ ಜವಾಬ್ದಾರಿ ಬಾದೂಂತ ಆಸೆ. ಸುಮಾರ್ ಕಡೆಹುಡ್ಕಿ ಕಡೆಗೆ ಚಾಳೆ ಅಡಿ ಸೇಸಪ್ಪನ ಎರಡ್ನೇ ಮಗ್ಳ್ "ಚಾಮುಣಿ"ನೊಟ್ಟಿಗೆ ನೆಂಟಸ್ತಿಕೆ ಗಟ್ಟಿ ಆತ್. ಸೇಸಪ್ಪನೂ ನಾಕ್ ಹೆಣ್ಣ್ ಮಕ್ಕಳ ಅಪ್ಪ. ಮಕ್ಕಳಿಗೆ ಗಂಡ್ ಹುಡ್ಕಿ ಹುಡ್ಕಿ ಸಾಕಾಗಿ ಹೆಂಗಿದ್ದರೂ ಆಸ್ತಿ ಬೊದ್ಕ್ ಧಾರಾಳ ಉಟ್ಟುಂತ ಒಮ್ಮೆ ಇದ್ ದಾಟ್ರೆ ಸಾಕ್‌ತೇಳಿ ಬೊಯಿದ್ ಮಗಳ ಮೊದ್ವೆಗೆ ಒಪ್ಪ್‌ಸಿತ್. ಸುತ್ತ ಹತ್ತೂರ್‌ಲೇ ಇಲ್ಲದ ಭಾರೀ ಗೌಜಿನ ಮೊದ್ವೆ, ಹತ್ತು ಕುಟುಂಬ ಹದಿನೆಂಟ್ ಗೋತ್ರದ ಬಂಧು ಬಾಂಧವರು ನೆಂಟರಿಷ್ಟರು ಮುಂತಾದ ಸ್ವಜಾತಿ ಗೃಹಸ್ಥರು ಸೇರ್ದಲ್ಲಿಂದ ಕೈಯೆತ್ತಿ ಕನ್ಯಾಧಾರೆ ಹೊಯ್ಸಿ ಚಾಮುಣಿ ಎಂಬ ಸೊಸೆನ ಮನೆ ಸೇರ್ಸಿಕಂಡೋ ನಾರ್ಣಣ್ಣ. ಗೂಡೆ ಸುಮಾರಾಗಿ ಲಾಯಿಕ್ಕೇ ಇದ್ದರೂ, ಅದ್ಕೆ ಅಡಿ ಪೊಡಿನೂ ಒಂಬದ ಹೈದ ಪುಂಡು!! ಆದರೂ ಬಂದವೆಲ್ಲಾ 'ದೊಡ್ಡವರ ಮೊದ್ವೆ ಅದೆಲ್ಲಾ ನೋಡಿಕುಟ್ಬಾ'ತ ಸಮಾ ಉಂಡ್ ಮೊದ್ ಮೊಕ್ಕಳಿಗೆ ನೊಮ್ಸ್ಕಾರ ಹಾಕಿ ಹೋದೊ.

ದಿನ ಕಳ್ದಾಂಗೆ ಚಾಮುಣಿಗೆ ಪುಂಡುನ ದಿನಚರಿಗಳೆಲ್ಲಾ ಒಂದೊಂದಾಗಿ ಅರ್ಥಆಗುತ್ತುಟ್ಟು. ಬರೇ ಬೇಜವಾಬ್ದಾರಿ... ಉದಾಸೀನದ ಮಾರಿ.. ಕತ್ತಲೆ ಆದರೆ ಮಲ್ಗಿ ಗೂರೆಳ್ಯಕೇ ಕಾದ್‌ಕಂಡಿರ್ದು!! ಹಾಕ್ಯಂಡ ಕಾಚ ಸಮೇತ ಒಗ್ಗಂಬ್ಬಕ್ಕೆ ಗೊತ್ಲೆ!! ಇನ್ನ್ ಬೇರೆ ವಿಷಯಗೆಲ್ಲಾ ಎಲ್ಲಿಂದ... ಈ ಚಾಮುಣಿನೋ... ಚೂರು ಉಸಾರ್‌ನ ಗೂಡೆ. ಪೇಟೆ ಸುತ್ತಿ ಗೊತ್ತಿದ್ದ ಆಳ್. ಮನೆಲೇ ಇರ್ಕೆ ಸರಿ ಆದುಲೆತ

ಅತ್ತೆನ ಹೆಡ್ಡ್ ಮಾಡಿ ಟೈಲರಿಂಗ್ ಕ್ಲಾಸ್ಗೆ ಹೋಕೆ ಸುರು ಮಾಡ್ತ್. ಯಾಗೋಳು ಪೇಟೆ ನೋಡಿ ನೋಡಿ ಅದುವೇ ರುಚಿ ಅನ್ಸುಟ್ಟು. ಚಾಮುಣಿ ಹಳ್ಳಿ ಗೂಡೆ ಆದರೆ ಏನ್.. ಅದ್ಕೂ ಆಸೆ ಇರ್ದುಲೆನಾ? ಹಿಂಗೇ ಪೇಟೆ ಕಡೆ ಹೋಗಿ ಹೋಗಿ... ಬಸ್ಸ್‌ನ ಕಂಡೆಕ್ಟರೊಟ್ಟಿಗೆ ಪರಿಚಯ ಆತ್.. ಪರಿಚಯ ಸ್ನೇಹನೂ ಆಗಿ ಒಂದಿನ ಅವನೊಟ್ಟಿಗೇ "ಪಣಾಂದೆ ಪದ್ರಡ್!!". ಪುಂಡುನ ಸರಿ ಮಾಡಿಕೆ ಹೋಗಿ ಮನೆ ಮರ್ಯಾದೆನೇ ಕಳ್ಕಂಡತ್ ನಾರ್ಣಣ್ಣ. ಇನ್ನ್ ಪುಂಡುನೋ "ಕೊಣ್ಯಕೆ ಗೊತ್ತಿಲ್ಲದಂವ ನೆಲ ಡೊಂಕುತ ಹೇಳ್ದಾಂಗೆ", ಆ ಚಾಮುಣಿನ ಗುಣನೇ ಸರಿ ಇಲ್ಲೇಂತ ಊರಿಡೀ ಹೇಳಿಕಂಡ್ ಸುತ್ತಿದೆ.

ಅಲ್ಲಿಂದ ಮೇಲೆ ಒಂದ್ಹೋಗಿ ಇನ್ನೊಂದ್ ಆಗುವ ಕೆಲ್ಸಗಳಿಗೆ "ಪುಂಡುನ ಗೂಡೆ ಪದ್ರಡ್ ಹಾಕಿದಾಂಗೆ ಅದು ಬೇಡ ಮಾರಾಯ!!" ಎಂಬ ಮಾತ್ ಬೈಲ್‌ನ ಜನಗಳ ಬಾಯಿಗೆ ಬಂದುಟು...

* * * *

ಸ್ವಾತಂತ್ರ್ಯ ದಿನಾಚರಣೆನ ನೆಂಪುಗ

ಅದೆಷ್ಟೋ ಸ್ವಾತಂತ್ರ್ಯ ದಿನಾಚರಣೆಗ ಬಂದ್ ಹೋದರೂ ಈ ಒಂದ್ ದಿನ ನನ್ನ ಮನ್ಸ್‌ಂದ ಮರ್ತ್ ಹೋಕೆ ಸಾಧ್ಯನೇ ಇಲ್ಲೆ. ನಾ ಆಗ ಸುಳ್ಯ ಚರ್ಚ್ ಶಾಲೆಲಿ ನಾಕ್‌ನೇ ಕ್ಲಾಸ್. ನಾವ್ಗೆಲ್ಲಾ ಆ ಸಮಯಲಿ ಸ್ವಾತಂತ್ರ್ಯ ದಿನಾಚರಣೆ ಬಾತ್‌ತೇಳ್ರೆ ಏನೋ ಖುಸಿ. ಏಕೇಂತೇಳ್ರೆ ರಜೆ ಕಳ್ದ್ ಶಾಲೆ ಸುರು ಆದ ಮೇಲೆ, ಶಾಲೆಲಿ ಎಲ್ಲವು ಸೇರಿ ಮಾಡುವ ಸುರೂನ ಹಬ್ಬ!! ಅದರ ಗೌಜಿ, ತಯಾರಿ ಎಲ್ಲ ಹದ್ನೈದ್ ದಿನಕ್ಕೆ ಮುಂಚೆಂದಲೇ ಸುರು ಆದೆ. ವಲ್ಸ ಟೀಚರ್, ಸಿಸಿಲ್ಯಾ ಟೀಚರ್, ಆಲಿಸ್ ಟೀಚರ್ ಡ್ಯಾನ್ಸ್ ಕಲ್ಸಿರೆ... ಜಾರ್ಜ್ ಮಾಷ್ಟ್ರ ಬ್ಯಾಂಡ್ ಬಾರ್ಸಿಕೆ ಕಲ್ಸುದು... ವಿನ್ಸೆಂಟ್ ಮಾಷ್ಟ್ರ ಪೆರೇಡ್ ಕಲ್ಸಿಕೆ ಸುರು ಮಾಡ್ರೆ ಹೆಡ್ ಸಿಸ್ಟ್ರ ಪದ್ಯ ಹಾಡ್ಸಿಕೆ.. ಅದೇ ವಂದೇ ಮಾತರಂ, ಪತಾಕೆ ಎತ್ತರ ಏರಲಿ ನಮ್ಮಯ..

(ರಾಷ್ಟ್ರಗೀತೆ ಯಾಗೋಳು ಹೇಳುವ ಕಾರಣ ಅವ್ಕೆ ಕಲ್ಸುವ ಭಂಗ ಇಲ್ಲೆ!!) ಒಟ್ಟಾಗಿ ಇಡೀ ಶಾಲೆಗೇ ಒಂದು ಹಬ್ಬ... ಇನ್ನ್ ಯಾವ್ದಲ್ಲೂ ಇಲ್ಲದ ಹೈದಂಗಳಿಗೆ ಕಾಯಿ ಚೊಪ್ಪು, ಸುಣ್ಣ ತಕಂಡ್ ಧ್ವಜಸ್ತಂಭ ಉಜ್ಜುವ ಕೆಲ್ಸ!! ಆಟಿ ತಿಂಗ ಬೇರೆ... ಪಾಮಾಜಿ ಹಿಡ್ದ್ ಧ್ವಜಾರೋಹಣ

ಮಾಡಿಕೆ ಬಂದ ಅತಿಥಿಗಳೇ ಅವರೋಹಣ ಆಕೆ ಬೊತ್ತಾಲ್ಲಾ??!!

(ಆಗಸ್ಟ್ 14 ಕ್ಕೆ ಒಮ್ಮೆ ಧ್ವಜಾರೋಹಣ ಮಾಡಿಕೆ ಉಟ್ಟು... ಟ್ರಯಲ್... ಮಾರ್ನೆ ದಿನ ಧ್ವಜ ಉಲ್ಟಾ ಹಾರಿಕೆ ಬೊತ್ತೂತ" ಮುನ್ನೆಚ್ಚರಿಕೆ ಕ್ರಮ) ನಡುಲಿ ಚೂರು ಚರ್ಚೆ... ನಾಳೆ ಲಾಡು ಕೊಟ್ಟವೆ.. ಇಲ್ಲೆ ಮೈಸೂರ್ ಪಾಕ್ ಗಡ!!

ಇದಿಷ್ಟೂ ಪ್ರತಿ ವರ್ಷದ ದಿನಚರಿನಾಂಗೆ ಆದರೆ ಆ ವರ್ಷ ಒಂದ್ ವಿಶೇಷ ರೀತಿಲಿ ಬದಲಾವಣೆ ಮಾಡ್ದುಂತ ನಮ್ಮ ಹೆಡ್ ಸಿಸ್ಟ್ರ ಹೇಳ್ದೊ. ಧ್ವಜಸ್ತಂಭದ ಪಕ್ಕ, ಒಂದ್ ಸಾಲ್‌ಲಿ ಕೆಲವು ಮಕ್ಕ ಸ್ವಾತಂತ್ರ್ಯ ಹೋರಾಟಗಾರರ ವೇಷ ಹಾಕಿ ನಿಲ್ಲುದೂಂತ. ಎಲ್ಲವ್ಕೂ ಖುಸಿಯೋ ಖುಸಿ... ನಂಗೊಂದು ವೇಷ ಸಿಕ್ಕೆದೇಂತ!! ಎಲ್ಲರ ನಡುಲಿ ಎದ್ದ್ ಕಂಡರೆ ರೈಸಕ್ ಅಲ್ಲಾ??!!

ನಮ್ಮ ಹೆಡ್‌ಸಿಸ್ಟ್ರ ಕನ್ನಡ್ಕದ ಎಡೇಲಿ ನೋಡಿ..

"ಬಾರಾ.. ನೀನು ಗಾಂಧಿ ವೇಷಕ್ಕೆ ಬೆಸ್ಟ್!!" ಅಂತ ಓರ್ಡರ್ ಕೂಡ ಆತ್. ನಾ ಆಗ ಇದ್ದದೂ ಹಾಂಗೆ.. ಚೊಯ್ಯ್ಂಗ್‌ಲೆ ಮೋರೆ!! ಒಣ್ಕಟೆ ಬಾಡಿ!! ಹೊಟ್ಟೆ ಅಂತೂ ಹೊಳ್ಕೆ ಹೊಟ್ಟೆ!! ಅಲ್ಲಿಂದಲೂ 'ಗಾಂಧೀಜಿ ವೇಷ ಸುಲ್ಬಯಾ.. ಹಂಙಬಟ್ಟೆ ಸಾಕ್'ತ ಗೂಡೆಗಳ ಸಿಫಾರಸ್ ಬೇರೆ. ಆದರೆ ನನ್ನ ತಲೆ ಬಿಸಿ "ಗಾಂಧಿ ಕನ್ನಡ್ಕ" ಎಲ್ಲಿಂದ ರೆಡಿ ಮಾಡ್ದೂಂತ. ಮನೆಗೆ ಹೋಗಿ ಪೊಪ್ಪನೊಟ್ಟಿಗೆ ಅವರ್ದೆರ ಕೇಳ್ದೆ. ಪವರ್‌ದರ ಹಾಕಿ ಕಣ್ಣೊಟ್ಟಿ ಹೋದು ಬೇಡಾಂತ ಕಟ್ಟಿ ಫ್ಯಾನ್ಸಿಗೆ ಎಳ್ಕಂಡ್ ಹೋದೊ... ಪ್ಲಾಸ್ಟಿಕ್‌ದ್ ಒಂದ್ಸಿಕ್ಕಿತ್... ಬಚ್ಚಾವು!! ಬೊಳ್ಪುಗೆ ನಮ್ಮ ರಿಕ್ಷಲಿ ಯಾಗೋಲು ಕರ್ಕಂಡೋವ "ದಾಮು ಮಾವ"ನೊಟ್ಟಿಗೆ ಮೂರ್ ಮೂರ್ ಸರ್ತಿ ಹೇಳ್ದೆ "ನನ್ನ ಗಾಂಧಿ ಪಾರ್ಟ್ ನೋಡಿಕೆ ಬಂದೇ ಬರೊಕು". ಕತ್ತಲೆಗೂ ಸರಿ ನಿದ್ದೆ ಇಲ್ಲೆ. ಧ್ವಜಾರೋಹಣದೇ ಕನ್ಸ್. ಅಮ್ಮ ಬೊಳ್ಪುಗೆ ತಲೆಗೆ ಬೊಟ್ಟಿದರ್‌ಂದಲೇ ಗೊತ್ತು.... ನಾ ನಿದ್ದೆಲೂ ಜನಗಣಮನ ಹೇಳ್ತಿದ್ದೇಂತ!!

ಡ್ರೆಸ್ ಮಾಡ್ಸಿಕೆ ಎಲ್ಲಾ ನಮ್ಮಂದ ದೊಡ್ಡವೇ. ನನ್ನ ಅಕ್ಕ ಅಂತೂ ಪಂಚೆನ ಮೂಮ್ಮೂರ್ ಸರ್ತಿ ಮೊಡ್ಚಿ ಉಡ್ಸಿತ್. ಬರೇ ಉಡ್ಸಿರೆ ಸಾಕಾ?? ಜಾರಿಕೆ ಬೊತ್ತಾಲ್ಲಾ.. ಎಳ್ಟ್ ಗಂಟ್ಹಾಕಿ "ಫುಲ್ ಟೈಟ್"!! ಆಚೆ ನೋಡ್ರೆ ಲಾಲ್ ಬಹದ್ದೂರ್ ಶಾಸ್ತ್ರಿ... ಅವನ ಚಾನ್ಸ್.. ಕಚ್ಚೆಪಂಚೆ ಮೇಲೆ ಬೆಲ್ಟ್ ಕಟ್ಟಿ ಜುಬ್ಬ ಹಾಕಿ ಆರಾಮಲಿ ನಿತ್ತುಟು!! ನಂಗೋ ಹೊಟ್ಟೆ ಗಟ್ಟಿ ಆಕೆ ಸುರಾಗುತ್ತುಟ್ಟು... ಈ ವೇಷ ಬಿಚ್ಚ್‌ಕನ ಮುಟ್ಟ "ಒಂದಕ್ಕೆ" ಹೋಕೂ ಇಲ್ಲೆ!! ಅದೇ ಹೊತ್ತ್‌ಗೆ ಆಚೆಂದ ಪಟಕ್ ಸದ್ದ್

ಕೇಳ್ದೆ. ನೋಡ್ರೆ ಯಾರೋ ಧಡಿಯ ನನ್ನ "ಗಾಂಧಿ ಕನ್ನಡ್ಕ"ದ ಮೇಲೇನೇ ಕುದ್ದುಟು. ಗಾಂಧೀಜಿ ವೇಷದ ಬಹು ಮುಖ್ಯ ಅಂಗನೇ ಹೋತಲ್ಲಾ.

ನಾ ಮರ್ಡಿಕೆ ಒಂದೇ ಬಾಕಿ. ಇನ್ನ್ ಎಂತ ಮಾಡ್ದು?? ಅಷ್ಪೊತ್ತಿಗೆ ನಮ್ಮೆಲ್ಲರ ಉಸ್ತುವಾರಿ ಸಿಸಿಲ್ಯಾ ಟೀಚರ್ ಬಂದೊ. ನನ್ನ ಚಪ್ಪೆ ಮೋರೆ ನೋಡಿ.. ಅವರ್ದೇ ಕನ್ನಡ್ಕ ತೆಗ್ದ್ ನಂಗೆ ಇಸಿದೊ. ಅದ್ ನೋಡ್ರೆ ಪವರ್. ನಂಗೆ ಕಾಂಬೊದು ಎಲ್ಲಾ ಬರೇ ಮಯ ಮಯ ಅಲ್ಲ. ಅಯೋಮಯ!! ಅಂತೂ ಮೆಲ್ಲ ನಡ್ಕಂಡ್ ಹೋಗಿ ಧ್ವಜ ಸ್ತಂಭದ ಕರೇಲಿ ನಿತ್ತೊ. ನನ್ನ ಅಜ್ಜಿ ಪುಣ್ಯನೋ ಏನೋ ಮಳೆ ಇಲ್ಲೆ.

(ಎಷ್ಟೋ ವರ್ಷ ಕೊಡೆ ಹಿಡ್ಕಂದ್ ಧ್ವಜ ಹಾರ್ಸ್ಯೊಳೊ!!) ನಂಗೋ ನಿತ್ತಲ್ಲಿಂದಲೇ ಸಂಕಟ ಆಕೆ ಸುರು... ಖಾಲಿ ಮೈ... ಚಳಿ.. ಕನ್ನಡ್ಕಲಿ ನೋಡ್ರೆ ತಲೆ ತಿರ್ಗಿದೆ. ಹೊಟ್ಟೆ ಇಸುದೂಂತ ಅಮ್ಮ ಬೇರೆ ಸಮಾ ತಿನ್ನಿ ಕಳ್ಸೊಳೊ... ನಿಲ್ಲಿಕೆ ತ್ರಾಣ ಇರ್ಲಿಂತ.. ಇತ್ತ ನೋಡ್ರೆ ಅಕ್ಕ ಎಳ್ದ್‌ಕಟ್ಟಿದ ಪಂಚೆ ಗಂಟ್ ಗಟ್ಟಿಯಾಗಿ ಉಚ್ಚೆ ಅಂಡಿಕೆ ಬೇರೆ ಸುರಾಗುತ್ತುಟ್ಟು... (ಮಹಾತ್ಮ ಗಾಂಧೀಜಿನೂ ಉಪವಾಸ ಕುದ್ದಿರ್ಕಾಕನ ಆ ನಮೂನೆ ಸಂಕಟ ಅನುಭವ್ಸಿರ್ಕಿಲೆ!!) ಒಮ್ಮೆ ಜನಗಣಮನ ಹಾಡಲಿ ದೇವ್ರೇಂತ ಮನ್ಸ್‌ಗೆ ಬಂದ ದೇವ್ರ್‌ಗಳೆಲ್ಲಾ ನೆನ್ಸಿಕಂಡೆ. ಅಂತೂ ರಾಷ್ಟ್ರಗೀತೆ ಮುಗ್ತ್. ತಿರ್ಗಿ ವಾಪಸ್ ನೆಟ್ಟಂಗೆ ಹೋಕೆನಾರ್ ಕಂಡದೆನಾ ಆ ಪವರ್ ಕನ್ನಡ್ಕಲಿ? ಕನ್ನಡ್ಕ ತೆಗ್ದರೆ ಮೊರ್ಯಾದೆ ಪ್ರಶ್ನೆ.. ಅದೇ ದೃಷ್ಟಿಲಿ ವಾರೆ ವಾರೆ ಹೋಗ್ತೊಳೆ.. ನನ್ನ ಕರೆಲಿ ಒಂದ್ ಸಣ್ಣ ಗೂಡೆ ಕಿತ್ತೂರ ಚೆನ್ನಮ್ಮ.. ಅದರ ಕತ್ತಿ ಅದರಷ್ಟೇ ಉದ್ದ ಇತ್ತ್... ಆ ಕತ್ತಿನ ಕೊಡಿ ಹಿಡ್ಕಂಡೇ ಡ್ರೆಸ್ಸಿಂಗ್ ರೂಮ್ ಮುಟ್ಟ ಹೋದೆ. ಹೋದವನೇ ಪಂಚೆನ ಚಡ್ಡಿ ತೆಗ್ದಾಂಗೆ ಜಾರ್ಸಿ, ಮೈಗೆ ಹೊದ್ದ ಬಟ್ಟೆನನೇ ಸುತ್ತಿಕಂಡ್ ಟ್ಯಾಂಕ್ ಖಾಲಿ ಮಾಡಿಕೆ ಓಡ್ದೆ!!! ಅದೇ ಕೊನೆ. ಅಲ್ಲಿಂದ ಮೇಲೆ ಯಾವುದೇ ವೇಷ ಹಾಕಿಕೆ ಹೋತ್ಲೆ.. ಆ ದಿನದ ನನ್ನ ಎಲ್ಲಾ ಗುರುಗಳ ಮನಸ್ಪೂರ್ತಿಯಾಗಿ ನೆನ್ಸಿಕಣ್ತೊಳೆ... ಅವರ್‌ಂದಾಗಿಯೇ ನಾ ಇಷ್ಟ್ ಬರಿತೊಳದ್.....

* * * *

ಪಾಚುನ ಪ್ರೇಮ ಪ್ರಸಂಗ!!!

ಬೆಂಗ್ಳೂರ್‌ಲಿ ಸಿಟಿಲೈಫ್‌ನ ಧೂಳ್, ಹೊಗೆಗೆ ಬೊಚ್ಚಿ ಹೋಗಿದ್ದ ನಮ್ಮ ಪಾಚು, ನಾಕ್ದಿನ ರಜೆ ಹಾಕಿ ಊರ್‌ನ ಸುಳ್ಯ ಜಾತ್ರೆಗೆ ಹೋಗಿ ಬರೊನೊತ ಹೊರ್ಟಿತ್. ಅರ್ಜೆಂಟ್‌ಲಿ ಕೆಲ್ಸ ಮುಗ್ಸಿ ಎರ್ಡ್ ಬಸ್ಸ್ ಹತ್ತಿ ಇಳ್ದ್, ಮೆಜೆಸ್ಟಿಕ್‌ಗೆ ಬಂದ್ ಎತ್ತ್‌ಕಾಕನ ಪೂರ್ಣಿಮ ಬಸ್ಸ್ ಹೊರ್ಡ್ಕೆ ರೆಡಿ ಆಗುಟು!! ಅಂತೂ ಓಡಿಕಂಡೇ ಬಂದ್ ಬಸ್ಸ್‌ಗೆ ಹತ್ತಿದವಂಗೆ ಎದೂರು ಸೀಟ್‌ಲಿ ಕುದ್ದ ಗೂಡೆನ ನೋಡಿ ಮನ್ಸ್ ಹುಳ್ಳಂಗೆ ಆದ್ ಮಾತ್ರ ಸುಳ್ಳಲ್ಲ... ಸೀಟ್‌ಬುಕ್ ಮಾಡದ ಕಾರಣ ಕಡೆಗೆ ಸಿಕ್ಕಿದ ಸೀಟ್ ಲಾಸ್ಟ್‌ಲಿ.. ಸರೀ ಟಯರ್‌ನ ಮೇಲೆನೆ!! ಇನ್ನ್ ನಾ ತೊಡ್ಪೆಲಿ ಹೊಡ್ಕಿದಾಂಗೆ ಹಾರ್ದು ಗ್ಯಾರಂಟಿತ ನೆನ್ಸಿ, ಸಿಕ್ಕಿದ ಸೀಟ್‌ಗೆ ಒರ್ಗಿ ಕುದ್ದ್, ಕಾಲ್ ಸೊರ್ತ ನೀಂಡಿಕಾಗದೆ ಅಲ್ಲಿಯೇ ತಿರ್ಗಿ ಕುದ್ದರೂ ಮನ್ಸ್ ಮಾತ್ರ ಎದ್‌ರ್ ಸೀಟ್‌ನ ಗೂಡೆ ಮೇಲೆನೆ... ನಡುಲಿ ಒಮ್ಮೆ ಬಸ್ಸ್ ನಿಲ್ಸ್‌ಕಾಕನ ಎದ್ದ್‌ಹೋಗಿ ಗೂಡೆನ ನೋಡ್ರೆ, ಅದ್ ಮೋರೆ ಮುಚ್ಚಿ ಮಲ್ಗಿಟ್ಟು. ಹೆಂಗಿದ್ದರೂ ಸಂಪಾಜೆಲಿ ಮನೆಹಕ್ಕಲೆ ಇಳ್ಯಕಾಕನ ನೋಡಕ್‌ತ ನೆನ್ಸಿ ಹೋಗಿ ಮಲ್ಗಿದವಂಗೆ, ಜೋಡ್‌ಪಾಲ ಟರ್ನ್‌ಲಿ ಬಸ್ಸ್ ಇವಂನ ಹೊಣ್ಕ್ಕಿಸಿ ಮಲ್ಗಿಸಿದೂ ಗೊತ್ಲೆ!!

ಕೊಯಿನಾಡ್ ಚಡವು ದಾಟಿದೂ ಗೊತ್ತ್ಲೆ!!

"ಓ ಅಣ್ಣಾ... ಸುಳ್ಯ ಬಾತ್"ತ ಕ್ಲೀನರ್ ಎದ್ರ್‌ಸ್‌ಕಾಕನನೇ ಗೊತ್ತು. ಗಡಿಬಿಡಿಲಿ ಎದ್ದ್ ಹೊರ್ಟಂವ ಇಳಿಯಕಾಕನ ಎದುರುನ ಸೀಟ್ ನೋಡ್ರೆ ಖಾಲಿ!! ಗೂಡೆ ಯಾಗಳೋ ಇಳ್ದ್ ಹೋಗುಟು!! ಮಾರ್ನೆ ದಿನ ಹಳೇ ದೋಸ್ತಿ ಅಣ್ಣುನೊಟ್ಟಿಗೆ ಸಂತೆಅಡ್ಕ ಇಡೀ ಸುತ್ತ್‌ಕಾಕನ ಕಣ್ಣ್‌ಗೆ ಕಂಡದ್ ಮತ್ತೆ ಅದೇ ಗೂಡೆ!! ನಾಯಕ್ ಐಸ್ಕ್ರೀಂ ವ್ಯಾನ್‌ಗೆ ಒರ್ಗಿ ಕೋನ್ ಐಸ್ಕ್ರೀಂ ತಿಂದ್‌ಕಂಡಿದ್ದ ಗೂಡೆ ಇವನ ನೋಡಿ ಕಣ್ಣ್ ಕರೇಲಿ ನೆಗಾಡ್ದೂ, ಕೋನ್ತುಂಡಾಗಿ ಬೀಳ್ದೂ ಒಟ್ಟಿಗೆ ಆಕೋ??

ರಜೆ ಮುಗಸಿ ಬೆಂಗ್ಳೂರ್‌ಗೆ ಎತ್ತಿದವಂಗೆ ಕೆಲ್ಸದ ಒಟ್ಟಿಗೆ ಹೊಟ್ಟೆ ಇಸುದು ಮರ್ತರೂ, ಗೂಡೆನ ಮರ್ತತ್ಲೆ ಪಾಚು ಹೈದ. ಒಂದಿನ ಹಿಂಗೇ "ಫೇಸ್‌ಬುಕ್" ನೋಡ್ರೆ ಆ ಗೂಡೆನ "ಪ್ರೊಫೈಲ್" ಹಾರಿ ಬಾತ್... ಹೆಸ್ರ್ "ಅಮ್ಮಣಿ"... "ಫ್ರಂ ಸುಳ್ಯ" ಮತ್ತೆ ಒಳ್ಳದ್ ಎಲ್ಲಾ ಖಾಲಿ!! ಆದರೂ "ಫ್ರೆಂಡ್‌ರಿಕ್ವೆಸ್ಟ್" ಕಳ್ಸಿಯೇ ಬುಟ್ಟರೂ ಎದೆ ಮಾತ್ರ ಒನಕೆನಾಂಗೆ ಮಿಜಿತಾ ಉಟ್ಟು.

"ಅಸೆಪ್ಟೆಡ್"... ಹಾಯ್... ಹಲೋ... ಮೊನ್ನೆ ಬಸ್ಸ್‌ಲಿ ನೋಡ್ದ್ ನೀವೇ ಅಲ್ಲ??... ಎಲ್ಲಿ ಕೆಲ್ಸ ಮಾಡ್ದು.. ಎಲ್ಲಾ ಆರಂಭ ಆಗಿ.. "ಈ ವೀಕೆಂಡ್ ನಾ ಫ್ರೀ... ಗೋಪಾಲನ್ ಮಾಲ್‌ಲಿ ಕಿರಿಕ್ ಪಾರ್ಟಿಗೆ ಪೋಯ" ವರೆಗೆ ಬಂದ್ ಮುಟ್ಟಿತ್ ಆ ಫೇಸ್ ಬುಕ್ ಪರಿಚಯ. ಇಬ್ಬರೂ ಒಂದೇ ಜಾತಿ.. ಉತ್ತಮ ಬೊಳಿ ಬೇರೆ... ಒಳ್ಳೆ ಕೆಲ್ಸಲೂ ಒಳೊ.. ಇನ್ನೇನ್ ಮುಂದುವರ್ಸಿಕೆ!!?? ಇಬ್ಬರೂ ಒಪ್ಪಿದೊ.. ಒಟ್ಟಾರೆ ನಮ್ಮ ಪಾಚು ಮಾತ್ರ "ಕುಂಡೋಳಿಂಜ ಕಚ್ಚಿದ ಕುಂಡಚ್ಚ" ನಂಗಾತ್!!

(ಕುಂಡೋಳಿಂಜ=ಲಕ್ಷ್ಮೀ ಚೇಳು, ಕುಂಡಚ್ಚ=ಅಳಿಲು.. ಯಾಗೋಳು ಹಾರಿಕಂಡ್, ಕೊಣ್ಕಂಡ್ ಕುದ್ದಲ್ಲಿ ಕುದ್ರದ ಕುಂಡಚ್ಚ ಕುಂಡೋಳಿಂಜ ಎಲ್ಯಾರ್ ಕಚ್ಚಿರೆ ಹೆಂಗೆ ಹಾರಾಡಿಕಂಡಿರ್ದು... ನೀವೇನೆನ್ಸಿಕಣಿ!!) ಹೋದಲ್ಲಿ, ಬಂದಲ್ಲಿ, ನಿತ್ತಲ್ಲಿ, ಕುದ್ದಲ್ಲಿ.... ಪೋನ್ ಮಾತ್ರ ಕೈಲೇ!! ಟೆರೇಸ್‌ನ ಮೂಲೆಲಿ, ವಾಟರ್ ಟ್ಯಾಂಕ್‌ನ ಅಡಿಲಿ ಕಡೆಗೆ ಗೇಟ್ ಕರೆ ಕಕ್ಕಟ್ ಮೇಲೆ ಮಲ್ಗಿರೂ ಕೈಲಿದ್ದ ಫೋನ್ ಬುಡಿಕಿಲೆ!! ನೀರೊಳಗೆ ಅಣ್ಗಿ ಕುದ್ದ್ ಹೇತರೂ ಪಾಂಬಿಕಂಡ್ ಬಾದು ಮೇಲೆನೇ ಅಲ್ಲಾ?? ಹಂಗೇ ರಟ್ಟಾಗದ ಗುಟ್ಟಿಲ್ಲೆ!! ಹಂಗೇ ಈ ಗುಟ್ಟ್‌ನ

ರಟ್ಟ್ ಮಾಡ್ದ್ ಪಾಚುನ ಅಪ್ಪ.. ಲಚ್ಚಣ್ಣ... ಹೆಂಗೆ??

ಬೆಂಗ್ಳೂರ್‌ಗೆ ಹೋದ ಸುರೂಗೆ ದಿನಕ್ಕೆ ಹತ್ತ್ ಹತ್ತ್ ಸರ್ತಿ ಫೋನ್ ಮಾಡ್ತಿದ್ದಂವ ಈಗ ನೋಡ್ರೆ ದಿನಕ್ಕೊಮ್ಮೆ ಮಾಡ್ರೂ ಆತ್ ಅಷ್ಟೇ. ಇನ್ನ್ ನಾ ಮಾಡ್ರೆ ಯಾಗ ನೋಡ್ರೂ ಎಂಗೇಜ್!! ಇವನ ಕಥೆ ಎಂತಪ್ಪಾ?? ನೋಡ ವಿಚಾರ್ಸೊನೊತ "ಓಯ್ ಪಾಚು... ನಾಳ್ದ್ ಬೈಲೆ ಪತ್ತನಾಜೆಗೆ ಆಚೆಕರೆ ಕುಂಞಣ್ಣನ ಹಂದಿ ಒಂದು ತಲೆ ಕೊಯಿಸಿಕೆ ಉಟ್ಟುಗಡ. ನಾನೂ ನಾಕ್ ಕೆಜಿ ಮಾಸಕೆ ಹೇಳ್ಯೆಳೆ. ನೀನೂ ನಾಕ್ ದಿನ ರಜೆಹಾಕಿ ಬಾ ಆತಾ.." ಹೇಳಿ ಆರ್ಡರ್ ಆತ್ ಲಚ್ಚಣ್ಣಂದ್. ಮನೆಗೆ ಬಂದರೂ ಹೈದ ಲಾಯ್ಕ್‌ಲೇ ಉಟ್ಟು... ಮೊಬೈಲ್ ಮಾತ್ರ ಕೈಂದ ಬುಡ್ದೇಲೆ ಅಷ್ಟೆ! ನಡುರಾತ್ರೆ ಲಚ್ಚಣ್ಣಂಗೆ ಉಚ್ಚೆಹೊಯ್ಯಕೆ ಎದ್ದವ್ಕೆ ಪಾಚುನ ರೂಮ್‌ಂದ ಕುಸುಕುಸು ಕೇಳ್ಟೆ. ನೋಡ್ರೆ ಗುಡಿಹೊದ್ದ್ ಮಲ್ಗಿದ್ದ ಒಲ್ಲಿ ಒಳಗೆಂದಲೇ!! ಮಾರ್ನೆ ದಿನ ಲಚ್ಚಣ್ಣ ಮಂಜಜನ ಕರ್ದ್ ಒಂದೇ ಪ್ರಶ್ನೆ" ಯಾರ್ ಆ ಗೂಡೆ?"... ಹೇಳದೆ ಉಪಾಯ ಉಟ್ಟಾ?? ಗೂಡೆ ಕಟ್ಟಪುಣಿ ದ್ಯಾಪಣ್ಣನ ಮಗ್ಳ ಅಮ್ಮುಣಿ!! ಲಚ್ಚಣ್ಣನೂ ದ್ಯಾಪಣ್ಣನೂ ಹಳೇ ದೋಸ್ತಿಗ. ಇಬ್ಬರ ಮಾವನ ಮನೆ ಹಕ್ಕಲೆ ಹಕ್ಕಲೆ ಆದರ್‌ಂದ ಸಣ್ಣದರ್ಲಿ ಸಿಡಿ ಹಾಕುದು, ಅಡ್ಜಿಲ್ ಇಸುದು, ಕೂಳಿ ಕಟ್ಟಿಕಂಡ್ ಒಟ್ಟಿಗೇ ಬೆಳ್ದವು. ಆದರೆ ಈಗ ಮಾತ್ರ ಬದ್ಧ ಶತ್ರುಗ... ಕಾರಣ.. ಅಂದ್ ಒಂದಿನ ಸಿಡಿ ಹಾಕಿದಕ್ಕೆ ಬಿದ್ದ ತೆಕ್ಕಟೆ (ಕೋಳಿ ಹಾಂಗೆ ಇದ್ದದೆ)ನ ಹೇಳದೆ ತಕಂಡೋಗಿ ಗೈಪು ಮಾಡಿ ಕುಂಡಕೋಳಿ (ಇದೂ ಒಂದ್ ಹಕ್ಕಿ)ನ ಸೆಕ್ಕ್‌ಸಿ ಇಸಿತ್‌ತ!! "ಆ ದ್ಯಾಪು ಬರೇ ದಗಲ್ ಬಾಜಿ... ಅವನ ಮನೆಂದ ಗೂಡೆ ನನ್ನ ಸೊಸೆ ಆದು ಬೇಡ. ನೀ ಬೇಕರೆ ಮೊದ್ವೆ ಆಗದೆ ಇದ್ದರೂ ಆದು!! ಆ ಗೂಡೆ ಮಾತ್ರೆ ಬೇಡನೇ ಬೇಡ!!"

ಪಾಪ ಪಾಚು... 'ಇಯಿಂಕ ಆದ ಹಪ್ಪಳದಾಂಗೆ' ಚಪ್ಪೆ ಮೋರೆಲೇ ಬೆಂಗ್ಳೂರ್‌ಗೆ ಹೊರ್ಟತ್.

(ಈ "ಇಯಿಂಕ ಆದ ಹಪ್ಪಳ"... ಇದಿಕ್ಕೆ ಸರಿಸಮ ಆದ ಶಬ್ದನಂಗೆ ಇಲ್ಲಿವರೆಗೆ ಯಾವ ಭಾಷೆಲೂ ಸಿಕ್ಕಿತ್ಲೆ. ಅದೇ ಅರೆಭಾಷೆನ ಗತ್ತ್!!). ಒಟ್ಟಾರೆ ಒಂದ್ ತೆಕ್ಕಟೆ, ಕುಂಡಕೋಳಿಂದಾಗಿ ಪಾಚುನ ಪುಂಡಿ ಪೊಡಿ ಪೊಡಿ ಆತ್... ಛೇ!!

* * * *

ಅಡೋಳಿ ಪಾಚು.....

ಗೌಡ್ರ್‌ಗಲ್ಲಿ ಮೊದುಮಂಞ, ಮೊದೋಳಿಗೆನೊಟ್ಟಿಗೆ ಇದ್ದ್ ಕೊಡೆ ಹಿಡ್ಯವ್ಕೆ "ಅಡೋಳಿ"ತ ಕರಿದು. ವಧು, ವರನ ಸೋದರ ಅತ್ತೆ/ಮಾವನ ಮಕ್ಕಳಿಗೆ ಮಾತ್ರ ಇದ್ ಜನ್ಮಸಿದ್ಧ ಅಧಿಕಾರ!! ಅಕ್ಕ, ತಂಗೆಕಳ ಗಂಡಂದಿರಿಗೂ ಇದರ್ಲಿ ಹಕ್ಕ್ ಉಟ್ಟು!! ಒಟ್ಟಾರೆ ಸಂಬಂಧಲಿ ಹೈದಂಗೆ ಬಾವ/ನಣ್ಕ, ಗೂಡೆಗೆ ಅತ್ತಿಗೆ/ ನಾದಿನಿ ಆಗಿರೊಕು.

(ಅಂಥವು ಇಲ್ಲದಿದ್ದರೆ ಮತ್ತೆ ವಧು, ವರ ಆದವ್ಕೆ ತುಂಬಾ ಹಕ್ಕಲೆ ಇದ್ದವೂ ಆದೆ... ಯಾರೂ ಇಲ್ಲದಿದ್ದರೆ ಮತ್ತೆ ಎಂಥ ಮಾಡ್ದು. ಅಳಿದೂರಿಗೆ ಉಳಿದವನೇ ಗೌಡ!!) ಇವುಕೆ ಬರೇ ಕೊಡೆ ಹಿಡಿದು ಮಾತ್ರ ಕೆಲ್ಸ ಅಲ್ಲ. ಮೊದ್ಮಕ್ಕಳ ಸೀರೆನ ನೆರ್ಗೆ ಸರಿಮಾಡ್ದು, ಪಂಚೆ ಸರಿ ಮಾಡ್ದು, ಪಚಾರಕ್ಕೆ ಕುದ್ದಲ್ಲಿಗೆ ನೀರ್/ ಜ್ಯೂಸ್/ ಬೊಂಡ ತಂದ್ ಕೊಡ್ದು.. ಕಡೆಗೆ ಎಣ್ಣೆ ಅರ್ಸಿನ ಆಗಿ ಮೀಯಕನ, ಮೈಸೂರ್ ಬಾಳೆಣ್ಣ್ ಕಡ್ಲೆಹೊಡಿ ಹಾಕಿ ಮೊದ್ಮಕ್ಕಳ ಬೆನ್ನ್ ಉಜ್ಜುದೂ "ಅಡೋಳಿ"ನ ಜವಾಬ್ದಾರಿ!! ಹಂಗೇ ನಮ್ಮ ಪಾಚುನೂ ಒಮ್ಮೆ ಅಡೋಳಿ ಆದರ್‌ಂದಾಗಿ ಅವನ ದೆಸೆನೇ ಬದ್ಲಾತ್... ಹೆಂಗೆ?? ಮುಂದೆ ಓದಿ.. ಮನಸಾರೆ ಮೆಚ್ಚಿದ ಗೂಡೆ ಅಮ್ಮುಣಿನ ಬುಟ್ಟೇ

ಬುಡೊಕುತ ಲಚ್ಚಣ್ಣ ಹಠ ಹಿಡ್ಡಿದ್ದೊಲ್ಲ!!

'ಸಿಡಿಲಿ ಬಿದ್ದಿದ್ದ ತೆಕ್ಕಟೆನ, ಸುದ್ದಿಲ್ಲದೆ ಗೈಪು ಮಾಡಿ, ಕುಂಡಕೋಳಿನ ನೇಲ್ಸಿ ಇಸಿದ್ದ ಆ ಕಟ್ಟಪುಣಿ ದ್ಯಾಪಣ್ಣನ ಮಗ್ಳ ಬೇಡ'ತ ಒಂದ್ ಕೊರ್ಸಂಡಿ ಹಠ!! ಹೇಳಿಕೆ ಒಂದ್ ಕಯಿಂಪೆ!! ಅಷ್ಟೇ... ಹಂಗಾಗಿ ಪಾಚುನೂ ಅಮ್ಮುಣ್ಣಿನ ಮರ್ಯಕೆ ನೋಡ್ತಾ ಉಟ್ಟು. ಪಾಚುನೂ ಪುತ್ತುನೂ ಬಾವ, ನಣ್ಕಂಗಿಂತಲೂ ಒಳ್ಳೆ ದೋಸ್ತಿಗ. ಪುತ್ತು ಚೂರ್ ತಲೆ ಓಡ್ಸಿ ಪಾಚುನೇ "ಅಡೋಳಿ" ಆದರೆ ಅವನ ಮನ್ಸ್‌ಗೂ ಒಂದ್ ಬದಲಾವಣೆ ಸಿಕ್ಕಿದೆತ, ಪಾಚುನ ಒಪ್ಪುಸಿ ಹೊಸಾ ಜುಬ್ಬ, ಕೋಟ್ ಎಲ್ಲಾ ತೆಗ್ಸಿಕೊಟ್ಟರೆ, ಪಾಚುಗೆ ಒಪ್ಪಿಕಣದೆ ಬೇರೆ ದಾರಿಯೇ ಇಲ್ಲೆ.

ಅಂತೂ ದಿಬ್ಬಣದವೂ, ಅಡೋಳಿ ಪಾಚುನೂ ಮೊದ್ಮಂಜಂಗೆ ಕೊಡೆ ಹಿಡ್ಕಂಡ್, ನೆಂಟ್ರ್‌ಳೊಟ್ಟಿಗೆ ತಮಾಷೆ ಮಾಡಿಕಂಡ್ ಧಾರೆ ಹೊತ್ತಿಗೆ ಸರಿ ಆಗುವಾಂಗೆ ಮೇಲ್ಕಟ್ಟ್ ಅಡಿಗೆ ಎತ್ತಿದೊ. ಊರ್‌ಗೌಡ್ರ್ ಗಡಿಬಿಡಿ ಮಾಡ್ದೊ, ಕಂಚಿನಕ್ಕಿನೊಟ್ಟಿಗೆ ಮೊದೋಳಿಗೆನ ಕಡೆವೂ ಬಂದ್ ಎತ್ತುದೂ ಸರೀ ಆತ್. ಮೊದ್ಮಂಜನ ಹಿಂದೆ ನಿತ್ತ್‌ಕಂಡಿದ್ದ ಪಾಚು ಯಾವುದೋ ಆಲೋಚನೆಲಿ ತಲೆ ಎತ್ತಿ ಮೊದೋಳಿಗೆನ ಕಡೆನೋಡ್ದೊ, ಮೊದೋಳಿಗೆನ ಹಿಂದೆ ಇದ್ದ ಅದರ ಅಡೋಳಿನೂ ಇವರ ನೋಡ್ದೊ ಅದ್ ವಿಧಿಯೋ, ಮಾಯೆನ ಆಟನೋ ಗೊತ್ಲೆ. ಪಾಚುಗೆ ಒಮ್ಮೆ ಮೈಲಿಡೀ ಜುಂಗು ಎದ್ದದ್ ಮಾತ್ರ ಸತ್ಯ. ನೋಡ್ರೆ ಅದೇ ಅಮ್ಮುಣಿ!! ಮನಸಾರೆ ಮೆಚ್ಚಿ, ಪ್ರೀತಿಸ್ತಿದ್ದ ಅಮ್ಮುಣಿ!! ಅಷ್ಟೊತ್ತಿಗೆ ಊರ್ ಗೌಡ್ರ್ "ಹತ್ತ್ ಕುಟುಂಬ ಹದಿನೆಂಟ್ ಗೋತ್ರ ಬಂಧು ಬಾಂಧವರು ನೆಂಟರಿಷ್ಟರು... ಕೈಯೆತ್ತಿ ಕನ್ಯಾಧಾರೆ ಹೊಯ್ದವೇಂತೇಳುವೇ"ತ ಒಂದೇ ಉಸ್ರುಲಿ ಹೇಳ್ದೊ, ಎಲ್ಲವೂ "ಒಳ್ಳೆ ಕಾರ್ಯಂತೇಳುವೇ"ತ ಹೇಳ್ದಲ್ರೂ ಮುಳ್ಗಿದರ್‌ಂದ, ಅಮ್ಮುಣಿನ ಕಣ್ಣ್ ಕರೆಂದ ಒಂದ್ ಹನಿ ನೀರ್ ಜಾರ್ದರ ಯಾರೂ ಗಮನ್ಸಿತೇಲೆ. ಆದರೆ ಅದ್ ಆ ಹನಿನ, ಕೈಲಿದ್ದ ಚೌಕದ ಕೊಡೀಂದ ಕಣ್ಣ್ ಕರೇಗೆ ಉಜ್ಜಿಕಂಡದರ ಕಂಡ್ ಸಂಕಟ ಪಟ್ಟ್ ಕಂಡವ ಮಾತ್ರ ಒಬ್ಬನೇ... ಪಾಚು!! ಹೆಂಗೆ ಹೆಂಗೋ ಊಟಮಾಡಿ ದಿಬ್ಬಣದವರ್‌ಂದಲೂ ಮೊದ್ಲೇ ಹೊರ್ಟ್ ಮನೆ ಎತ್ತಿತ್ ನಮ್ಮ ಪಾಚು ಹೈದ. ಮಾರ್ನೆ ದಿನ ತುಪ್ಪಕೆ ಪೋಯಿತ ಪುತ್ತು ಫೋನ್ ಮಾಡಿ

ಕರ್ದರೂ ಹೋರ್ಟತ್ಲೆ.

"ನಂಗೆ ಸರೀ ಉಶಾರಿಲ್ಲೆಯ... ಮೈ ಕೈ ಎಲ್ಲಾ ಪುಳ್ದದೆ.... ಬಹುಶಃ ಮೊನ್ನೆ ಇಡೀ ನಿದ್ದೆಗೆಟ್ಟ್ ಆಗಿರೊಕು... ಇಂದೇ ಕತ್ತಲೆಗೆ ಬೇರೆ ಬೆಂಗ್ಳೂರ್‌ಗೆ ಹೋಕು... ನಾಳೆ ಡ್ಯೂಟಿಗೆ ಸನ ಹೋಕುಟ್ಟು.. ಭಂಗ ಆದು... ನಾ ಬಾದ್ಲೆ... ಬೇಜಾರ್ ಮಾಡಿಕಂಬಡ!!" ಹೇಳಿ ತಪ್ಪ್‌ಸಿಕಂಡ್ ಮಲ್ಗಿದಂವ ಎದ್ದದ್ ಹಿಂಬತಾಕನ. ಎದ್ದವನೇ ಸೀದ ಬೆಂಗ್ಳೂರ್ ಬಸ್ಸ್ ಹತ್ತಿ ಹೋತ್ ಕೂಡ. ಎಷ್ಟಾದರೂ ಮನ್ಸ್‌ನ ಬೇನೆಗೆ ಮುಲಾಮ್ ಎಲ್ಯುಟ್ಟು ಹೇಳಿ??

ಅತ್ತಿಗೆನ ಮೊದ್ವೆಗೆತ ಖುಸಿಲೇ ಓಡಿ ಬಂದಿದ್ದ ಗೂಡೆ ಅಮ್ಮಣಿ ಬೇಜಾರ್ಲಿ ಒಳದ್ ನೋಡಿ ಅದರಪ್ಪ ದ್ಯಾಪಣ್ಣಂಗೆ ಒಂದ್ ಮಾತ್ ಕೇಳಿಯೇ ಹೋತ್ ನೊಡಿ. (ಎಷ್ಟಾದರೂ ಹೆಣ್ಣ್ ಹೆತ್ತವಲ್ಲ?? ಅದಲ್ಲೂ ಅಪ್ಪಂದರ್ ಗಂಡ್ ಮಕ್ಕತ ಎಷ್ಟ್ ಹೊತ್ತ್ ಕಂಡರೂ ಹೆಣ್ಣ್ ಮಕ್ಕಳ ಮೇಲೆ ಇರುವ ಪ್ರೀತಿನೇ ಬೇರೆ... ತೋರ್ಸಿಕಂಬೊದ್ಲೆ ಅಷ್ಟೆ!!)

"ಅಮ್ಮಣೀ... ಅತ್ತಿಗೆನ ಮೊದ್ವೆ ಆತ್.. ನಿನ್ನದಿನ್ನೂ ಅತ್ಲೆತ ಬೇಜಾರ್ ಮಾಡಿಕಂಬಡ... ನಿಂಗೂ ನಾವು ಹುಡ್ಕ್ ತೊಳೊ ಅಲ್ಲ?? ಒಬ್ಬಳೇ ಮಗಳ ಗಿಣಿ ಸಾಂಕಿದಾಂಗೆ ಸಾಂಕಿ ಯಾರಿಗೋ ಕೊಡಿಕೆ ಒಮ್ಮೆಗೇ ಮನ್ಸಾದ್ಲೆ. ಬುಡು... ನೋಡ... ಮೊನ್ನೆ ಹೊಸಮೊದ್ಮಂಜ ಪುತ್ತುನೊಟ್ಟಿಗೆ ಇದ್ದ ಅಡೋಳಿ ಯಾರ್‌ತ ಗೊತ್ಲೆ. ಹೈದ ಲಾಯಿಕುಟ್ಟು. ಸಾಧುನೂ ಕಂಡದೆ. ನಮ್ಮ ಪುತ್ತುನೊಟ್ಟಿಗೇ ಕೇಳೊನೊ. ಈ ಮೊದ್ವೆ ಗಜಿಬಿಜಿ ಎಲ್ಲಾ ಕಳ್ಯಲಿ!!" ಅಪ್ಪನ ಮಾತ್ ಕೇಳಿ ಅಮ್ಮಣಿ, ಮರ್ಟ್‌ಕಂಡ್ ಈ ಹಿಂದೆ ನಡ್ದ ಎಲ್ಲಾ ವಿಷಯ ಹೇಳ್ರೆ ದ್ಯಾಪಣ್ಣಂಗೂ ಒಮ್ಮೆಗೆ ಏನ್ ಹೇಳೊಕೂಂತಲೂ ಗೊತ್ತಾಗ್ತಿಲ್ಲೆ. ಆದರೂ ಮಗಳ ಸಮಾಧಾನ ಮಾಡಿ, ಬೆಂಗ್ಳೂರ್‌ಗೆ ಕಳ್ಸಿದೊ. ಮಾರ್ನೆ ದಿನನೇ ಬೊಳ್ಪುಗೆ ಎದ್ದವೇ ಸೀದ ಹೋಗಿ ಎತ್ತಿದ್.... ಲಚ್ಚಣ್ಣನ ಮನೇಗೆ!!

"ಅಲ್ಲಯಾ ಬಾವ.. ನಾವ್ ಅಂದ್ ಹುಡ್ಗಾಟಲಿ ಹಂಗೆ ಮಾಡ್ದೊತ ಈಗಲೂ ಹಂಗೇ ಮಾಡ್ರೆ ನಾವ್ಗೂ ಮಕ್ಕಳಿಗೂ ವ್ಯತ್ಯಾಸ ಎಂಥ ಉಟ್ಟು? ಆದದೆಲ್ಲಾ ಕಳ್ಕ್... ಈಗ ನಿನ್ನ ಮನೆಬಾಗಿಲ್‌ಗೆ ಬಂದ್ ಕೇಳಿಕಣ್ತೊಳೆ. ನನ್ನ ಮಗಳ ನಿನ್ನ ಸೊಸೆ ಮಾಡಿಕಂಡಿಯಾ??" ಲಚ್ಚಣ್ಣಂಗೂ ಒಮ್ಮೆಗೆ ಅವನ ಹಠ

"ನಾಯಿಮೊಲೆಲಿ ಹಾಲಿದ್ದಂಗೆ" ಅನ್ನಿದ್ ಮಾತ್ರ ಸುಳ್ಳಲ್ಲ. ಒಟ್ಟಿಗೆ ಮನ್ಸ್‌ಲೇ 'ಹೆಂಗಿದ್ದರೂ ಗೊತ್ತಿದ್ದ ನೆಂಟ್ರೆ. ಆಸ್ತಿಬೊದ್ಕ್ ನಮ್ಮಷ್ಟಲ್ಲದಿದ್ದರೂ ಬರೇ ಪಾಪದವಲ್ಲ. ಕುಂಟುಕಾಡು ರಾಮಯ್ಯ ಬಾವ ಅಂದೇ ಹೇಳ್ಯೊಳೊ. ಗೂಡೆನ ಕೊಡ್ಕಾಕನ ದೊಡ್ಡ ಮನೆಕಡೆ ಕೊಡೊಕು... ತಾಕಾಕನ ನಮ್ಮಂದ ಪಾಪದವರಲ್ಲಿಂದ ತರೊಕು ಗಡ!! ಇನ್ನ್ ಈಗ ನಾ ಒಪ್ಪಿಕಣದೆ ಸಣ್ಣಂವ ಆದು ಯಾಕೆ?'

"ಆದು ಬಾವ... ಮನೆ ಬಾಗಿಲ್‌ಗೆ ಬಂದ್ ಹೆಣ್ಕೊಟ್ರೆತೇಳ್ಕಾಕನ ಬರುವ ಭಾಗ್ಯನ ಬೇಡತೇಳ್ದು ಮನೆ ಯಜಮಾನಂಗೆ ಒಳ್ಳದಲ್ಲ. ಎಷ್ಟಿದ್ದರೂ 'ಋಣಾನುಬಂಧ ರೂಪೇಣ ಪಶು, ಪತ್ನಿ, ಸುತ, ಆಲಯ' ಅಲ್ಲಾ... ನಾನೇ ಪಾಚುನೊಟ್ಟಿಗೆ ಮಾತಾಡಿ ಮುಂದುವರ್ಸಿನೆ... ಅಮ್ಮಣಿ ನನ್ನ ಸೊಸೆ!!"... ಒಂದ್ ಅಡೋಳಿ ಆದ ದೆಸೆಂದ ಪಾಚು ಈಗ ಅವಂಗೊಂದು ಅಡೋಳಿನ ಹುಡ್ಕುತುಟ್ಟು ಗಡ!!!

* * * *

ಬುಡ ಚಿಗ್‌ರ್ದ ಹೊತ್...

"ಇಂದನೇ ಬೇಬಿ... ಅಣ್ಣುನ ಫೋನ್... ಅಮೇರಿಕಾಂದ.. ನಿನ್ನೊಟ್ಟಿಗೆ ಮಾತಾಡ್ದೆಗಡ... ಬೇಗ ಬಾನೇ.." ಗಂಡ ರಾಮಣ್ಣನ ಬೊಬ್ಬೆ ಕೇಳಿ, ಜಾಲ್ ಕರೆಲಿ ನೀರಡಿ ದೊಂಬೆ ಅಡಿಲಿ ಹಸಿಮೀನ್ ಸಜ್ಜಿ ಮಾಡಿಕಂಡಿದ್ದ ಬೇಬಿಯಕ್ಕ, ಮೀನ್ ತಪಲೆಗೆ ಹಾಳೆ ಕಿಳ್ಳಿ ಅಡ್ಡ ಇಸಿ ಅದೇ ಚಂಡಿ ಕೈನ ಸೆರ್‌ಂಗ್‌ಗೆ ಒರ್ಸಿಕಂಡ್ ಮನೆ ಒಳಗೆ ಓಡ್ದೊ.

"ಹಲೋ... ಅಮ್ಮಾ... ಹೆಂಗೊಳರಿ... ಈ ಸರ್ತಿ ತೊಡಿಕ್ಕ್ಯಾನ ಜಾತ್ರೆ ಸಮಯಲಿ ನಾವು ಊರ್‌ಗೆ ಬರ್ತೊಳೊ. ದೊಡ್ಡ ದರ್ಶನ ಬಲಿಗೆ ಎಲ್ಲವೂ ಒಟ್ಟಿಗೇ ಪೋಯಿ. ಶಾಂತಿನೂ ಬಂದದೆ. 'ಅನುಜ್ಞಾ'ನನೂ ಕರ್ಕಂಡ್ ಬರ್ತೊಳೆ... ಹಲೋ... ಕೇಳ್ತುಟ್ಟಾ... ಹಲೋ.. ಹಲೋ.. ಟುಂಯ್... ಟುಂಯ್". ಫೋನ್ ಕಟ್!!

ಬೇಬಿಯಕ್ಕಂಗೆ ಮಂಜನೊಟ್ಟಿಗೆ ಮಾತಾಡಿಕೆ ಆಗದೆ ಹನೀಸ್ಬೇಜಾರಾದರೂ ಅಂವ ಹೇಳ್ದ ಮಾತ್ ಕೇಳಿ ಹಾಲ್ ಕುಡ್ದಷ್ಟ್ ಕುಸಿ ಆತ್. ಹಂಗೇ ಅಲ್ಲಿದ್ದ ಐಮರಕ್ಕೆ ಒರ್ಗಿ ಕುದ್ದ್ ಕಳ್ದ ದಿನಗಳೆಲ್ಲಾ ನೆನ್ಸಿಕೆ ಸುರು ಮಾಡ್ದೊ. ಅಣ್ಣು

ಹೈದನ ಹೊಟ್ಟೆ ಬಟ್ಟೆ ಕಟ್ಟಿ ಇಂಜಿನಿಯರ್ ಮಾಡಿ ಬೆಂಗ್ಳೂರ್‌ಗೆ ಕಳ್ಸಿದ್... ಹೋದಂವ ಪೇಟೆ ಗೂಡಿ ಶಾಂತಿನ ಮೊದ್ವೆ ಆಕೆ ಹೊರ್ಟದ್... ಮನಸ್ಸ್ ಒಪ್ಪದಿದ್ದರೂ ಒಬ್ಬನೇ ಮಂಜತ ಗಂಡನನೂ ಒಪ್ಸಿ ಮೊದ್ವೆ ಮಾಡ್ದ್... ಮೊದ್ವೆ ಆಗಿ ಮೂರ್ ತಿಂಗಳಿಗೇ ಅಂವ ಹೆಣ್ಣ್‌ನ ಕರ್ಕಂಡ್ ಅಮೇರಿಕಾಕ್ಕೆ ಹಾರ್ದ್... ಅಲ್ಲಿಯೇ ಅವ್ಕೊಂದ್ ಹೆಣ್ಣ್ ಕೂಸ್ ಹುಟ್ಟಿದ್... ಇಲ್ಲಿವರೆಗೆ ಕೂಸುನ ಮೋರೆ ಕೂಡ ನೋಡಿಕೆ ಆಗದ್ದ್... ಇದೇ!! ಮಂಜ ಅಮೇರಿಕಾಕ್ಕೆ ಹೊರ್ಡ್‌ಕಾಕನ ಬೇಬಿಯಕ್ಕಂಗಂತೂ ಕುಸಿಯೋ ಕುಸಿ. ನಮ್ಮ ಇಡೀ ಬೈಲ್‌ಲಿ ಮಾತ್ರ ಅಲ್ಲ ಇಡೀ ಗ್ರಾಮಲೇ ಅಣ್ಣುನೇ ಸುರೂಗೆ ವಿದೇಶಕ್ಕೆ ಹೊರ್ಟಂವ. ಗಂಡ, ಹೆಣ್ಣ್ ದಾರಿಲಿ ಸಿಕ್ಕುವ ನೆರೆಕರೆವು, ನೆಂಟ್ರ್‌ಗಳೊಟ್ಟಿಗೆ ಹೇಳಿಕಂಡ್ ತಿರ್ಗಿದೇ ತಿರ್ಗಿದ್. ಆದರೆ ದಿನ ಕಳ್ದಾಂಗೆ ಗೊತ್ತಾತ್.. ಹೋದಂವ ಬಾದು ವರ್ಷಕ್ಕೋ ಎರ್ಡ್ ವರ್ಷಕ್ಕೊಮ್ಮೆ. ಅದೂ ಒಬ್ಬನೇ.. ಸೊಸೆಗೆ ಊರ್ ಕಡೇ ನೋಡಿಕೂ ಮನ್ಸಿಲ್ಲೆ!! ತಿಂಗ ತಿಂಗ ಮನೆಗೆ ಬೇಕಷ್ಟ್ ದುಡ್ಡ್ ಕಳ್ಸಿದೆ. ಆದರೆ ಮನ್ಸ್‌ಗೆ??!! ಹಿಂಗೇ... ಫೋನ್‌ಲೇ ವಿಚಾರ್ಸಿಕಂಬೊದು ಅಷ್ಟೆ. ಅಂಥದರ್ಲಿ ಹಕ್ಕಲೆ ಹಕ್ಕಲೆ ಎಂಟ್ ವರ್ಷದ ಮೇಲೆ ಮಂಜ ಪುಳ್ಳಿನನೂ ಕರ್ಕಂಡ್ ಬಂದದೆತೇಳ್ರೆ ಯಾವ ಅಯ್ಯೆಗೂ ಎಷ್ಟ್ ಕುಸಿ ಆಕಿಲೆ??!! ಅದರ್ನೇ ಗಂಡನ ಕೆಬಿಗೆ ಉರ್ಗಿಕೆ ರಾಮಣ್ಣನ ಹುಡ್ಕಿರೆ ಅವು ಆಗಳೆ ಹಳು ತೆಗ್ಯಕೆ ಗದ್ದೆ ಕರೆಗೆ ಎತ್ತಿ ಆಗುಟು. ಅಷ್ಟೊತ್ತಿಗೆ ನೆಂಪಾತ್... ಸಜ್ಜಿ ಮಾಡಿಕಂಡಿದ್ದ ಹಸಿಮೀನ್ ಅಲ್ಲಿಯೇ ಬುಟ್ಟಳೆ. ಹೋಗಿ ನೋಡ್ರೆ ಒಂದ್ ಮೀನ್‌ನ ಕಂಟಕೊತ್ತಿ ಹೊತ್ತ್‌ದ್ ಬೀಜ ಮರದ ಕೊಡಿಲಿ ಕುದ್ದ್‌ಕಂಡ್ ಕೈ ನೆಕ್ಕ್ಯಣ್ಟುಟ್ಟು. ಅದ್ಕೆ ಒಂದ್ ಕಲ್ಲ್ ಬೇರಿ ಒಳ್ದ ಮೀನ್‌ನ ಸಜ್ಜಿ ಮಾಡಿ ಅರೆಪುಗೆ ಹುಳಿಮೆಣ್ಸ್ ಕದ್ಯಕೆ ಅಡ್ಗೆ ಕೋಣೆಗೆ ಹೋದೊ ಬೇಬಿಯಕ್ಕ.

ಮಾರ್ನೆ ದಿನಂದ ಕೆಲ್ಸಕ್ಕೆ ಬಂದ ಪಾಚೊಳ್ತಿನೊಟ್ಟಿಗೆ, ಕಾಯಿ ತೆಗ್ಯಕೆ ಬಂದ ಕುಂಞಣ್ಣನೊಟ್ಟಿಗೆ ಎಲ್ಲರೊಟ್ಟಿಗೂ ಗಂಡಂಗೂ, ಹೆಣ್ಣ್‌ಗೂ ಹೇಳಿಕೆ ಒಂದೇ ವಿಶ್ಯ. 'ಅಣ್ಣು ಊರುಗೆ ಬಾತುಟ್ಟುಗಡ... ಹಂಗೇ ಅನುನ ಕೂಡ ಕರ್ಕಂಡ್ ಬಂದದೆಗಡ' (ಈಗದ ಪುಳ್ಳಿಕಳ ಹೆಸ್ರ್ ಅಜ್ಜ, ಅಜ್ಜಿಕಳಿಗೆ ಸರಿಯಾಗಿ ಹೇಳಿಕೆ ಆಗದಾಂಗೆ ಇಸುದು ಯಾಕೋ??!!). ಪುಳ್ಳಿನ ಬೇರೆ ಸುರೂಗೆ ನೋಡ್ತೊಳೊ ಪಾಪದ ಹಿರಿ ಜೀವಗ. ಆ ಕೂಸುಗೆ ಹಟ್ಟಿನ ಅಂಬೆ ಕರ್

ತೋರ್ಸೊಕು... ಮೊಜ್ಜಿಗೆ ಗುತ್ತಿಂದ ಬೆಣ್ಣೆ ತೆಗ್ದ್ ಕೊಡೊಕುತ ಅಜ್ಜಿ ಲೆಕ್ಕ ಹಾಕಿರೆ... ಕೆರೆಲಿರುವ ದೊಡ್ಡ ಮಣ್‌ಂಜಿ ತೋರ್ಸೊಕು.. ಕೊಟ್ಟೆ ಕೊಮ್ಮುಲಿ ಮೊನ್ನೆ ನೋಡ್ದ ಯಾಪೆ ಗಿಳಿನ ಹಿಡ್ದ್ ಗೂಡ್ ಮಾಡಿ ಇಸಿರೆ ಕೂಸುಗೆ ಆಡಿಕೆ ಭಾರೀ ಲಾಯಿಕ್‌ತ ಕನ್ಸ್ ಕಾಂಬೊತುಟ್ಟು ಅಜ್ಜಪ್ಪ!! ಆದರೆ ಆ ಕನ್ಸ್‌ಗೆ ಬೆಚ್ಚನೀರ್ ಚೋಂಪಿದ್ ಕೆಲ್ಸದ ಪಾಚೋಳ್ತಿ... "ಎಡ್ತೆರೇ.. ಅಲ್ಲಿ ಅಮೇರಿಕಲಿ ಎಲ್ಲವೂ ಇಂಗ್ಲೀಷ್‌ಲೇ ಮಾತಾಡ್ದುಗಡ. ಮೊನ್ನೆ ದುಬಾಯಿಂದ ಬಂದ ಎಂಕಮ್ಮಕ್ಕನ ಮಂಜ ಹೇಳ್ದಿದ್ದೊ. ಇನ್ನ್ ನೀವು ಆ ಕೂಸುನೊಟ್ಟಿಗೆ ಹೆಂಗೆ ಮಾತಾಡುವರಿ!!??" ಇದೆಂಥಾ ಸಮಸ್ಯೆ. ಪುಳ್ಳಿ ಬಾತ್‌ತ ಕುಸಿ ಪಡೊಕೊ... ಪುಳ್ಳಿನೊಟ್ಟಿಗೆ ಮಾತಾಡಿಕೆ ಆದುಲೆಲ್ಲಾತ ಬೇಜಾರಾಕೊ!! ಇಬ್ಬರಿಗೂ ಒಮ್ಮೆಗೆ ಮಾತೇ ಹೊರ್ಡ್‌ತಿಲ್ಲೆ. ಮನ್ಸ್ ಚುಳ್ಳಂಗೆ ಆತುಟ್ಟು. ಚಪ್ಪೆ ಆದ ಹೆಣ್ಣ್‌ನ ಮೋರೆ ನೋಡಿ ರಾಮಣ್ಣನೇ ಸಮಾಧಾನ ಮಾಡಿಕೆ ಮೆಲ್ಲಂಗೆ ಹೇಳ್ದೊ "ನಾವೂ ಇಂಗ್ಲೀಷ್ ಕಲಿಯೊನೊ!!" ಬೇಬಿಯಕ್ಕ ಕಣ್ಣ್‌ಲಿ ನೀರ್ ತುಂಬುಸಿಕಂಡ್.

ಮಯಮಯ ದೃಷ್ಟಿಲಿ ಗಂಡನ ಮೋರೆ ನೋಡ್ರೆ "ನಾ ಹೆಂಗೂ ಮೂರ್ನೇ ಇಯತ್ತೆವರೆಗೆ ಹೋಗಳೆ. ನೀ ಸಾಲೆನ ಮೋರೆನೇ ನೋಡದಂವ. ಬುಡು... ಆಚೆಕರೆ ದಾಮುನ ಮಂಜ ಕುಟ್ಟ ಹೈಸ್ಕೂಲ್‌ಗೆ ಹೋದೆ ಅಲ್ಲ.. ಅಂವನೊಟ್ಟಿಗೆ ಕೇಳಿ ಮಾತಾಡಿಕೆ ಕಲ್ಯೊನೊ" ಹೇಳ್ದವು ಸೀದ ಎದ್ದ್ ದಾಮುನ ಮನೆಕಡೆ ಹೊರ್ಟೊ. ಆ ಹೈದನೂ ಚುರ್ಕುನವನೇ... ಹಾಯ್.. ಹಲೋ.. ಹೌ ಆರ್ ಯು... ವಾಂಟ್ ಜ್ಯೂಸ್, ಮಿಲ್ಕ್, ಕಮ್.. ಸ್ಲೀಪ್.. ಗೋ... ಸಿಟ್... ಈಟ್... ಬಾಯ್... ಹಿಂಗೆ ಸುಲಭದರ ಬರ್ದ್ ಕೊಟ್ಟ್ ಕಳ್ಸಿರೆ, ಮನೆಗೆ ಬಂದ ರಾಮಣ್ಣ ಹೆಣ್ಣ್‌ಗೆ ಇಂಗ್ಲೀಷ್ ಕಲ್ಸಿ ಕೊಡ್ತಿದ್ದೊ. ಒಮ್ಮೊಮ್ಮೆ ಜ್ಯೂಸ್ ಹೋಗಿ ಚೂಸ್ ಆದರೆ.. ಹಾಯ್‌ಗೆ ಬಾಯ್ ಅಂತ ತಪ್ಪಪ್ಪು ಹೇಳಿಕಂಡ್ ನೆಗಾಡಿಕಂಡೊ!!

ಜಾತ್ರೆಗೆ ದಿನ ಹಕ್ಕಲೆ ಆದಂಗೆ ಬೇಬಿಯಕ್ಕಂಗೆ ಯಾಗ ಒಮ್ಮೆ ಪುಳ್ಳಿನ ನೋಡ್ನೆತ ಮನ್ಸೊಳಗೆನ ಚಡಪಡಿಕೆ ಜಾಸ್ತಿ ಆಗ್ತುಟ್ಟು. ಒಟ್ಟಿಗೆ ಗಂಡನ ಮೇಲೆ ಪರ್‌ಂಚಟನೂ!!

'ಕೂಸುಗೆ ಜೇನ್ ತಂದಿಸಿಕೆ ಹೇಳಿದ್ದೆ.. ತಂದಳರಿಯಾ... ಜಾಲ್ ಕರೆ ನೀರಡಿ ದೊಂಬೆ ಕಡೆ ಜಲ್ಲಿ ಹಾಕಿತ್ಲೆ. ಕೂಸು ಆಡಿಕೆ ಹೋಗಿ ಜಾರಿ ಬೀಳಿಕೆ

ಬೊತ್ತ್... ಹಿಂಗೇ'

ಒಟ್ಟೊಟ್ಟಿಗೆ ಇಂಗ್ಲೀಷ್ ಕಲಿದೂ ಬುಟ್ಟತ್ಲೆ. ಬೇಬಿಯಕ್ಕ ಪಾಚೋಳ್ತಿನ ಬಾಕೆ ಹೇಳಿ ಇದ್ದ ಒಲ್ಲಿ, ಮೊಂದ್‌ರಿನ ಎಲ್ಲಾ ಒಗ್ಯಕೆ ಬೆರ್ಸಿದೊ. ಕಪಾಟ್ ಮೇಲೆ ಇದ್ದ ಹಾಸಿಗೆಗಳ ಜಾಲ್‌ಲಿ ಬಿಸಿಲ್‌ಗೆ ಬುಡ್ಸಿ ಧೂಳ್ ಹಾರ್ಸಿದೊ. ರಾಮಣ್ಣ ಕುಂಞಣ್ಣನ ಕರ್ಸಿ ನಾಕ್ ಕೀಲೆ ಕೆಂದಾಳೆ ಬೆಂಡ ತೆಗ್ಸಿಸುದರೊಟ್ಟಿಗೆ ಕಳ್ದ ವಾರ ಕಡ್ಡಿಸಿದ ಬಾಳೆಗೊನೆ ಇನ್ನೂ ಹಣ್ಣಾತ್ಲೆ. ಪಡ ಇಜ್ಜಿ ಇಸಿದ್ದರೆ ಒಳ್ಳದಿತ್ತ್‌ತ ಗೋಣ್ಗಿಕಂಡೇ ಕೆಲ್ಸ ಮಾಡಿಕಂಡವೆ. ಜಾತ್ರೆ ಸಮಯದ ಮಳೆಗೆ ಫೋನ್ ಬೇರೆ ಹಾಳಾಗಿ ಅಣ್ಣು ಎಷ್ಟೊತ್ತಿಗೆ ಎತ್ತಿದೆತನೂ ಹೇಳಿಕೆ ಗೊತ್ಲೆ. ಅಷ್ಟೊತ್ತಿಗೆ ಗುಡ್ಡೆಕರೇಂದ ಯಾವುದೋ ವಾಹನದ ಸದ್ದ್ ಕೇಳ್ದಂಗಾಗಿ ಬೇಬಿಯಕ್ಕ ಮನೆ ಒಳಗೆಂದ ಜಾಲ್‌ಕರೆಗೆ ಬಂದ್ ಎತ್ತಿದೊ.. ಮೆಲ್ಲಾನೆ ವಾಹನ ಸದ್ದ್ ಜೋರಾಗಿ, ಆ ಕಾರ್ ಸೀದ ಮನೆ ಜಾಲ್ ಗೇ ಬಾತ್. ನೋಡ್ರೆ ಅಣ್ಣು!! ಅಯ್ಯೆ, ಅಪ್ಪ ಮೆಲ್ಲನೆ ಕಾರ್ ಕಡೆಗೆ ಬಾಕನ ಅಣ್ಣುನೇ ಕಾರ್‌ಂದ ಇಳ್ದ್ ಓಡಿ ಬಂದ್ ಅಪ್ಪನ ಕೈ ಹಿಡ್ಕಂಡರೆ, ರಾಮಣ್ಣ ಅವನ ಕೈ ಜಾರ್ಸಿ ಕಾರ್ಕಡೆ ಹೋದವೆ. ಅವ್ಕೆ ಪುಳ್ಳಿನ ಕಾಂಬಕೆ ಆಸೆ!! ಕಾರ್‌ಂದ ಇಳ್ದ ಸೊಸೆ "ಏನು ಅತ್ತೆ... ಏನು ಮಾವ..ಚೆನ್ನಾಗಿದ್ದೀರಾ.."ತ ಕೇಳ್ದರ್ಲಿ ಏನೂ ಹೊಸತನ ಇತ್ಲೆ. ಪ್ರಾಯದ ಕಣ್ಣ್‌ಗಳ ಇಷ್ಟ್ ದಿನದ ಕನ್ಸ್.. ಕೂಸು ಅನುಜ್ಞಾ ಕಾರ್‌ಂದ ಇಳ್ದದರ ನೋಡಿ, ಬೇಬಿಯಕ್ಕ ಕಲ್ತ ಇಂಗ್ಲೀಷೂ ಮರ್ತೋಗಿ 'ಹೋಯ್... ಹೌ ರಾಯು' ಅಂತ ಕೇಳ್ದೊ. ಅದರ ಕೇಳಿ ಆ ಕೂಸು... ನೆಗಾಡ್ತ "ಅವ್ವಾ... ನಾ ಉಶಾರೊಳೆ... ನೀವು ಹೆಂಗೊಳರಿ"ತ ಬಂದ್ ಅಜ್ಜಿನ ಬಾಚಿ ತಬ್ಬಿಕಂಡರೆ ಅಜ್ಜ, ಅಜ್ಜಿಗೂ ಒಮ್ಮೆಗೆ ಏನೂ ಗೊತ್ತಾಗ್ತಿಲ್ಲೆ. ನಾವು ಇಷ್ಟ್ ದಿನ ಭಂಗ ಬಂದ್ ಕಲ್ತ ಇಂಗ್ಲೀಷ್ ಎಲ್ಲಿ... ಕೂಸು ನಮ್ಮೊಟ್ಟಿಗೆ ಮಾತಾಡ್ತಿರುವ ಅರೆಬಾಸೆ ಎಲ್ಲಿ!! ಅಜ್ಜನ ಕಣ್ಣ್‌ಲೂ ನೀರ್ಮಾತ್ರ... ಮಾತೇ ಇಲ್ಲೆ..

ಆಗ ಅಣ್ಣುನೇ ಹೇಳ್ತ್.. "ಪೊಪ್ಪಾ... ನನ್ನ ಕೂಸು ಅರೆಬಾಸೆ ನನ್ನಷ್ಟೇ ಲಾಯಿಕ್ ಮಾತಾಡ್ದೆ... ನಂಗೆ ಅಮೇರಿಕಕ್ಕೆ ಹೋದ ಮೇಲೆ ಗೊತ್ತಾತ್. ಅಲ್ಲಿನ ಜನ ಅವರ ಸಂಸ್ಕೃತಿ, ಭಾಷೆನ ಎಷ್ಟು ಪ್ರೀತಿಸುವೆತ. ಅಲ್ಲಿ ಇಂಗ್ಲೀಷ್ಲಿ ಮಾತಾಡ್ರೆ, ಅವರ್ದೇ ದಾಟಿಲಿ ಉತ್ತರ ಕೊಟ್ರೆ ನಮ್ಮ ಹಾರೈಸುವೆ. ಇಲ್ಲರೆ ನಮ್ಮ ನೋಡಿ

ನೆಗಾಡ್ವೆ!!! ಅದ್ ಅವರ ಭಾಷಾಭಿಮಾನ. ನೀವು ಹೇಳ್ದರ ನಾ ಮರ್ತತ್ಲೆ ಪೊಪ್ಪಾ.. ಮಕ್ಕ ಕನ್ನಡ, ಇಂಗ್ಲೀಷ್ ಶಾಲೆಗೆ ಹೋದ ಮೇಲೆ ಕಲ್ತವೆ. ಆದರೆ ನಾವು ಮಕ್ಕಳೊಟ್ಟಿಗೆ ಅರೆಬಾಸೆಲಿ ಮಾತಾಡದಿದ್ದರೆ ಅವು ನಮ್ಮ ಭಾಷೆ ಕಲಿದು ಯಾಗ? ಆಚೆ ಮನೆ ಮಕ್ಕ ಶಾಲೆಗೆ ಹೋಕೆ ಸುರು ಮಾಡ್ವಾಕನ ಮನೆಲಿ ಕನ್ನಡ ಮಾತಾಡಿರೂ ನೀವು ನನ್ನೊಟ್ಟಿಗೆ ಹಂಗೆ ಮಾಡ್ತ್ಲೆ. ನಾ ಕನ್ನಡ ಮಾತಾಡ್ರೂ ಬೊಯ್ದ್ ಅರೆಬಾಸೆಲೇ ಮಾತಾಡ್ತಿದ್ದರಿ. ಅಮೇರಿಕದವ್ಕೆ ಹೆಂಗೆ ಅವರ ಭಾಷೆ ಮೇಲೋ.. ಹಂಗೆ ನಂಗೂ ನನ್ನ ಅರೆಬಾಸೆ ಅಷ್ಟೆ. ಸರಿಯಾದ ಇಂಗ್ಲೀಷ್ ಬಂದದ್ ಸುಮಾರ್ 500 ವರ್ಷಂದ ಈಚೆಗೆ.. ಅದರ್‌ಂದಲೂ ಹಳ್ತೇ ನಮ್ಮ ಅರೆಬಾಸೆ ಆಗಿರ್ದು!!?? ಯಾಕೆಂತೇಳ್ರೆ ಅದೆಷ್ಟೋ ಹಳೆಗನ್ನಡದ ಪದಗಳ ನಾವು ಇನ್ನೂ ಮಾತಾಡುವೆ. ಹಂಗಿರ್ಕಾಕನ ನಾವ್ಗೆ ಅರೆಭಾಸೆಲಿ ಮಾತಾಡಿಕೆ ನಾಚಿಕೆ ಯಾಕೆ? ಇಂಗ್ಲೀಷ್ನನೆ ಲ್ಯಾಟಿನ್‌ಲಿ ಬರ್ದ್ ಭಾಷೆ ಒಳ್ಳೊಯೊತೇಳ್ರೆ ಕನ್ನಡ ಲಿಪಿಲಿ ಬರ್ದ್ ಅರೆಬಾಸೆನ ಒಳ್ಸಿಕೆ ಆಕಿಲೆನಾ?? ...ಬನ್ನಿ...ಪೋಯಿ... ಕಾರ್‌ಂದ ಬಟ್ಟೆಬರೆ ಎಲ್ಲಾ ಮತ್ತೆ ಇಳ್ಸಕ್"..

ಬುಡ ಚಿಗ್ರಿ ಹೊಸ ದೈ ಬಾತೆಂಬ ಕುಸಿಲಿ ರಾಮಣ್ಣನೂ ಮಂಜನ ತಬ್ಬಿಕಂಡ್, ಪುಳ್ಳಿನ ಎತ್ತಿಕಂಡ್ ಮನೆ ಕಡೆಗೆ ಹೊರ್ಟೊ.

(ಬೆಂಗಳೂರ್‌ನ ಅರೆಬಾಸೆ ಜನಾಂಗ ಬಾಂಧವ್ಯೆ ಆಯೋಜಿಸಿದ್ದ "ಅರೆಬಾಸೆ" ಮುಡ್ಪು ಕಥಾಸ್ಪರ್ಧೆ"ಲಿ ಪ್ರಥಮ ಬಹುಮಾನ ಪಡ್ಕಂಡ ಕಥೆ...)

* * * *

ಒಂದ್ ತೊಟ್ಟೆಯ ಕಥೆ!!

"ಇಂದನಿಯಾ... ಕತ್ತಲೆ ಇಡೀ ಸರಿ ನಿದ್ದೆನೇ ಇಲ್ಲೆ. ಏನೇನೋ ಕನ್ಸ್. ನಾವ್ ಮಲ್ಗುವ ತಲೆಕಡೆ ಹೊರಗೆ ಮಾಡ್‌ಂದ ಎನೋ ಕೊಟಕೊಟಾತ ಸದ್ದ್. ಯಾರೋ ಮಾತಾಡಿಕಂಡಾಂಗೆನೂ ಕೇಳ್ತಿತತ್. ನೀವ್ಗೇ ಏನಾರ್ ಗೊತ್ತಾಗುಟ?" ಹೇಳಿಕಂಡೇ ಗಂಡ ಚಿನ್ನಣ್ಣನ ಬಟ್ಲ್‌ಗೆ ಓಡಿಟ್ಟುನೂ, ಕಡ್ಡೆ ಉಪ್ಪಣದ ಗೈಪುನೂ ಅಳಗೆ ಅಡೀಂದ ಗೋಂಚಿ ಇಕ್ಕಿಕೆ ಹೊರ್ಟೊ ಎಂಕಮ್ಮಕ್ಕ.

"ಇಲ್ಲೆಲ್ಲಾ.. ನಂಗೆ ನಿನ್ನೆ ಮಲ್ಗಿದವಂಗೆ ನಿನ್ನ ಅಪ್ಪನ "ಮಂಗುರ್ಣಿ" ದೆಸೆಂದ, ಕೊಟಕೊಟನೂ ಕೇಳ್ಳ್ಲೆ!! ಎಂಥದೂ ಇಲ್ಲೆ. ಬೆಳ್ಗಾರ್‌ಗೆ ಒಮ್ಮೆ ನಾ ಉಚ್ಚೆ ಹೊಯ್ಯಕೆ ಎದ್ರ್ ಕಾಕಕನ ಅಟ್ಟಲಿ ಎಲಿಗ ಓಡ್ದ್ ಕೆಳ್ತ್. ನಿಂಗೆಲ್ಲೋ ಭ್ರಮೆ!! ಸತ್ತ ನಿನ್ನ ಶಾಲೆ ಮಾವನ ಕೊಲೆ ಬಂದಿರೊಕು!! ನೀ ಎಷ್ಟಾದರೂ ಅವರ ಕೊಂಡಾಟದ ಸೊಸೆ ಅಲ್ಲಾ??!!" ಹೇಳಿ ಓಡಿಟ್ಟ್‌ನ ಮುರ್ದ್ ಗೈಪುಗೆ ಕಂತ್‌ಸಿ ತಿಂಬಕೆ ಸುರುಮಾಡ್ಡೊ ಚಿನ್ನಣ್ಣ. ಅತ್ತೆ ಮೇಲೆನ ಸಿಟ್ಟ್ ಕೊತ್ತಿ ಮೇಲೆ ತೇಳುವಾಂಗೆ "ಇವ್ಕೆ ಎಲ್ಲಾ ಸಸಾರನೇ..." ತ ಗಂಡಂಗೆ ಬೊಯ್ದ್ ಒಲೆಲಿದ್ದ ಸೌದೆ ಕೊಳ್ಳಿನ ಸಿಟ್ಟ್‌ಲಿ ಭೊಸ್ಕಂತ ಇನ್ನೂ ಒಳಗೆ ನೂಕಿದೊ. ಒಲೆಲಿದ್ದ

ಕೆಂಡದಾಂಗೆ ಕೆಂಪಾದ ಹೆಣ್ಣ್‌ನ ಸುರ್ಪ ನೋಡಿ ಚಿನ್ನಣ್ಣ "ಸರೀ... ಬುಡು... ಇನ್ನೊಮ್ಮೆ ಹಂಗೇನಾದರ್ ಆದರೆ ನೋಡ.. ನಾಳ್ದ್ ಹೆಂಗೂ ಪುತ್ತೂರ್‌ಗೆ ಹೋಕುಟ್ಟು... ಜೋಯಿಸರೊಟ್ಟಿಗೆ ಕೇಳೊನೊ.. ಆತಾ" ಹೇಳಿ ನೆಗಾಡಿಕಂಡ್, ಒಳ್ದ ಉಪ್ಪಣದ ಹೊಡಿ ತುಂಡುನ ಚಪ್ಪಿಕಂಡ್, ಬಟ್ಲ್‌ನ ನೀರಡಿಲಿಸಿ ಕೈ ತೊಳ್ದ್ ತೋಟಕ್ಕೆ ಹೋದೊ. ಆ ದಿನ ಕತ್ತಲೆಗೂ ಪುನಃ ಅದೇ ಸದ್ದ್ ಕೇಳಿ ಎಚ್ಚರಾದ ಎಂಕಮ್ಮ, ಗೂರೆಳಿತ್ತಿದ್ದ ಗಂಡನ ಕುಟ್ಟಿ ಕುಟ್ಟಿ ಎದ್ರ್‌ಸಿ "ನೋಡಿ.... ಇಂದ್ ನೂ ಅದೇ ಸೌಂಡ್. ಹೋಗಿ ನೋಡಿಯಾ..." ಹೇಳ್ದಕ್ಕೆ, ನಿದ್ದೆ ಕಣ್ಣ್‌ಲೇ ಲೈಟ್ ತಕಂಡ್ ಹೋದೊ ಚಿನ್ನಣ್ಣ. ಸೂರಡಿಲಿ ಎಂತದೂ ಕಾಣದಿದ್ದರೂ, ಕೇಳ್ದ ಸದ್ದ್‌ಗೆ ಮಾತ್ರ ನಿದ್ದೆ ಫುಲ್ ಬುಟ್ಟೋತ್. ತಿರ್ಗಿ ಬಂದ್ "ಸೌಂಡು ಕೇಳ್ದು ಹೌದುಯಾ.. ಆದರೆ ಎಂತದೂ ಕಾಂಬೊದ್ಲೆ!! ನಾಳೆ ಬೊಳ್ಪುಗೆ ಬೈನಾಟಿಗೊಂದು ಈಡ್ ತೆಗ್ದಿಸೊನೊ... ನೋಡ!!" ಹೇಳಿ ಜಾರ್ದ ಕಂಬ್ಳೈನ ಸರಿಮಾಡಿಕಂಡ್ ಅಂಗಾತ ಬಿದ್ದ್‌ಕಂಡೊ.

ಮಾರ್ನೆ ದಿನ ಬೊಳ್ಪುಗೆ ಎದ್ರಿಕೆ ಮೊದಲೇ ಚಿನ್ನಣ್ಣನ ಅವ್ವನ ಪರ್ರಂಚಟ ಸುರಾಗುಟು. "ನಾ ಹೇಳ್ದೆ.. ಆ ಮೂಲೆಲಿ ಸಿಡ್ಲ್ ಬೊಡ್ದ್ ಸತ್ತ ಕೊಟ್ಟೆ ಚಾಳೆನ ತೆಗ್ಗೊಕುತ.. ಇವಂಗೆ ನೋಡ್ರೆಯಾಗ ನೋಡ್ರೂ ಪುಸೋತ್ತಿರಿಕಿಲೆ!! ಊರ್ಲಿದ್ದ ಕೊಟ್ಟುಕುಡ್ತಲೆಗೆಲ್ಲಾ ಅದರ್ಲೇ ಬಂದ್ ಸತ್ತೋಳೊ. ಏನ್ನೊಬ್ಬೆ, ಏನ್ ಬೊಬ್ಬೆ!! ಇನ್ನ್ ಆ ಕೊಟ್ಟೆ ಚಾಳೆಗೆ ಯಾವ ರಣ, ಪೀಡೆ ಬಂದ್ ಸೇರಿಕಂಡತೊ? ಕತ್ತಲೆ ಇಡೀ ಅತ್ತನ ಮಾಡ್ ಕರೇಂದ ಕೊಟಕೊಟ ಸದ್ದ್. ಇರ್ಲ್ ಇಡೀ ನಾ ಕಣ್ಣೇ ಮುಚ್ಚಿತ್ಲೆ!! ಓ ಚಿನ್ನಾ.. ಇಂದಾರ್ ಒಮ್ಮೆ ಹೋಗಿ ಆ ನಿನ್ನ ಜೋಯಿಸನೊಟ್ಟಿಗೆ ಕೇಳಿ ಬಾ ಮಾರಾಯಾ... "ಅಯ್ಯೆನ ಸುಪ್ರಭಾತಕ್ಕೇ ಎದ್ದ ಚಿನ್ನಣ್ಣ "ಆದವ್ವ.. ನಿನ್ನ ಈ ಪರ್ರ್ರಂಚಟನ ಒಮ್ಮೆ ನಿಲ್ಸಿಯಾ" ತೇಳಿ ಹಲ್ಲುಜ್ಜಿ, ಚಾ ಕುಡ್ದ್ ಜೋಯಿಸನಕ್ಕಲೆ ಹೋಗಿ ಎತ್ತಿದೊ. ಸುಮಾರ್ ಹೊತ್ತ್ ಕುದ್ದ್ ಕುದ್ದ್, ಕಡೇಗೆ ಮೂರ್ ಘಂಟೆ ಹೊತ್ತ್‌ಗೆ ಜೋಯಿಸನ ಮುಂದೆ ಕುದ್ರುವ ಭಾಗ್ಯ ಸಿಕ್ಕಿತ್ ಇವ್ಕೆ. ಜೋಯಿಸನೂ ಕವ್ಡೆ ಹಾಕಿ, ಕೂಡ್ಸಿ, ಕಳ್ದ್.... ಬರ್ದದರ ಮೇಲೇ ಮೂರ್ ಮೂರ್ ಸರ್ತಿ ಗೀಟ್ ಹಾಕಿದರ್ಲಿ ಆ ಪೇಪರೇ ಒಟ್ಟೆ!!

"ನೋಡಿ ಚಿನ್ನಣ್ಣಾ... ನಿಮ್ಮ ಮನೆಗೆ ಛಿದ್ರ ದೋಷ ಆಗುಟು. ನೀರಡಿ ಕೊಟೆಗೆ ಹಕ್ಕಲೆ ತಗ್‌ಡ್, ಕುಪ್ಪಿಲಿ ಮೊಸಿ ತುಂಡ್ ಮನಿ ಏನಾರ್ ಸಿಕ್ಕಿದ್ ನೆನ್ಪುಟ್ಟಾ?... ನೆರೆಕರೆಯವರೊಟ್ಟಿಗೆ ನಿಷ್ಠುರ, ಕುಟುಂಬಲಿ ಒಳಜಗಳಗ ಏನಾರ್..."

"ನೆರೆಕರೆಯವರ ಜಗಳ ನಾಯಿ, ಕೋಳಿಗಳಿಗೆ ಯಾಗೋಳ್ ಇದ್ದದೇ... ಕುಟುಂಬ ಜಗಳ, ಕೋಮಣ ಜಿಡ್ಡ್ ಹೋಗುವಂಥದಲ್ಲ!! ಆದರೂ ಯಾರೂ ಮಾಡಿರಿಕಿಲೇಂತ ಹೇಳಿಕೆ ಆಕಿಲೆ. ಅಂಥಾ ಕೊರ್ಸಂಡಿ, ಕಣ್ಣೋಜಿ, ನಂಜಿ ಕಾರಿಕಂಡಿರವೇ ನಮ್ಮಲ್ಲಿ ಒಳದ್. ಇದ್ ಯಾರ್ ಮಾಡಿರುವೊತ ಒಮ್ಮೆ ಪ್ರಶ್ನೆಲಿ ನೋಡಿ? ಹಂಗೇ ಇದ್ದೆ ನಿಮೂರ್ತಿ ಎಂಥ ಜೋಯಿಸರೇ?"

"ನೋಡಿ ಚಿನ್ನಣ್ಣಾ... ಯಾರ್ ಮಾಡ್ದೋತ ಬೇಡ. ಮತ್ತೆ ಅದ್ ಇನ್ನಷ್ಟ್ ಜಗಳಕ್ಕೆ ದಾರಿ. ಅಷ್ಟಕ್ಕೂ ಇದ್ ನಿಮೂರ್ತಿ ಮಾಡಿಕೆ ಆಗದ ಸಮಸ್ಯೆ ಏನೂ ಅಲ್ಲಲ್ಲ??!! ಒಂದ್ ಸಣ್ಣ ಕಿರಿಯ ಮಾಡಿ, ಕಳ್ದ್ ತೆಗೆಯೊನೊ ಅಷ್ಟೇ!! ನಾಳೆ ಬುಟ್ಟ್ ನಾಳ್ದ್ ನಂಗೆ ಚೂರು ಪುರ್ಸೊತ್ತು ಉಟ್ಟು... ಅದೇ ದಿನ ಆದು... ಹೊರಗೆ ಹೈದ ನೀವ್ವೆ ಸಾಮಾನ್ ಚೀಟಿ ಕೊಟ್ಟದೆ. ಆಕಿಲೆನಾ?"

ಜೋಯಿಸಂಗೆ ಕಾಣಿಕೆ ಇಸಿ, ಹೈದ ಕೊಟ್ಟ ಚೀಟಿನನೂ ತಕಂಡ್ ಚಿನ್ನಣ್ಣ ಮನೆಗೆ ಎತ್ತ್‌ಕಾಕನ ನಡುರಾತ್ರೆ. ನೋಡ್ರೆ ಸದ್ದ್ ಮಾತ್ರ ಚೂರು ಕಮ್ಮಿ... ಆಗೊಮ್ಮೆ, ಈಗೊಮ್ಮೆ ಅಷ್ಟೆ!!

ಅಂತೂ ಜೋಯಿಸ ಹೇಳ್ದ ಸಾಮಾನ್‌ಗಳೆಲ್ಲಾ ತಂದ್ ಮನೆಲಿಸಿ ಕಳ್ದ್ ತೆಗೆಯಕೆ ಎಲ್ಲವೂ ಕಾದ್ ಕುದ್ದೊ. ಯಾರಿಗೂ ಗೊತ್ತಾಕೆ ಬೊತ್ತುತ ಯಾರಿಗೂ ಹೇಳ್ತ್ಲೋ. ಆದರೂ ಎಂಕಮ್ಮಕ್ಕ ಮಾತ್ರ ಅವರ ತವ್ರ್ ಮನೆಗೆ ಹೇಳಿ ಅಪ್ಪನ ಬಾಕೆ ಮಾಡಿಕಂಡೊ. 'ಒಂಬತ್ ನಾಕ್ ಗಂಟೆಗೇ ಬನ್ನೆ'ತೇಳ್ದ ಜೋಯಿಸರ್ ಬಂದ್ ಎತ್ತ್‌ಕಾಕನ ಗಂಟೆ ಎಂಟ್!! ಬಂದ ಹಾಗೇ ಮಂಡಲ ಹಾಕಿ, ಕಾಯಿ ಗಡಿಲಿ ನೆಣೆ ಬತ್ತಿ ಇಸಿ ಕೆಲ್ಸ ಎಲ್ಲಾ ರಪರಪ ಮಾಡಿ ಮುಗ್ಸಿದೊ. ಕಡೆಗೆ ಒಂದ್ ಹೂಂಜನನೂ ತಲೆಕೊಯಿದ್, ಒಟ್ಟಿಗೆ ಬಂದ ಹೈದನೊಟ್ಟಿಗೆ ಬ್ಯಾಗ್‌ಗೆ ತುರ್ಕಿ ಇಸಿಕಂಡೊ!! ಎಲ್ಲರ ಎದ್ರ್‌ಸಿ ನಿಲ್ಲ್‌ಸಿ "ಮನೆದೇವ್ರ, ಗ್ರಾಮದೇವ್ರ, ಸೀಮೆದೇವ್ರ ನೆನ್ಸಿಕಂಡ್... ಮೀದ ನೀರ್‌ಲ್ಯಾಗಲಿ, ಉಟ್ಟ ಬಟ್ಟೆಲ್ಯಾಗಲಿ, ಹೊಯ್ದ ಎಣ್ಣೆಲ್ಯಾಗಲಿ, ಹೊತ್ತ್‌ಸಿದ ಏರ್‌ಪೇರ್, ಬತ್ತಿಲ್ಯಾಗಲಿ, ಹಾಕಿದ ಮಂಡಲಲ್ಯಾಗಲಿ, ಕೊಯ್ದ ಕೋಳಿಲ್ಯಾಗಲಿ ಏನಾರೊಂದು ಕುಂದುಕೊರತೆ ಬಂದಿರ್ದು. ಅದರೆಲ್ಲಾ ಮಾಪ್ ಮಾಡಿ, ಆಗಿರುವ ದೋಷಕಾರ್ಯಕ್ಕೆ ಸಂಪೂರ್ಣ ನಿಮೂರ್ತಿ ಮಾಡಿ ಕೊಡೊಕುತ ನಮ್ಮೆಲ್ಲರ ಪ್ರಾರ್ಥನೆ" ಹೇಳಿ ಕರೆಲಿ ಹಾಳೆ ಕಿಳ್ಳಿಲಿದ್ದ ಕುರ್ದಿ ನೀರ್‌ನ ಎಲ್ಲವ್ಕೂ ಸಿಡ್ಕಿದೊ ಜೋಯಿಸರ್.

"ಲೈಟ್ ಹಿಡ್ಕಂಡ್ ಬನ್ನಿ ಚಿನ್ನಣ್ಣಾ... ಕುರ್ದಿ ನೀರ್‌ನ ಮನೆ ಸುತ್ತ ಚೋಂಪೊಕು... ಪೋಯಿ"ತ ಮನೆವರ ಕರ್ಕಂಡ್ ಹೊರ್ಟೊ. ಹೋಕನ ಕೊಟ್ಟೆ ಬಾಳೆನ ಕಡೆ, ಮನೆನ ಮಾಡ್‌ನ ಸೂರಡಿ ದಂಬೆ ಕರೆಲಿ ಬಿಳೀ "ತೊಟ್ಟೆ"ಲಿ ಕಟ್ಟಿಕಂಡ್ ಏನೋ ನೇಲ್ದೆ. ಅದರ ನೋಡಿ "ನೋಡ್ದರಿಯಾ ಚಿನ್ನಣ್ಣಾ... ಮಾಡಿ ಮೊಡ್ಗಿದ್ ಇಲ್ಲ್ಯಟ್ಟು!! ಇಷ್ಟ್ ದಿನ ನೀವ್ಗೆ ಕಂಡತೇಲೆ!! ಈಗ ಹೊರಗೆ ಬಾತ್ ನೋಡಿ. ಇದರ ಹಂಗೇ ಬರೇ ಕೈಲಿ ಹೆರ್ಕಿಬಿಸಾಡ್ದಲ್ಲ. ಕಟ್ಟಿ ಕೊಟ್ನೆ ತಕಂಡೋಗಿ ಹರಿವ ನೀರ್‌ಲಿ ಬುಡಿ. ಚೋಡಿಲಿ ಆದರೂ ಆದು!!" ಹೇಳ್ದ ಜೋಯಿಸ ಅವಂನ ಬಿಲ್ಲ್ ಚುಕ್ತಾ ಮಾಡಿಕಂಡ್, ಕೊಯ್ದ ಕೋಳಿನನೂ ತಕಂಡ್ ಹೋತ್. ಆ ದಿನ ಕತ್ತಲೆಗೆ ಎಂಥ ಸೌಂಡೂ ಇಲ್ಲೆ. ಎಲ್ಲವು ನೆಮ್ಮದಿಂದ ನಿದ್ದೆ ಮಾಡ್ದೊ. ಮಾರ್ನೆ ದಿಸ ಬೊಳ್ಪುಗೆ ನೋಡ್ರೆ, ಕೆಲ್ಸಕ್ಕೆ ಬಂದ ಮಾಂಕು ಬಿಳಿ "ತೊಟ್ಟೆ" ಸಿಕ್ಕಿದ ಜಾಗೆಲಿ ಎಂಥದೋ ಪುರ್ಡಿದೆ. ಅದರ ನೋಡ್ದ ಎಂಕಮ್ಮಕ್ಕ "ಓ ಮಾಂಕು... ನೀ ಎಂಥ ಅಲ್ಲಿ ಹುಡ್ಕುದು? ಅಲ್ಲಿ ನಿನ್ನೆ ಛಿದ್ರದೋಷದ ಸಾಮಾನ್ ಸಿಕ್ಕಿತ್. ನೀನೇ ಏನಾರ್ ತಂದಿಸಿದಾ ಹೆಂಗೆ? ಸೊಯೆ ಇಲ್ಲದಂವ... ನಿನ್ನ ಹುಲಿ ಹಿಡ್ಯಕೆ..." ಅಯ್ಯೊ ಎಂಕಮ್ಮಕ್ಕ... ನಂಗೇನ್ ಮೊಲ್ರಾ... ಗಂಜಿ ಉಂಬ ಮನೆಗೆ ಮಾಡಿ ಮೊಡ್ಗಿಕೆ.. ಮೊನ್ನೆ ಗೊಬ್ಬರ ಎಳ್ಯಕೆ ಬಂದಿರ್ಕಾಕನ, ನೀವ್ ಕಿಚ್ಚಿ ಹಾಕಂಬಕೆ ನಾಕ್ ತುಂಡ್ ಚರ್ರಾಂಡಿ ಮೀನ್ ಕೊಟ್ಟಿದ್ದರಿ ನೋಡಿ. ಇನ್ನೊಮ್ಮೆಗೆ ಆದೂಂತ ಬಿಳಿ "ತೊಟ್ಟೆ" ಲಿ ಕಟ್ಟಿ ಇಸಿದ್ದೆ. ಕೆಳಗಿಸಿರೆ ಈ ಎಲಿ, ಕೊತ್ತಿ ಹೊರ್ದೂತ ಇಲ್ಲಿ ಸೂರಡಿಲಿ, ದೊಂಬೆ ಸೆರೆಲಿ ಹುಗ್ಗ್‌ಸಿ ಇಸಿದ್ದೆ. ಕತ್ತಲೆಗೆ ಎಲಿಗಳೋ, ಹೆಗ್ಗಣನೋ ಬಂದ್, ಎಳ್ದ್ ಜಾರ್ಸಿ ಹೊರಗೆ ತೆಗ್ದಿರೊಕು... ಅದರ ಪಡೆ ಮುತ್ತಿಕೆ!!" ಹೇಳಿ ನೆಗಾಡಿಕಂಡ್ ಅಡ್ಕೆ ಚೊಲ್ಲಿಕೆ ಹೋತ್....

* * * *

ಒತ್ತೆಕೋಲದ ಒಳಗೆ.....

"ಓಯ್ ಅಮ್ಮಣಿ... ಬರ್ವ ಐತೋರ ಊರ್ಲಿ ವಿಷ್ಣುಮೂರ್ತಿ ಒತ್ತೆಕೋಲ.. ನಾ ಅಂತೂ ನಾಕ್ ದಿನ ರಜೆ ಹಾಕ್ಯಳೆ.. ನೀನೂ ಬಂದಿಯನಾ?? ಹೆಂಗೂ ಇಲ್ಲಿವರೆಗೆ ಒತ್ತೆಕೋಲ ನೋಡ್ಲೆ ತ ಹೇಳ್ತಿದ್ದಲ್ಲ!! ನೀ ಶನಿವಾರ ಹಿಂಬತ್‌ಗೇ ಬಾ.. ಒಟ್ಟಿಗೇ ಪೋಯಿ ಕುಳ್ಚಾಟ ನೋಡಿಕೆ. ಕತ್ತಲೆಗೆ ಮಲ್ಲಿಗೆ ಮತ್ತೆ ನಿಂಗೆ ಬೇಬ್ಯತ್ತೆನಲ್ಲಿಗೆ ಹೋಕ್... ಹೆಂಗೆ... ಆದೊಲ್ಲಾ??!!" ಪಾಚು ಹೇಳ್ದರ ಕೇಳಿ ಅಮ್ಮಣಿ ಅಂತೂ ಕೆಬಿಗೆ ಗಾಳಿ ಹುಗ್ಗಿದ ಅಂಬೆಕರ್ ನಾಂಗಾತ್. ಕುಳ್ಚಾಟದ ದಿನ ಹಿಂಬತ್ ನಾಕ್ ಗಂಟೆಗೇ ಒತ್ತೆಕೋಲ ಗದ್ದೆಗೆ ಹೊರ್ಡಿಕೆ ಉರ್ಡಪತ್ತ ಮಾಡಿಕಂಡಿದ್ದ ತಂಗಮ್ಮಕ್ಕ, ಪಾಚುನೂ ಹೊರ್ಟದ್ದದರ ನೋಡಿ "ಮೇಲೇರಿಗೆ ಕಿಚ್ಚಿಕೊಡಿಕೆ ಮೊದ್ಲೇ ಎತ್ತೊಕು ಪಾಚು... ಆ ಲಲ್ತತ್ತಿಗೆ ಬೇರೆ ಬೇಗ ಬಾಕೆ ಹೇಳ್ಯೊಳೊ... ಕಡೆನೆ ನಾ ಯಾಗೋಳು ಲೇಟ್‌ತ ಡೋಂಗಿ ಮಾಡಿಕಂಡ್ ಸಿಕ್ಕಿದವರೊಟ್ಟಿಗೆಲ್ಲಾ ಹೇಳಿಕಂಡಿದ್ದವೆ"ತ ಹೇಳ್ರೆ ಪಾಚು ಮಾತ್ರ ತುಗ್ಯೆತಿದ್ದ ಮೊಬೈಲ್‌ಂದ ತಲೆ ಎತ್ತದೆ "ಅಮ್ಮಾ ನಂಗೆ ಜನ ಬೇರೆ ಒಳೊ... ಅಮ್ಮಣಿ ಬಂದದೆ... ನೀವು ಪೊಪ್ಪನೊಟ್ಟಿಗೆ ಹೋಗಿ" ತೇಳ್ದಂವ ಪುನಃ

ಮೊಬೈಲ್‌ಲಿ ತುಗ್ಯೆದರ ಮುಂದ್ ವರ್ಸಿತ್. ಇತ್ತ ಲಚ್ಚಣ್ಣನೂ "ಒತ್ತೆಕೋಲದ ದೆಸೆಂದಲೋ ಏನೋ.... ಒಂದ್ ವಾರ ಇಲ್ಲದ ಕರೆಂಟ್ ಇಂದ್ ಉಟ್ಟು ಮಾರಾಯ್ತಿ. ಇಂದೂ ನೀರ್ ಬುಡದಿದ್ದರೆ ತೋಟ ಒಣ್‌ಂಗಿ ಬರ್‍ರಂಟಾದು. ನೀ ದಾಮಣ್ಣನ ರಿಕ್ಷಲಿ ಹೋಗು"ತ ಹೇಳಿಕಂಡೇ ಪಂಪುಸೆಡ್ಡ್ ಕಡೆ ಓಡ್ದೊ!! ಮಂಜ, ಮಂಜಾ, ಕೊಳ್ಳಿ ಕುಮಾರತ ಹೊತ್ತ್‌ಕಂಡದೇ ಜಾಸ್ತಿ ಆತ್... ಹೊಗ್‌ಳಿ ಹೊಗ್‌ಳಿ ಅಗ್‌ಳ್ ಹರ್‌ಂಡಿತ್ ಗಡ!! ಎಲ್ಲಾ ಕೂಂಜೋಳ್‌ಲಿ ಬಿದ್ದಮೀನ್‌ಂದ್ ಕಡೆ!! ಮಾನ, ಮೊರ್ಯಾದೆ, ಲಜ್ಜಿ, ಪುಲೇಜಿ ಒಂದೂ ಇಲ್ಲದವು..."ತ ಅಪ್ಪ, ಮಂಜನನೂ ಸೇರ್ಸಿ ಇಡೀ ಗಂಡ್ ಸಂತಾನಕ್ಕೇ ಬೊಯ್ಯಂಡ್ ದಾಮಣ್ಣಂಗೆ ಫೋನ್ ಮಾಡಿಕೆ ಓಡ್ದೊ.

ಬೇಗ ಬನ್ನೆತೇಳ್ದ ಅಮ್ಮಣಿ ಒತ್ತೆಕೋಲ ಗದ್ದೆಗೆ ಎತ್ತ್‌ಕಾಕನ ಮೇಲೇರಿಗೆ ಕಿಚ್ಚಿಕೊಟ್ಟಾಗುಟು!! ಕಾದ್ ಕಾದ್ ಒಂದ್ ರೌಂಡ್ ಚಾಯ, ಗೋಳಿಬಜೆ ಮುಗ್ಸಿದ್ದ ಪಾಚು ಇನ್ನೊಂದ್ ಚಾಯಕ್ಕೆ ಕೈ ಒಡ್ಡಿತಷ್ಟೇ. ಪಚ್ಚೆ ಪಚ್ಚೆ ತೊಂಡೆ ಚಪ್ಪರದ ನಡೂಲಿ ಕಾಂಬ ಹಣ್ಣ್ ತೊಂಡೆನಾಂಗೆ ಹೊಳ್ಳುವ ಅಮ್ಮಣಿನ ನೋಡಿ ಕೈಲಿದ್ದ ಚಾಯ ಸೂಸಿದ್ ಗೊತ್ತೇ ಆತ್ಲೆ. ಬೆನ್ನ್ ತೋರ್ಸಿಕಂಡಿದ್ದ ಬೊಗ್ಗನಾಯಿಗೆ ಬಾಜಿಂಜ ಸೊಪ್ಪುಲಿ ಬೆನ್ನ್‌ಗೇ ಬೊಡ್ಡರೆ ಕುಸಿ ಆಗುವಂಗಾತ್ ಪಾಚುಗೆ!! ಕುಳ್ಳಾಟಕ್ಕೆ ಹೊತ್ತು ಸುಮಾರುಟ್ಟುತ ಕಂಡದೆ. ಇನ್ನೆಂತ ಮಾಡ್ದು.. ಹೊರ್ಟೊ ಇಬ್ಬರೂ ಸಂತೆ ಸುತ್ತಿಕೆ. ವರ್ಷಂದವರ್ಷಕ್ಕೆ ಸಂತೆಡ್ಕ ಅಗಲಗಲನೇ ಆತುಟ್ಟು. ಸೋಜಿ, ಪೆಪ್ಸಿ ಮಾರವು ಮಾತ್ರ ಯಾಗೋಳೋ ಮಾಯ ಆಗೊಳೊ. ಮಾಮೂಲಿನಾಂಗೆ ಈ ವರ್ಷನೂ ಐಸ್ಕ್ರೀಂ ವ್ಯಾನ್ ಹಾಕಿದ್ದ ದಿನೇಶ ಪಾಚುನ ನೋಡ್ದವನೇ ತಲೆಕೆಳಗೆ ಹಾಕಿ ದುಡ್ಡು ಲೆಕ್ಕ ಹಾಕ್ಯಂಡ್. ಕುದ್ದತ್. ಕಾರಣ ಉಟ್ಟು. ಚಡ್ಡಿದೋಸ್ತಿ ಪಾಚುಗೆ ಪ್ರತಿವರ್ಷ ಒಂದ್ ಕೋನ್ ಐಸ್ಕ್ರೀಂ ಅಂವ ಫ್ರೀ ಕೊಡ್ದು. ಈಗ ನೋಡ್ರೆ ಇಬ್ಬರ್ ಒಳೊಲ್ಲ!! ಸಂತೆಲಿ ಸೋದರಮಾವನ ಗುರ್ತ ಇಲ್ಲದಾಂಗಾತ್. ಚೆರೆಕುತ್ತದ ಎಲ್ಸಂಡೆ ಬೊಳ್ಳಿಗಳಾಂಗೆ ಇದ್ದ ಕೂದಲ್‌ನ ಬಾಚದೇ ಎದ್ದ್ ಬಂದವ್ಕೇನೂ ಕಮ್ಮಿ ಇತ್ಲೆ. ಇನ್ನ್ ಪಾಚುನ ಮೇಲೆ ಕಣ್ಣ್ ಹಾಕಂಡಿದ್ದ ಗೂಡೆಗ ಒಟ್ಟಿಗೆ ಇರ್ವ ಅಮ್ಮಣಿನ ನೋಡಿ ಚೌಳಿಮೂಡೆ ಕೊಡ್ಕ್ ಸಿಕಂಡ ಕುರೆ ಮೊರಿನಾಂಗೆ ಆಡ್ತಿದ್ದದೂ ಸುಳ್ಳಲ್ಲ!! ಎದ್ರ್‌ಂದ ಭಾರೀ ಲಾಯ್ಕ್ ಕಂಡರೆತ ಹೊಗ್ಳಿಕಂಡ್ ಹಿಂದೆಂದ ಕೇಡ್ಡೇಳಿಕಂಡ್, ಅತ್ತ ಅಳಗೆಲ್ಯಲ್ಲ–ಇತ್ತ ಸೌಂಟ್‌ಲ್ಯಲ್ಲತ ಸುತ್ತಿಕಂಡಿರವ್ಕೇನೂ ಸಂತೆ ಅಡ್ಕಲಿ ಬರ ಇತ್ಲೆ!!

ಚಂಡೆ ಸದ್ದ್ ಕೇಳ್ದಕ್ಕೆ ಗಡಿಬಿಡಿಲಿ ಮೇಲೇರಿ ಗದ್ದೆಗೆ ಎತ್ತಿ ನೋಡ್ರೆ ಕುಳ್ಪಾಟ ಸುರಾಗುಟು. ಅಮ್ಮುಣಿಗಿದ್ ಹೊಸಾ ಅನ್ಭವ. ದೆವ್ವ ಕಟ್ಟಿದವ ಸುರ್ಗೆ ಹಿಡ್ಕಂಡ್ ನಿಗಿನಿಗಿ ಕಿಚ್ಚಿ ಸುತ್ತಾ ಓಡ್ದ್... ಮೇಲೇರಿಗೆ ಹಾರಿಕೆ ಹೋದರೆ ಬೆಳ್ಚಾಡರ್ ತಡಿದು.. ಹಿಂಗೇ... ಒಟ್ಟಾರೆ ಹೇಳಿಕೆ ಆಗದಾ ಸಂಗತಿಗ. ನಡು ಇರ್ಳ್ ಕಳ್ತ್. ಪಾಚು ಅಮ್ಮುಣ್ಣಿನ ಬೇಬ್ಯತ್ತೆನಲ್ಲಿ ಬುಟ್ಟು ಬೊಳ್ಪುಗೆ 5 ಗಂಟೆ ಒಳಗೆ ಎತ್ತೊಕು, ಇಲ್ಲರೆ ದೆವ್ವ ಮೇಲೇರಿಗೆ ಬೀಳ್ದು ನೋಡಿಕೆ ಸಿಕ್ಕಿಕಿಲೆತ ಹೇಳಿಕಂಡೇ ಮೊಬೈಲ್‌ಲಿ ಅಲರಾಂ ಇಸಿ ಚಾರ್ಜರ್ ಸಿಕ್ಕ್‌ಸಿ ಮಲ್ಗಿತ್. ಬೊಳ್ಪುಗೆ ಮೈತುಂಬಾ ಚಾಳೆ ತಿರಿ ಕಟ್ಟಿಕಂಡ ದೆವ್ವ ಮೇಲೇರಿಗೆ ಬೀಳ್ದೇ ನೋಡಿಕೆ ಒಂಥರಾ ಹೆದ್ರಿಕೆ. ದೆವ್ವ ಹಂಗೆ ಬೀಳ್ಚಾಕನ ಅಮ್ಮುಣಿ ಒಮ್ಮೆಗೆ ಹೆದ್ರಿ ಪಾಚುನ ಕೈ ಗಟ್ಟಿ ಹಿಡ್ಕಂಡತ್. ಪಾಚುಗೆ ಸ್ವರ್ಗಕ್ಕೆ ಮೂರೇ ಗೇಣ್ ಗಡ!! ಚೂರು ಹೊತ್ತ್ ಕಳ್ದರೆ ಕೈನೊಟ್ಟಿಗೆ ಕಾಲ್ ಕೂಡ ಬಿಸಿಬಿಸಿ ಆತುಟ್ಟು. ಗುಡಿ ಹೊದ್ದ್ ಮಲ್ಗಿದಂವ ಒಲ್ಲಿ ಒಳಗೇ ಹೊಣ್ಕಿ, ಕಣ್ಣ್ ಬುಟ್ಟರೆ ಕಿಡ್ಕೆಂದ ಬಿಸಿಲ್ ಹೊಡ್ದದೆ. ಗಂಟೆ ಎಂಟ್ ಕಳ್ದುಟು!! ಸರೀ ನೋಡ್ರೆ ಅಲರಾಂ ಇಸಿ, ಮೊಬೈಲ್‌ಗೆ ಚಾರ್ಜರ್ ಸಿಕ್ಕ್‌ಸಿ ಮಲ್ಗಿದಂವ ಸುಚ್ಚೇ ಓನ್ ಮಾಡ್ಲೆ!! ಇನ್ನೆಲ್ಲಿಂದ ಮೊಬೈಲ್ ಚಾರ್ಜಾದು??? ಅಲರಾಂ ಹೊಡಿದು? ಮೊಬೈಲ್ ಅಲ್ಲಿಗೇ ಆಫ್ ಆಗುಟು!! ಏಳ್ಸಂವ ಫೋನ್ ಮಾಡದೆ ಇತ್ತ ಅಮ್ಮುಣಿನೂ ಎದ್ದಲ್ಲೆ. ಅಂತೂ ಗಡಿಬಿಡಿಲಿ ಎದ್ದ್ ಓಡ್ರೆ ಜನ ಎಲ್ಲ ಹರ್ಕೆ ಹಾಕಿ ಮಾರಿಕಳಕ್ಕೆ ಹೊಟ್ರೋಳೊ. ಅಲ್ಲಿಂದಲೇ ಅಮ್ಮುಣಿನ ಬಸ್ ಹತ್ತ್‌ಸಿ ಬೇಜಾರ್‌ಲಿ ಮನೆಗೆತ್ತಿದ ಪಾಚುಗೆ, ವಿಷಯ ತಿಳ್ಕಂಡ ತಂಗಮಕ್ಕನೇ ಸಮಾಧಾನ ಹೇಳ್ದೊ.

"ಮೊನ್ನೆ ಕತ್ತಲೆ ಬಸ್‌ಲಿ.. ನಿನ್ನೆ ಒತ್ತೆಕೋಲಲಿ ನಿದ್ದೆ ಗೆಟ್ಟ.. ಹಂಗಾಗಿ ನೀ ಗೋಷ್ಠಿಯೇ ಮಾಡಿರಿಕಿಲೆ ಏನೋ.. ಬುಡು. ಬರ್ವ ವರ್ಷ ಎಲ್ಲವೂ ಒಟ್ಟಿಗೆ ಪೋಯಿ" ಈ ಅಯ್ಯೆಕಳೇ ಹಿಂಗೆ ಅಲ್ಲ.. ಕ್ಷಮಯಾಧರಿತ್ರಿ... ಏಕೋ ಗೊತ್ತೆ??

(ಅದ್ಕೇ ಹೇಳ್ದು ಹೇಂಟೆ ಕೇರ್ದೇ ಹೊಟ್ಟೆ ಅಡಿಗೆತ!!)

* * * *

ಮಟನ್ ಮಾಧವಣ್ಣ....

ಅಂದ್ ಮಳ್ಗಾಲ ಹಳೆಗೇಟ್ ಸಂಕ ಮುಳ್ಗಿ ಪಳ್ಳಿನ ಕೊಡಿಮಾತ್ರ ಕಾಂಬತಿದ್ದ ವರ್ಷ, ಗಂಟ್ಮಾರಾಮು ಪೂಜಿ ಕಟ್ಟಿಕಂಡ್ ಊರು ಬುಟ್ಟು ದೂರದ ಬೊಂಬೈಲಿ ಒಕ್ಕಲ್ ಕುದ್ದಿದ್ದ ಮಾಧವಣ್ಣಂಗೆ ಪುನಃ ಊರುನ ಗ್ಯಾನ ಆಕೆ ಸುರಾದ್ ವಾಟ್ಸಾಪ್‌ಲಿ ಬಂದ ಆ ಪದ್ಯ ನೋಡಿ, ಕೇಳಿ... ಅದೇ ರಾಜರಥದ ಪದ್ಯ..

"ಸುಳ್ಯ ದಾಟಿ ಸಂಪಾಜೆ.. ಮಡಿಕೇರೀಲಿ ತಂಪಾದೆ..." ಹುಟ್ಟಿ ಬೆಳ್ದ ಕುಟುಂಬದವರೊಟ್ಟಿಗೆ ಸರಿ ಹೋಗದೇ ಇರಿಕೂ ಕಾರಣ ಉಟ್ಟು. ಇವಂಗೆ ಪಾಲ್‌ಲಿ ಸಿಕ್ಕಿದ ಬೊಂಳ್ವ ಹಲ್ಸ್‌ನ ಮರಕ್ಕೆ ಅಣ್ಣ ಕಳ್ಪೆ ಹಾಕಿಟುತ!! ಆದರೆ ಕುಟುಂಬ ಜಗಳ, ಕೋಮಣ ಜಿಡ್ಡ್ ಏನ್ ಮಾಡ್ರೂ ಹೋಗುವಂಥದಲ್ಲತ ಅವಂಗೆ ಹೊಳ್ಯಕಾಕನ ಆಗಲೇ ಬಾಂಬೆಲಿ ಒಕ್ಕ್‌ಲ್ ಗಟ್ಟಿಯಾಗಿತ್ತ್. ಆದರೆ ಹುಟ್ಟಿದ ಮೊಣ್ಣ್‌ನ ಪೊರ್ಮಳನ ಹನೀಸೂ ಮರ್ತತ್ಲೆ. ಉಂಬಕೆ ಈಗಳೂ ಕೊಸ್ಲಕ್ಕಿ ಗಂಜಿನೇ ಆಕು!! ಮಂಜನೊಟ್ಟಿಗೆ ಅರೆಬಾಸೆಲೇ ಮಾತಾಡ್ದು. ಹೈದಂಗೂ ಅದೇ ಕುಸಿ. ಶಾಲೆಲಿ ಎಲ್ಲ ಮಕ್ಕ ಇಂಗ್ಲೀಷ್, ಹಿಂದಿ, ಮರಾಟಿ ಮಾತಾಡ್ರೆ ಅವ್ನೆ ಯಾರಿಗೂ ಗೊತ್ತಿಲ್ಲದ ಬಾಸೆ ಮಾತಾಡ್ದೆ

ಒಳ್ದ ಮಕ್ಕಳೂ ಇವನ ಹಂಜ ಮೇಲೆನೇ ಇಸ್ಯೊಳೊ. ಹಿಂಗಿರ್ಕಾಕನ ಒಮ್ಮೆ ಊರುಗೆ ಹೋಗಿ ಎಲ್ಲರ ನೋಡಿಕಂಡ್ ಬಾಕೆ ಮನ್ಸಾದೇ ಪುರ್ಸೊತ್ತಿಲ್ಲೆ ಅಣ್ಣ ಸೋಂಪಣ್ಣಂಗೆ ಫೋನ್ ಮಾಡಿ ಹೇಳಿಯೇ ಬುಟ್ಟತ್ ತಮ್ಮ ಮಾಧವಣ್ಣ. ತಮ್ಮ ಎಲ್ಯಾರ್ ಜಾಗೆ ಕೇಳಿಕೆ ಬಂದದೆನಾಂತ ಅಣ್ಣಂಗೆ ಸಂಶಯ ಸುರಾದರೆ, ಮನೆಹೆಂಗ್‌ಸ್ "ನೋಡ್ದರಿಯಾ... ಕಡೆಗೆ ಗುಡ್ಸಿಟ್ಟ ಕುಂಟು ಮ್ಯಾಪುನೇ ಗತಿತ ಬರ್ತೊಳೊ"ತ ಸೂನೂ ಹೊರ್ಟತ್. ಎಷ್ಟಾದರೂ ಜಾತಿಗೆ ಜಾತಿನೇ ಹಗೆ ಅಲ್ಲ??!!

ನಿಫಂಟ್ ಆದ ದಿನಕ್ಕೆ ಸರೀ ಹುಟ್ಟಿದ ಮನೆಗೆ ಎತ್ತಿದ ಮಾಧವಣ್ಣ ಕಂಡ ಬದಲಾವಣೆಗ ಒಂದೆರಡಲ್ಲ. ಹಳೆಮನೆನ ಪತ್ತಾಯದ ಹಲಗೆ, ಮರಮುಟ್ಟುಗಳೆಲ್ಲಾ ಹೊಸ ಮನೆನ ಬಾಗಿಲ್, ದಾರಂದ, ಬಿಟ್ಟ, ಪಕ್ಕಾಸ್‌ಗಳಾದರೆ, ಕರೆಲಿದ್ದ ಒರ್ ಮಾಡ್‌ನ ನೀರಡಿ ಕೊಟೆಗೆನ ಕುರುಹೇ ಇಲ್ಲೆ!! ಇನ್ನ್ ಸೂರಡಿಗೆ ನೇಲಿಕಂಡಿರುವ ಪಡಿ ಮಂಚ ಎಲ್ಲಿ ಕಾಂಬಕೆ ಸಿಕ್ಕುದು? ಚೂರು ಹೊತ್ತ್ ಕಾಲ್ ನೀಂಡಿ ಕುದ್ದ್ ಮಂಜನ ಕರ್ಕಂಡ್ ಹೊರ್ಟವಂಗೆ ನೆಂಪಾತ್, ದಿವರ ಹಿತ್ಲ್‌ನ ಬೈನಾಟಿಗೆ ಚಾವಡಿ ಹೊಸ್ತಾಗುಟುಗಡ, ಕೈ ಮುಗ್ದ್ ಬರೊನೊತ. ಕಟ್ಟೆ ಪುಣಿ ಎಲ್ಲಾ ಹೋಗಿ ಚೋಡಿ ಕರೆಲೇ ದಾರಿ ಆಗಿ, ತೋಟದ ಕರೆನ ಕಲ್ಲ್ ಕಕ್ಕಟ್ ಹತ್ತಿ ಇಳ್ದಂವ ದಿವರಹಿತ್ಲ್‌ಲಿ ಕಣ್ಣುಜ್ಜಿಕಂಡ್ ಸರಿಯಾಗಿ ನೋಡ್ರೆ ಅಲ್ಲಿದ್ದ ಅಷ್ಟೂ ಕಾಡ್ ಮ್ಯಾನ ಮರಲಿ ಒಳದ್ ಒಂದ್ ನೆಕ್ಕರೆ ಮರ ಮಾತ್ರ. ಅದೂ ಬರುವರ್ಷ ಇರಿಕಿಲೆ ಕಂಡದೆ!! ಬಲ್ಲೆ ಒಳಗೆ ಸುರ್ಗೆ, ಕತ್ತಿ, ಮಣಿಗಂಟೆಗ ಇದ್ದ ಜಾಗೆಗೆ ಸಣ್ಣಮಕ್ಕಳ ದೊಡ್ಡವ್ ಒಬ್ಬೊಬ್ಬನನೇ ಕಳ್ಸ್‌ತಿತ್ಲೆ. ಹೊರೆಗ್ಯಾದ ಹೆಣ್ಮಕ್ಕ ಅಂತೂ ಅತ್ತ ತಿರ್ಗಿನೂ ನೋಡ್‌ತಿತ್ಲೆ. ಈಗ ಮಾತ್ರ ಭಾರೀ ಲಾಯಿಕ್‌ನ ಚಾವಡಿ. ಆಗಲಿ... ಬೈ ನಾಟಿಗೂ ಒಂದ್ ನೆಲೆಸಿಕ್ಕಿತಲ್ಲಾತ ಅಡ್ಡ ಬಿದ್ದ್ ಮುಂದೆ ಹೋದರೆ ಕಾನದ ಕರೆಲಿದ್ದ ಹುಲ್ಲ್ ಕುಮೇರಿ ರಬ್ಬರ್ ಕೂಪಾಗುಟು. ಕರೆಕರೆಲಿದ್ದ ನರ್ವಳ, ಬ್ಯಾಪರ ಕಾಯಿ ದೈಗ ಹೋಗಿ ಅಕೇಶಿಯಾ ದೈ ಮರ ಆಗಿ ಹೋಗುಟು. ಕಡೆಗೂ ಒಂಚೂರೂ ಬದ್ಲಾಗದೆ ಇದ್ದದ್‌ತೇಳ್ರೆ ಕಳ್ಪೆ ಬಿದ್ದಿದ್ದ ಅದೇ ಬೊಂಳ್ವ ಹಲ್ಸ್‌ನ ಮರ. ಕಪ್ಪ್ ಕಪ್ಪ್ ಗೋಂದ್ ಅರ್ಸಿಕಂಡ್ ಅರೆ ಒಣ್ಗ್ಯಂಡಿದ್ದ ಮರ ಮಾತ್ರ ಇವಂಗೆ ಅಯ್ಯೆ, ಅಪ್ಪ ಬುಟ್ಟೋದ ಮಕ್ಕ ಮರ್ಟ್‌ಕಂಡ್ ನಿತ್ತ್ ಕಂಡಿರುವಾಂಗೆ ಕಂಡದ್ ಮಾತ್ರ ಸುಳ್ಳಲ್ಲ!!

ಮಾಧವಣ್ಣ ಊರ್‌ಗೆ ಎತ್ತಿದ ನಾಕ್‌ನೇ ದಿನಕ್ಕೆ ಸರಿಯಾಗಿ ಕೆಡ್ಡಸ. ಇನ್ನ್ ಕೇಳೊಕಾ? ಕಾಡ್‌ಮಾಸ ಆಗಿಯೇ ಆಕು. ಕೆಡ್ಡಸಲಿ ಕಾಡ್ ಮಾಸ ತಿನದಿದ್ದರೆ ಎಲು ಕುಟ್ಟೆ ಚುರ್ದದೆತ ಅಜ್ಜಪ್ಪ ಹೇಳ್ತಿದ್ದ ಮಾತ್ ಇನ್ನೂ ನೆಂಪುಟ್ಟು.

(ಅಂದ್‌ನ ದಿನಲಿ ಕಾಡ್ ಪ್ರಾಣಿಗಳ ಪಡೆ ಮುತ್ತ್‌ಸಿಕೆ ನಮ್ಮ ಹಿರಿಯರಿಗೆ ಇದೊಂದ್ ನೆವನನೂ ಆಗಿದ್ದಿರ್ದುರ್!!).

ತಮ್ಮ ಬಂದದ್ ಜಾಗೆ ಎಳ್ಕಂಬಕಲ್ಲ. ಬದ್ಲ್ ಜಾಗೆ ಬದಲಾವಣೆಗೆ ಮಾತ್ರತ ಗೊತ್ತಾದ ಸೋಂಪಣ್ಣ ತಮ್ಮನ ಬೆಡಿ ಹಿಡ್ಕಂಡ್ ಹೊರ್ಡಿಸಿದೇ ಆಚೆಕರೆನ ನಾಣು. ಎಂಕುನ ಸೇರ್ಸಿಕಂಡ್. ಇಬ್ಬರೂ ಮಾಧವಣ್ಣನ ಹಳೆ ದೋಸ್ತಿಗಳೇ... ಅದಲ್ಲೂರ್ ನಾಣು ಅಂತೂ ತೆಳಿಲಿ ಬಿದ್ದ ಎಲಿನಾಂಗೆ ಇನ್ನೂ ಚುರ್ರ್‌ಂಟಿಕಂಡೇ ಉಟ್ಟು. ಬರೇ ನೆಕ್ಕ್ ಬಸಲೆ!! ಮನೆ ಹಿಂದೆನ ಬೀಜ ಕೊಚ್ಚಿ ದಾಟಿ, ಗುಡ್ಡೆ ಹತ್ತಿ, ಇಳ್ದ್ ಆಚೆಕರೆಗೆ ಎತ್ತ್‌ಕಾಕನ ಮಾಧವಣ್ಣಂಗೆ ಸಾಕೋ ಸಾಕ್.(ಅಭ್ಯಾಸ ಇಲ್ಲೆ ನೋಡಿ!!)

ಆದರೂ ನಾ ಇಂದ್ ಒಂದ್ ಮಿಗ ಹೊಡ್ಡೇ ಹೋದುತ ಹೇಳಿಕಂಡದೆ. ದರ್ಗ್‌ಲಿ ಜಾರಿಕಂಡ್, ಇಳಿವಲ್ಲಿ ಚುರ್ಕರ ಕುದ್ದ್ ಕುಂಡೆ ಜಾರ್ಸಿಕಂಡ್, ಮುಳ್ಳ್, ಗಿಡ್ಡೆ ತರ್ಸಿಕಂಡ್, ಚಂಡೆ ಬಲ್ಲೆ ಒಳಗೆ ತರ್ಚ್‌ಸಿಕಂಡ್ ಅಂತೂ ಇಂತೂ ಗಂಡಿಮೂಲೆಗೆ ಬಂದ್ ಎತ್ತಿದೊ. ಕಡೆಗೆ ಸೋಂಪಣ್ಣನೇ ಇವನ ತಲೆಗೆ ಲೈಟ್ ಕಟ್ಟಿ, ಕೈಗೆ ಬೆಡಿ ಕೊಟ್ಟ್ ಹೊಡಿ ತೇಳಿ ಕರೆಲಿದ್ದ ಹಡಿ ಕೊದೆಂಟಿಗೆ ಬೆನ್ನೂರ್ತ್. ಚೂರ್ ಹೊತ್ತ್ ಕಳ್ದ್ ಚರಚರ ಸದ್ದ್ ಕೇಳಿ, ಬುಟ್ಟ ಲೈಟ್ಗೆ ಕಣ್ಣ್ ಕೊಟ್ಟದರ ನೋಡಿ ಟ್ರಿಗರ್ ಎಳ್ದು ಬುಟ್ಟತ್. ಆದರೆ ಸದ್ದ್ ನೋಡ್ರೆ ವಿಚಿತ್ರ ಕೇಳ್ದೆ.. ಏನೋ ಆಂಜಿದಾಂಗೆ!! ಅತ್ತ ಕೆಂಪನೂ ಅಲ್ಲ, ಬರಿಂಕನೂ ಅಲ್ಲ, ಕಡ್ಡೆ ಅಂತೂ ಅಲ್ಲನೇ ಅಲ್ಲ!! ಅಲ್ಲಾ ಇದೆಲ್ಲ್ಯಾರ್ ಎಲ್ಕಜೆ ಪೀಡೆನ ಕಣ್ಕಟ್ಟ್ ಹೆಂಗೇತ ನೆನ್ಸಿ ನಾಳೆ ಬಂದ್ ನೋಡೊನೋತ ತಿರ್ಗಿಸಾ ನೋಡದೆ ಹೆದ್ರಿಕಂಡೇ ಮನೆಗೆತ್ತಿದೊ. ಮಾರ್ನೆ ದಿನ ಹೋಗಿ ನೋಡ್ರೆ ಗಡಿಗುಡ್ಡೆ ಪುರ್ಬುನ ಆಡ್ ತೋಟೆಗೆ ಸಿಕ್ಕಿ, ತಲೆ ಚೆಲ್ಲ್‌ಚೆಲ್ಲಾಗಿ, ಕೊಟ್ಟೆಕಾಯಿ ಕಟ್ಟಿಟು.. ಅಷ್ಟೇ!! ಅಂತೂ ಪುರ್ಬುಗೆ ಹನೀಸ್ ಬೆಚ್ಚ ಮಾಡಿ, ಹೊಡ್ದ ಆಡ್‌ನ ಚೋಲಿ ಜಾರ್ಸಿ, ಸಜ್ಜಿ ಮಾಡಿ ಕೆಡ್ಡಸ ಮುಗ್ಸಿದೊ. ಅಲ್ಲಿಂದ ಮೇಲೆ ನಮ್ಮ ಮಾಧವಣ್ಣ "ಬಾಂಬೆ ಮಾಧವ" ಹೋಗಿ "ಮಟನ್ ಮಾಧವ"ತ ಪುಗರ್ತೆ ತಕಂಡತ್!!

* * * *

ದುಬೈ ಹೈದಂಗೊಂದ್ ದುರ್ಬೀನ್!!!!

ವಿಮಾನ ಇನ್ನ್ 20 ನಿಮ್ಶಲಿ ಬಜ್ಪೆ ವಿಮಾನ ನಿಲ್ದಾಣಲಿ ಇಳ್ದದೆ.. ಸೀಟ್ ಬೆಲ್ಟ್‌ನ ಸೆಕ್ಕ್‌ಸಿ ಗಟ್ಟಿ ಮಾಡಿಕಣಿತ ಪೈಲಟ್ ಮೈಕ್‌ಲಿ ಕುಂಯಿಗುಟ್ಟಿದರ ಕೇಳಿ ಹಂಗೇ ಕಣ್ಣ್ ಮುಚ್ಚಿದ್ದ ಪ್ರಕಾಶ ರಪಕ್ಕ ಕಣ್ಣ್‌ಬುಟ್ಟ್ ಎದ್ದ್‌ಕುದ್ದತ್. ಊರುಗೆ ಬಾದಕ್ಕೆ ಖುಸಿ ಪಡೊಕೊ ಬೇಜಾರ್ ಮಾಡಿ ಕಣೊಕೊತ ಗೊತ್ತಾಗ್ತಿಲ್ಲೆ!! ಏಕೆಂತೇಳ್ರೆ ಕಳ್ದ ಹತ್ತ್ ವರ್ಷಂದ ಇದ್ ಮಾಮೂಲಿ... ಡಿಗ್ರಿ ಮುಗ್ಸಿ ಸಿಕ್ಕಿ ಸಿಕ್ಕಿದ ಕಡೆ ಎಲ್ಲಾ ಅರ್ಜಿ ಹಾಕಿ ಎಲ್ಲಿನೂ ಕೆಲ್ಸ ಸಿಕ್ಕದೆ ದಿನ ದೂಡ್ದ್... ಈಗನ ಕಾಲಲಿ ಡಾಕ್ಟ್ರ್‌ಗೆ, ಇಂಜಿನಿಯರ್‌ಗೆ ರೋಡ್ ರೋಡ್‌ಗೆ ಒಬ್ಬೊಬ್ಬನಾಂಗೆ ಒಳೊ. ಡಿಗ್ರಿ ಮಾಡ್ದವೆಲ್ಲಾ ಬುಗ್ರಿತಿರ್ಗುಸ್ತೊಳೊ... ಇನ್ನ್ ಈ ಹ್ಯಾಪಂಗೆಲ್ಲಿಂದಾ ಕೆಲ್ಸ ಸಿಕ್ಕುದುತ ಕುಂಞಾತ್ತೆ ಕಡೆಂದ ಟಾಂಟ್ ಹೇಳ್ಸಿಕಂಡದ್... ಊರ್‌ಲೇ ಗೊಬ್ಬರ ಹೊರ್ದಕ್ಕಿಂತ ಗ್ಲಾಸ್, ಪ್ಲೇಟ್ ತೊಳ್ದರೂ ಆದು.. ಬಾಂಬೆಗೆ ಓಡಿಹೋನೆತ ನೆನ್ಸಿ ಮನೆ ಬುಟ್ಟದ್.. ಕಡೆಗೆ ಯಾರ್ ಯಾರೋ ಏಜೆಂಟ್ಗಳ ಕಾಲ್ ಹಿಡ್ದ್, ಯಾರ್ಯಾರೋ ಕಡೆ ಸಾಲ ಮಾಡಿ, ಇದ್ದ ಹೊಡಿ ಜಾಗೆನ ಅಡವಿಸಿ ಕತಾರ್‌ಗೆ ಎತ್ತಿದ್.... ಆಚೆಕರೆ ಸಂಣಪ ಜಾಗೆ ಮಾರಿ

ದುಬೈ ಹೊರ್ಟಳತ ನಂಜಿಲಿ ಕೊಕ್ಕೆ ಮಾತಾಡ್ದ್.. ಅರಬ್‌ಲಿ ಯಾವ್ದೇ ದೇಶಲೇ ಇದ್ದರೂ ಊರ್ನವ್ಕೆ ಮಾತ್ರ ದುಬೈ ಒಂದೇ ಅಲ್ಲ??!! ಇದೆಲ್ಲಾ ತಲೆಲಿ ಸುತ್ತಿಕಂಡಿರ್ಕಾಕನನೇ ಏರ್ಪೋರ್ಟ್‌ಂದ ಹೊರಗೆ ಬಂದಾತ್... ತಮ್ಮ ಸತೀಶ ಅಲ್ಲೇ ಕಾಯ್ತುಟ್ಟು... ಅವನ ಕಣ್ಣೋ... ಅಣ್ಣನ ಮೋರೆ ನೋಡ್ದು ಬುಟ್ಟು ದುಬೈಂದ ಬರವನ ಬ್ಯಾಗ್ ಎಷ್ಟ್ ದೊಡ್ಡದುಟ್ಟುತ ಕಣ್ಣ್‌ಲೇ ಲೆಕ್ಕ ಹಾಕಿದೆ!!

ಇಜ್ಜಲ್ ಕರೆಂದ ಹತ್ತಿ ಬಂದವನ ಅವನೇ ಕಟ್ಸ್‌ಸಿದ ಮನೆ ಕರ್ದ್ ಕುದ್ರಿಸಿಕಂಡರೂ ಒಳಗೆ ಬಿಸಿ ಮಾತ್ರ ತಾರಾಮಾರ. ದುಬೈಲಿ ಪೊಯ್ಯ ಹೊತ್ತುವಂಥ ಬಿಸ್ಲಿದ್ದರೂ ಹುಟ್ಟಿ ಬೆಳ್ದ ಊರನ ಬಿಸಿ ಮಾತ್ರ ಯಾಕೋ ತಡ್ಕಂಬಕೆ ಭಂಗ ಆಗ್ತುಟ್ಟು... ಹಾಲ್ ಕೊಟ್ಟು ಸಾಂಕಿದ ಅವ್ವನೇ ಬೆನ್ನ್ ಹೊಡಿಯಾಗುವಾಂಗೆ, ಕುಂಡೆ ಹಣ್ಣಾಗುವಾಂಗೆ ಪೊಳಿ ಕೊಟ್ಟಾಂಗೆ ಆತ್!!

(ತಪ್ಪೂ ಆಗುಟು... ತಲೆಗೆ ಹೊಯ್ದ ನೀರ್ ಕಾಲ್‌ಗೆ ಬಂದೇ ಬರೊಕಲ್ಲ??)

ಮಾರ್ನೆ ದಿನಂದ ಸುರು.. ಕುಂಞಪ್ಪನ ಮನೆಲಿ ದೆವ್ವದರ್ಕೆ, ದೊಡ್ಡತ್ತೆನವರ್ಲಿ ಕೋಲ, ಶಾಲೆಮಾವನಲ್ಲಿ ಕಲಾಯ, ಕುಂಞಿ ಬಾವನ ವೀಳ್ಯಶಾಸ್ತ್ರ, ಅಚ್ಚುನ ಮೊದ್ರೆಂಗಿ, ಅಣ್ಣಿನ ಮೊದ್ವೆ... ಹಿಂಗೇ.. ನಾವು, ನಮ್ಮವುತ ನಾಕ್ ಜನ ಸಿಕ್ಕುವೆತ ಹೇಳ್ದಲ್ಲಿಗೆಲ್ಲಾ ಹೊರ್ಟದಷ್ಟೇ. ಎಲ್ಲಿ ಹೋದರೂ ಒಂದೇ ಪ್ರಶ್ನೆ... ಯಾಗ ಬಂದದ್? ನಂಗೆ ಎಂತತಂದಳ? ವಾಪಸ್ ಯಾಗ?

(ಈ ಪ್ರಶ್ನೆಂದ ಬಹುಶಃ ತಪ್ಸ್‌ಸಿಕಂಡವ ಯಾರೂ ಇಲ್ಲೆ. ಬಂದವ ಬೇಗ ಊರ್ ಬುಟ್ಟು ಹೋಕುಂತಲೇ ಇವು ಕಾದ್ ಕಂಡಿದ್ದವೆ ನಾ ಹೆಂಗೆ??)

ಬಂದ ಮೂರ್ನೇ ದಿನಕ್ಕೇ ಕನ್ಸ್‌ಲಿಸಾ ನೆನ್ಸಿಕಣದವು ಮನೆ ಜಾಲ್‌ಗೇ ಬಂದೆತ್ತ್ಯೊಳೊ. ಪ್ರಕಾಶ ಬಂದುಟುಗಡ. ನೋಡದೆ ಇರಿಕೆ ಮನ್ಸೇ ತಡ್ತ್‌ಲೆತ! ಬಂದದ್ ಅಂವ ತಂದ ದುಬೈ ಮಾಲ್‌ಗೆತ ಪ್ರಕಾಶಂಗಷ್ಟೇ ಗೊತ್ತು!! ಇನ್ನೂ ಮೊದ್ವೆ ಆಗದ ಪ್ರಕಾಶಂಗೆ ಈ ಒಂದು ಪ್ರಶ್ನೆಂದ ಇನ್ನೂ ನಿಮೂರ್ತಿ ಇಲ್ಲೆ. ಹೊಸ ನೆಂಟ್ರ್‌ಗ ಮನಿ ಬಂದೊಳೊನಾ? ಗೂಡೆ ನಿಘಂಟ್ ಆಗುಟಾ?? ಕೇಳ್ದವರೊಟ್ಟಿಗೆಲ್ಲಾ 'ನೋಡ್ತೊಳೆ.. ಇನ್ನೊಮ್ಮೆ ಬಾಕನ ಮೊದ್ವೆ ಆಗಿನೇ ಹೋದು'ತ ಹೇಳಿ ಜಾರಿಕಂಬೊತಿತ್ತ್. ಎಲ್ಲಿ ಹೋದರೂ ಇದೇ ಕಥೆ!! ಎಷ್ಟಾದರೂ "ಮುಡಿಗೆ ಮೂರು ಸೇರ್ ಜಳ್ಳೇ" ಅಲ್ಲ??

ದುಬೈಲಿ ಹೊಟ್ಟೆ ಬಾಯಿ ಕಟ್ಟಿ ಎರ್ಪು ಮಾಡಿ ಕಟ್ಟಿಸಿದರ ಎಲ್ಲಾ ಪೂಜಿ ಮನೆಗೆ ಕೊಟ್ಟು ಮನ್ಸಿಲ್ಲಾದ ಮನ್ಸ್‌ಂದ ಹೊರ್ಟತ್ ಪ್ರಕಾಶ ಹೈದ. ಮತ್ತದೇ ದಿನಚರಿ.. ಊರುಲಿ ನೀರಡಿಕೊಟೆಗೆನಷ್ಟೇ ಇರುವ ಮನೆ. ದನ ಮೂಕುಂದ ಪಾವಲ್ ತೆಗ್ಯಕೆ ಆಗ್ತಿದ ಹೇಸಿಕೆ ಇಲ್ಲಿ ಕೋಳಿಫಾರ್ಮ್‌ಲಿ ಹೊಲ್ಸ್ ಎತ್ತಿರೂ ಏನೂ ಅನ್ಸ್‌ತಿಲ್ಲೆ. ಕೋಳಿ ಹೆಳ್ತ್ ಪೂಜಿ ತೆಗ್ಯಕೇ ಹೇಸಿಕೆ ಆಗ್ತಿದ್ದವಂಗೆ ಇಲ್ಲಿ ಟಾಯಿಲೆಟ್ ಕ್ಲೀನಿಂಗ್ ಒಂದ್ ವಿಷಯನೇ ಅಲ್ಲ. ಮನೆ ಹಿಂದೆ ನೀರಡ್ಕೆ ಹೊಂಡದ ಅಡ್ಕೆ ನೋಡ್ರೇ ನಾತ, ಕಕ್ಕಿಕೆ ಬರ್ತಿದ್ದವಂಗೆ ಇಲ್ಲಿನ ವಾಸನೆ ಏನೇನೂ ಅಲ್ಲ. ಊರ್‌ಲಿದ್ದವು ಮೊದ್ವೆ, ಮನೆ ಒಕ್ಕಲ್‌ತ ನಾಕ್ ಕಡೆ ಹೋಗಿ ಬಂದರೆ ಇಲ್ಲಿ ಹೇಳಿಕೂ ಯಾರೂ ಇಲ್ಲೆ. ಅವೆಲ್ಲಾ ಕಳ್ಸುವ ಫೋಟೋ ನೋಡಿ ಹೊಟ್ಟೆ ಬೆಂದದೇ ಹೊರ್ತ್ ಮನ್ಸ್‌ಗೆ ನೆಮ್ಮದಿ ಎಲ್ಲ್ಯುಟ್ಟು??

ಊರ್‌ನ ದೇವಸ್ಥಾನದ ಅನ್ನದಾನಕ್ಕೆ ಇವನ ಕೊಡುಗೆತ ಬೋರ್ಡ್‌ಲಿ ಹೆಸ್ರು ಹಾಕ್ಯೊಳೊಗಡ. ಆದರೆ ಕೊಟ್ಟಂವ ಉಪವಾಸ ಇದ್ದರೂ ಕೇಳಂವ ಇಲ್ಲೆ!! ಮನೆವು ಇಂದ್ ಚಾಯಕ್ಕೆ ಪುಂಡಿ, ಬೊಡ್ರೊಟ್ಟಿತ ಹೇಳ್ರೂ ಇವಂಗೆ ಅದೇ ಒಣ್ಗಿಲ್ ಬ್ರೆಡ್. ಬ್ಯಾಪರಕಾಯಿಗೆ ಗಾಂಧಾರಿ ಮೆಣ್ಸ್ ಹಾಕಿ ಹಿಡ್ಟ ಹಳ್ಳದ ಮೀನ್ ಗೈಪುಗಡ ಇವಂಗೆ?? ಮನೆಲಿರ್ಕಾಕನ ಜ್ವರ ಬಂದರೆ ರಘುರಾಮ ಡಾಕ್ಟ್ರ ಕೆಂಪು ಸಿರಪ್‌ನೊಟ್ಟಿಗೆ ಅವ್ವ ಕಾಸುವ ಒಳ್ಳೆಮೆಣ್ಸ್ ಕಸಾಯ ಒಂದೇ ಸಾಕ್. ಇಲ್ಲಿ ನೋಡ್ರೆ ಕುಡಿಯಕೆ ಬಿಸಿ ನೀರೂ ಅವನೇ ಕಾಸಿಕಣೊಕು!! ಗಂಡ್ ಮಕ್ಕ ಮಾಯ್ಪು ಹಿಡ್ದರೆ ಮೀಸೆ ಬಾದುಲೆತ ಅಯ್ಯೆ ಗುಡ್ಸಿಕೇ ಬುಡದಿದ್ದರೂ ಇಲ್ಲಿ ಅದೇ ಮಾಯ್ಪೇ ಇವನ ಕೈಲಿ ಗುಡ್ಸ್‌ಸಿದೆ. ಯಜಮಾನ ಬೇರೆ ಆತ್, ಇದ್ದ ಕೆಲ್ಸನೂ ಹೋತ್, ಊರುಲಿ ಯಾರಿಗೂ ಹೇಳದೆ ಬೇರೆ ಕೆಲಸ ಹುಡ್ಕ್ಯಂಡದೂ ಆತ್. ದಿನಕ್ಕೊಂದು ಹೊಸ ಕಾನೂನುಂದ ಇದನ್ರೂ ಯಾಗ ಕಳ್ಕಂಡದೆತ ಗೊತ್ತೆ!! ಗಟ್ಟಿಯಾಗಿ ಮರ್ಡುವ ಹಾಂಗೆನೂ ಇಲ್ಲೆ.... ಏಕೆ? ಲೋಕದ ಕಣ್ಣ್‌ಗೆ ಇಂವ ಗಂಡ್ಸ್!! ವಾರದ ಅಕೇರಿಲಿ ದಾರಿಲಿ ಹೋಕನ ಬಿರಿಯಾಣಿನ ಮೂಕಳ್ಮೆ ನೆತ್ತಿಗೆ ಏರಿರೂ ಮನ್ಸ್ ಕೇಳ್ದು ಮಾತ್ರ ತಣೆನ ಗಂಜಿನೂ... ಇಟ್ಟಿ ಹಾಕಿದ ಕುಡು ಮೊಜ್ಜಿನನೂ!! ಅಷ್ಟೇ....

* * * *

ಪಾಚು ಮುತ್ತು ಕೊಟ್ಟುಟುಗಡ!!!

ಬೊಡ್ರೊಟ್ಟಿಗೆ ಬಂದ ಕಡ್ಯಕೆ ಮಿಕ್ಸಿಗೆ ಹಾಕಿ ತಿರ್ಗಿಸಿ ಕಂಡ್ ನಿತ್ತ ತಂಗಮಕ್ಕಂಗೆ, ಬಂದ ನೀರಾಗಿ ನೀರ್ ದೋಸೆ ಹದಕ್ಕೆ ಬಂದದ್ ಗೊತ್ತಾದ್ ಕರೆಂಟ್ ಹೋಗಿ ಮಿಕ್ಸಿ ಆಫ್ ಆಕನನೇ!! ಯಾವುದೋ ಆಲೋಚನೆಲಿ ಮುಳ್ಗಿದವ್ಕೆ ಮಿಕ್ಸಿ ಆಫ್ ಮಾಡಿಕೆ ನೆನ್ಪೇ ಇಲ್ಲೆ. ಮತ್ತೇನಲ್ಲ.. ಮೊನ್ನೆ ಬಾಲ ಹೈದನ ಮೊದ್ರೆಂಗಿಲಿ ಲಲ್ತಕ್ಕ ನನ್ನ ನೋಡಿ ಯಾಕೆ ಹುಳ್ಳಂಗೆ ನೆಗಾಡ್ತೊತ??!! ಕಡೆಗೂ ನೈಸ್ ಆದ ಬಂದನ ಹೆಂಗೆ ಹೆಂಗೋ ಹೊಯಿದ್, ಎಳ್ಕದ ಹಿಟ್ಟ್‌ನ ಕೆರ್ದ್ ತೆಗ್ದ್ ನಾಯಿಗೆ ಇಟ್ಟವೇ ಸೀದ ಹೋಗಿ ಲಲ್ತಕ್ಕಂಗೆ ಫೋನ್ಮಾಡಿಯೇ ಬುಟ್ರೊ..

"ಎಂಥ ಲಲ್ತಕ್ಕ.. ನೀವ್ ಮೊನ್ನೆ ಮೊದ್ರೆಂಗಿಲಿ ನನ್ನ ನೋಡಿ ಹಂಗೆ ನೆಗಾಡ್ದ್ ಎಂತಕೆ? ನಾ ಏನ್ ಮಾಡ್ಯೆಳೆ??"

"ಅಲ್ಲ ತಂಗಮಕ್ಕ.. ಊರಿಡೀ ವಿಷಯ ಗೊತ್ತಾಗುಟು... ಪೆರ್ಜೆಲಿ ಗೌಡ್ರ ಕುಟುಂಬಗಳ ಕ್ರಿಕೆಟ್ ಮ್ಯಾಚ್‌ಲಿ, ಚಾಕಟೆ ಮರದ ಹಿಂದೆ ಅಮ್ಮುಣಿಗ ' ಪಾಚು ಮುತ್ತು ಕೊಟ್ಟುಟುಗಡ!! ಅವ್ಕೆ ಮೊದ್ವೆ ನಿಗಂಟ್ ಆಗುಟು.. ಆದರೂ.. ಹಿಂಗೆಂತ... ನಾಕ್ ಜನ ಸೇರುವಲ್ಲಿ ಎಂತ!!

ನೀವ್ಗೆ ಗೊತ್ತಾಕೆ ಇನ್ನ್ ಸುದ್ದಿಪೇಪರ್‌ಲಿ ಹಾಕೊಕೊ ಏನೋ??" ಅಷ್ಟೇ.... ತಂಗಮಕ್ಕ ಫೋನ್ ಕುಕ್ಕಿದ ರಭಸಕ್ಕೆ ಹೊರಗೆ ಕಾಪು ಕುದ್ದಿದ್ದ ಬೆಳ್ಳಿ ಹೇಂಟೆ ಹದ್ಕಿಬೀತ್.

ಕಟ್ಟಂದ ನೀರ್ ಬುಡಿಕೆ ಹೋಗಿದ್ದ ಲಚ್ಚಣ್ಣ ಮನೆಗೆ ಬಂದರೆ ಕಾಲಡಿಗೆ ಸಿಕ್ಕಿದ ನಾಯಿ ಮೊರಿ ಮೆರ್‍ರೇಂತ ಓಡ್ತ್. ಆಗಳೇ ನೆನ್ಸಿದೊ.. ಏನೋ ರಗಳೆ ಉಟ್ಟೊಂತ!! ನೆತ್ತಿ ಕೊಡಿಗೆ ಬೆಣ್ಣೆ ಹನ್ಕ್‌ಸಿಕಂಡ ಕೊತ್ತಿಮೊರಿನಾಗೆ ಅವರಷ್ಟಕ್ಕೆ ಸುಮ್ಮನಿರುವ ತಂಗಮಕ್ಕ ಇಂದ್ ನೋಡ್ರೆ ಬೀಲ ಸುಟ್ಟ ಕೊತ್ತಿನಾಂಗೆ ಅತ್ತಂದಿತ್ತ ಇತ್ತಂದತ್ತ ಹೋಗ್ತೊಳೊ... ಒಟ್ಟಿಗೆ ಸುಡು ಸುಡುತ ಸ್ವಗತ ಬೇರೆ!! ಹೆಣ್ಣ್‌ನ ಅವಸ್ಥೆ ನೋಡಿ "ಎಂಥಯಾ ನಿನ್ನ ಅವಸ್ಥೆ... ನಿನ್ನ ಕೆಲ್ಸದ ಹೆಂಗ್‌ಸ್ ಪುನಃ ಪದ್ರಡ್ ಹಾಕಿತಾ ಹೆಂಗೆ?" ಕುಸಾಲ್‌ಲಿ ಕೇಳ್ಡಕ್ಕೆ "ನಿಮ್ಮ ಕುಸಾಲ್‌ಗಿಷ್ಟ್ ಕಿಚ್ಚಿ ಹೆಟ್ಟಿತ್.. ಎಲ್ಲಾ ಸಸಾರನೆ ನೀವ್ಗೆ!! ನಿಮ್ಮ ಮಂಜನ ಪುರಾಣ ಊರಿಡೀ ಗೊತ್ತಾಗುಟು... ನೀವೋ.."ತ ಮೂಕು ಮುಸುಂಡ್‌ನ ಸೆರ್‍ರಂಗ್‌ಲಿ ಉಜ್ಜಿಕಂಡ್ ಮರ್ಡಿಕೆ ಸುರು ಮಾಡ್ದೊ. ಯಾಗೋಳೂ ನನ್ನ ಮಂಜತ ಹೇಳುವ ಆಳ್ ಇಂದ್ ನಿಮ್ಮ ಮಂಜತ ಹೇಳ್ದು ಕೇಳ್ರೆ (ಎಲ್ಲಾ ಅಯ್ಯೆಕಳೂ ಹಂಗೆನೇ ಅಲ್ಲನ? ಹೈದ ಕ್ಲಾಸ್‌ಗೆ ಫಸ್ಟ್ ಬಂದರೆ ಅವರ ಮಂಜ. ಫೈಲಾದರೆ ಅಪ್ಪನ ಮಂಜ!!) ಏನೋ ವಿಷಯ ಗಂಭೀರತ ಅನ್ಸಿ... ಒಕ್ಕಿ ಒಕ್ಕಿ ಕೇಳ್ದರ್ಲಿ ಲಚ್ಚಣಂಗೆ ಅರ್ಥ ಆದ್ ಒಂದೇ ವಿಷಯ..... ಅಮ್ಮುಣಿಗೆ ಪಾಚು ಮುತ್ತು ಕೊಟ್ಟುಟುಗಡ!!

'ಆತಪ್ಪ.. ಈಗದ ಹೈದಂಗ.. ಯಾರು ಮಾಡದ್ದೇನ್ ಅಲ್ಲಲ್ಲ'..ತ ಹೆಣ್ಣ್‌ನ ಸಮಾಧಾನ ಮಾಡಿಕೆ ನೋಡ್ರೆ ತಂಗಮಕ್ಕಂದ್ ಒಂದೇ ಹಠ.

"ಮೊದ್ವೆಗೆ ಮೊದ್ಲೇ ಹಿಂಗೆ ಇದ್ದರೆ ಹೆಂಗೆ.. ಇನ್ನ್ ಆ ಅಮ್ಮುಣಿ ಹೆಂಗೆ ಇರ್ದು... ಅದ್ಕೆ ಆರ್ ಸೊಯೆ ಬೇಡ. ನಂಗೆ ನಾಕ್ ಜನ ಇರುವ ಕಡೆ ಹೋಕೇ ನಾಚಿಕೆ ಆದೆ.. ನಡಿನಿ.. ಪೋಯಿ... ದ್ಯಾಪಣ್ಣನಲ್ಲಿಗೆ!!" ತ ಗಂಡಂಗೆ ಕಂಬೈನೂ ಸರಿ ಕಟ್ಟಿಕಂಬಕೆ ಬುಡದೆ ಎಳ್ಕಂಡೇ ಹೋದೊ. ದ್ಯಾಪಣ್ಣನೊಟ್ಟಿಗೆ ಏನ್, ಒಳ್ಳದ್‌ತ ಕೇಳಿಕೆ ಮೊದ್ಲೇ ನೀರ್ ಚೊಂಬ್ ತಂದ ಭಾವೀ ಸೊಸೆ ಅಮ್ಮುಣ್ಣಿಗೆ ಸೀದ ಕೇಳಿಯೇ ಬುಟ್ಟೊ ತಂಗಮಕ್ಕ.. "ನಿಂಗೆ ಪಾಚು ಮುತ್ತು ಕೊಟ್ಟುಟುಗಡ!!?? ಹೌದ!!"

ಅದ್ಕೆ ಒಮ್ಮೆ ಏನ್ ಹೇಳೊಕುತ ಗೊತ್ತಾಗದೆ ತಿರ್ಗಿ ಓಡ್ದರ್ಲಿ ಕೈಲಿದ್ದ ನೀರ್ ಚೊಂಬ್ ಬಾಗ್‌ಲ್ ದಾರಂದಕ್ಕೆ ಹೆಟ್ಟಿ ಒಟ್ಟಿಯೇ ಹೋತ್!! ಕಡೆಗೆ ದ್ಯಾಪಣ್ಣನೇ ಒಳಗೆ ಹೋಗಿ ಮಗಳ ಕರ್ಕಂಡ್ ಬಂದರೆ ಕೈಲಿ ಒಂದ್ ಸಣ್ಣಕಟ್ಟ್ ಉಟ್ಟೊ..

"ಅತ್ತೆ... ಅವು ಮೊನ್ನೆ ಹೈದ್ರಾಬಾದ್ ಹೋಗಿದ್ದೊಲ್ಲ.. ಮುತ್ತು ಬೇಕುತ ಹೇಳಿದ್ದೆ... ಇದರ್‌ನೇ ಅವು ಕೊಟ್ಟದ್.. ಬರುವ ವಾರ ಮುಳಿಯಕ್ಕೆ ಕೊಟ್ಟ್ ಲಾಯಿಕ್‌ನ ಒಂದ್ ಸರಮಾಲೆ ಮಾಡ್ಸಿಕಣೆ!!" ಇದರಕೇಳಿ ಲಚ್ಚಣ್ಣನ್ನೂ ಸೆರಿ ಮನೆವೆಲ್ಲಾ ಅಡ್ಡಡ್ಡಾ ಬಿದ್ದ್ ನೆಗಾಡಿಕೆ ಸುರು ಮಾಡ್ರೆ, ತಂಗಮಕ್ಕಂಗೆ ನಾಚಿಕೆಲಿ ಎಂತ ಹೇಳೊಕುತ ಗೊತ್ತಾಗದೆ ಹ್ಯಾಪಮೋರೆಲೇ ನೆಗಾಡಿಕಂಡ್ ಕುದ್ದೊ.

* * * *

ಬೊಚ್ಚಿ ಹೋದ ದೆವ್ವ!!

ಹೊಸಾ ಐನ್‌ಮನೆ ಮುಂದೆ ಜಾಲ್‌ಲಿ ಸೇರ್ದ ಕುಟುಂಬದವ್ಕೆ ಅಂದ್ ಏನೋ ಕುಸಿ!! ಪಂಡ್‌ನ ಕಾಲಲಿ ಪಾಲ್ ಪತ್ತಂಡೆ ಆಗಿ, ಎಲ್ಯೆಲ್ಲೋ ಹೋಗಿ ಒಕ್ಕ್‌ಲ್ ಕುದ್ದಿದ್ದ ಹಿಂಕ್‌ಲ್ ಗೆಲ್ಲಾ ಇಂದ್ ಮಕ್ಕ, ಮೊರಿ ಸಮೇತ ವಾಪಸ್ ಬಂದ್ ಸೇರ್ಯೋಳೊ. ಕಾರಣ ಕುಟುಂಬದ "ಧರ್ಮ ನಡಾವಳಿ" ಹೆಚ್ಚ್‌ಕಮ್ಮಿ ಹಕ್ಕಲ್ಯಕ್ಕಲೆ 50 ವರ್ಷನೇ ಕಳ್ದಿರ್ದ ದೆವ್ವಂಗಳಿಗೆ ಕೋಲ ಕೊಟ್ಟ್, ಒರ್ ಮಾಡ್‌ಲಿದ್ದ ದೆವ್ವಂಗಳ ಚಾವಡಿ ಒರ್ದ ಬಿದ್ದ ಮೇಲೆ ಸುರ್ಗೆ, ಮಣಿಗಂಟೆ ಎಲ್ಲಾ ಹುತ್ತ ಕೂಡಿ ಮೊಣ್ಣಡಿಗಾತ್. ಮನೆಯವೂ ಊರ್ ಬುಟ್ಟವೂ ದೆವ್ವಂಗಳ್ಲೂ ಮತ್ರೋ. ಹಂಗೆತ ಮಾಯೆಗ ಬುಡುವೊನ??!! ಹೋದಲ್ಲಿ, ಬಂದಲ್ಲಿ ಎಲ್ಲಾ ಒಟ್ಟಿಗೇ ಇರವು!! ಎಷ್ಟಾದರೂ ಎಡಗಾಲು ಎಡವ ದಂತೆ, ಮುಡಿದ ಹೂ ಬಾಡದಂತೆ ಕಾಪಾಡಿಕಂಡಿರ ವಲ್ಲನ?? ಅವೇ ಮಾಯೆಗಳೂ ಸತ್ಯತೆ ತೋರ್ಸಿಕೆ ಸುರುಮಾಡ್ದೊ.. ಈಚೆ ಮನೆಯವನ ಕೋಳಿ ಕಾಣೆ. ಆಚೆವನ ಹೂಡುವ ಕಡ್ಪದ ಹೋರಿ ಕಾಣೆ. ಮತ್ತೊಬ್ಬಂ ದಂತೂ ಕಟ್ಟಿಕಂಡ ಗೂಡೆನೇ ಕಾಣೆ!! ಮೊದ್ವೆ ಆಗದೆ

ಕುದ್ದ ಮನೆ ಮಕ್ಕ ಅದೆಷ್ಟೋ!! ಆಗ ನೆನ್ಪಾದೇ ದೆವ್ವಗಳ; ಅವ್ಗಳ ಎದ್ರ್‌ಸದೆ ಈ ಉಪದ್ರಗಳಿಗೆ ನಿಮೂರ್ತಿ ಇಲ್ಲೆ!!!

ಹಿಂಗೇ ಬುಟ್ಟರೆ ಸಂತಾನ ಅಳ್ದ್ ಹೋದುತ ಹೆದ್ರಿದ ಕುಟುಂಬದ ಮೂತರ್ ಮತ್ತೆ ಹಿರಿ ತಲೆಗೆಲ್ಲಾ ಸೇರಿ, ಕಾಡ್‌ಲಿ ನೆರೆ ಗೆಡ್ಡೆ ಹುಡ್ಕಿದಾಂಗೆ ಹುಡ್ಕಿ ಹುಡ್ಕಿ ಕೇರಳಂದ ಒಬ್ಬ ಜೋಯಿಸನ ಕರ್ಸಿ ಅಷ್ಟಮಂಗಲಲಿ ಸ್ವರ್ಣ ಬುಡ್ಸಿ ನೋಡೊನೋತಾತ್. ಆದರೂ ಕುಟುಂಬದವ್ಕೆಲ್ಲಾ ಸರಿ ಆದೊ?? ಅಂವ ಹೇಳ್ದ್ ಇವಂಗಾಕಿಲೆ. ಇಂವ ಹೇಳ್ದೆಲ್ಲಾ ಅವ್ಕೇ ತಪ್ಪೇ!! ನಾ ಹೇಳ್ದ ಜೋಯಿಸನೇ ಆಕುತ ಒಬ್ಬ ಹೇಳ್ರೆ. ನಾವ್ ಅಂದಾಜ್ ಮಾಡ್ದ ಜಾಗೆಲೇ ಸ್ಥಾನ ಕಟ್ಟಿರೆ ಒಳ್ಳೆದ್‌ತ ಇನ್ನೊಬ್ಬ. ಕುಟುಂಬ ಜಗಳ ಕೋಮಣ ಜಿಡ್ಡ್ ಎಲ್ಯಾರ್ ಬುಟ್ಟ್ ಹೋದೊ?? ಎಲ್ಲಿ ಹೋದರೂ ಮುಡಿಗೆ ಮೂರ್ಸೇರ್ ಯಾಗೋಳು ಜಳ್ಳೇ!! ಏನೆಲ್ಲಾ ಉರ್ಡಪತ್ತ ಆಗಿ ಕಡೆಗೂ ಒಂದ್ ಲಾಯ್ಕ್‌ನ ಐನ್‌ಮನೆ, ದೆವ್ವದ ಚಾವಡಿಗ ಎದ್ದ್ ನಿತ್ತೊ. ಕೊಕ್ಕೆ ಹಾಕವು ಇನ್ನೂ ಹಾಕ್ಯಂಡೇ ಒಳೊ. ಎಂತ ಮಾಡ್ದು. ಕಾಯರಗುತ್ತಿಗೆ ಕಡೆಕೊಡಿ ಇಲ್ಲೆಲ್ಲಾ?? ಹಿಂಗೆಲ್ಲಾ ಇರ್ಕಾಕನ ಹೊಸ ಐನ್‌ಮನೆ ಒಕ್ಕಲ್‌ಗೆ ಸೇರ್ದ ಕುಟುಂಬದವ್ಕೆಲ್ಲಾ ಏನೋ ಕುಸಿ ಆದರೆ ಮನೆ ಮಕ್ಕಳಿಗೆಲ್ಲಾ ದೆವ್ವ ನೋಡಿಕೆ ಜಾಲ್‌ಲಿ ಸೊಕ್ಕುದೇ ಹಬ್ಬ. ಕೊಟ್ಟ ಹೆಣ್ಣ್‌ಮಕ್ಕ ತಂದ ಎಣ್ಣೆಲಿ ಕೊಳಗನೇ ಎರ್ಕಿ ಸೂಸಿಟು. ಮೂಲೆಲಿ ಕುದ್ದ ಅಜ್ಜಿಕಳೆಲ್ಲಾ ಪಂಡ್‌ಲಿ ದೆವ್ವ ನಡಿತಿದ್ದದರ ಹೇಳಿಕಂಡ್ ಚಪ್ಪ್‌ತೊಳೊ!!

ಹರ್ಸಯ ಕಳ್ದ್, ಕೆಂಚಿರಾಯನ ಪೂಜೆನೂ ಮುಗ್ದಾಂಗೆ ಎಲ್ಲವೂ ಭಂಡಾರ ತೆಗ್ಯಕೆ ಹೊರ್ಟೊ. ಮೊಗ, ಮೂರ್ತಿ ಹಿಡ್ದವರ ದರ್ಸನ ದರ್ಪುದರ ನೋಡಿಕೇನೆ ಪೊಲ್ರು. ಅಷ್ಟೊತ್ತಿಗೆ ಸೇರ್ದ ಜನರ ನಡೂಂದ ಕೇಳ್ದ ಆರ್ಭಟೆಗೆ ಮೊಡ್ಯಾಳನ ಕೈಂದ ಚೊಂಬ್‌ರೆಟ್ಟೆ ಬೀಳದ್ ಪುಣ್ಯ!! ನೋಡ್ರೆ ಗುಡ್ಡೆಕೊಡಿ ತ್ಯಾಂಪಣ್ಣಜ್ಜ ಪುರ್ಸೋತಿಲ್ಲದೆ ದರ್ಪುತೊಳೊ. ಹಾರಿಕಂಡ್ ಹಾರಿಕಂಡ್ ಭಂಡಾರದ ಎದ್ರ್ ಬಂದ್ ಎತ್ತಿದೊ. ಮೊಡ್ಯಾಳ ಎಷ್ಟ್ ಸರ್ತಿ ನೀರ್ ಕೊಡ್ಕಿರೂ ನಿಲ್ಸ್‌ತನೇ ಇಲ್ಲೆ. ಕಡೆಗೆ ಮೂತರೇ ಬಂದ್ "ಯಾರ್ ನೀ?"ತ ಕೇಳ್ದಕ್ಕೆ ಬಂದ ಉತ್ತರ "ನಾ ಮಾಯೆ.. ನಾ ಮಾಯೆ!!" ಅದರ ಕೇಳಿ ಕೈಲಿ ಬೆತ್ತ ಹಿಡ್ಕಂಡಿದ್ದ ಪೂಜಾರಿ ಒಬ್ಬ ಅವರ ಬೆನ್ನ್‌ಗೆ ರಪ್ಪತ ಬೀಸಿದೇ 'ಕುದ್ರಲ್ಲಿ'ತ ಕಣ್ಣೊಣ್ಕ್‌ಸಿತ್. ತ್ಯಾಂಪಣ್ಣ

ಮರಂದ ಜಾರ್ದ ಕಕ್ಕೆ ಕೊಡ್ಡಿದ ಕರ್ಗೆಲ್ ಬಪ್ಪಂಗಾಯಿನಾಂಗೆ ಹಿಂದೆ ಹೋಗಿ ಗೋಡೆಗೊರ್ಗಿ ಕುದ್ದೇ ಹೋದೊ. ಆದರೂ ದರ್ಪುದು, ಕಣ್ಣುಳ್ಸುದು ನಿತ್ತತ್ಲೆ. ಅಂತೂ ಭಂಡಾರ ತೆಗ್ದ್, ಕೋಲ ಕಳ್ದ್ ನೆಂಟ್ರ್‌ಗೆಲ್ಲಾ ಅವರವರ ಮನೆಗೆ ಎತ್ತಿದೊ. ಇಲ್ಲಿ ಕುದ್ದ ತ್ಯಾಂಪಣ್ಣ ಮಾತ್ರ ಒಂದ್ ಹನೀಸೂ ಮೊಸ್ಗಿತ್ಲೆ. ಕಣ್ಣ್ ಮಾತ್ರ ಹಂಗೇ ಪಿಳಿಪಿಳಿ ಮಾಡ್ತೊಳೊ. ಕಡೆಗೆ ಮೂತರೇ ಹೋಗಿ "ಯಾರ್ ನೀ?" ತ ಗಡ್ಸ್‌ಲಿ ಕೇಳ್ದೊ.

"ನಾ... ತ್ಯಾಂಪಣ್ಣ... ಗುಡ್ಡೆಕೊಡಿ ತ್ಯಾಂಪಣ್ಣ!!" ಎಲ್ಲವು ಅಡ್ಡಡ್ಡಾ ಬಿದ್ದ್ ನೆಗಾಡ್ರೆ, ಬೊಳ್ಪೂಂದಿತ್ತ ಚುರ್ಕರ ಕುದ್ದ್, ಚಿನ್ನೆರ್ಪಿ ಮರಗಟ್ಟಿಹೋದ ಕಾಲ್‌ನ ಬುಡ್ಸಿಕಾಗದೆ ತ್ಯಾಂಪಣ್ಣ ತಬ್ಬುರ್ಸುತೊಳೊ. ಕಡೆಗೆ ನಾಕ್ ಹೈದಂಗ ಬಂದ್, ಎತ್ತಿಕಂಡ್ ಹೋಗಿ, ಕಾಲ್‌ಗಳ ನೀಂಡ್ಸಿ ಬೆರ್ಚಪ್ಪನಾಂಗೆ ಜಾಲ್ ಕರೆಲಿ ನಿಲ್ಸಿದೊ!!!

* * * *

ಆಟಿ ಅಮಾಸ್ಯೆಲಿ ಹುಟ್ಟಿದಂವ!!!

ಅಂದ್ ಆಟಿ ಅಮಾಸ್ಯೆ. ಸೋಮಾರ ನಡು ಇರ್ಲ್ ಕಳ್ದ್ ಮಂಗ್ಳಾರದ ಬೊಳ್ಪು. ಗೂಡುಲಿ ಮುಚ್ಚಿ ಹಾಕಿದ ಹುಂಜ ಕೂಂಗಿಕೆ ಕಾಯ್ತುಟ್ಟು. ನೀರಡಿ ಕೊಟೆಗೆಲಿ ಬೂದಿಲಿ ಬೆಚ್ಚಂಗೆ ಮಲ್ಗಿದ್ದ ಬೊಳ್ಳು ನಾಯಿ ಅಲ್ಲಿಗೇ ತಿರ್ರ್ಂಟಿ ಮಲ್ಗಿತ್. ಇಡೀ ಊರು ಅಮಾಸ್ಯೆನ ಕಾಡ್ದಂದಿ, ಕೋಳಿ ಗೈಪುನ ಘಮನಲಿ ಮುಳ್ಗಿಟು. ಆಟಿ ತಿಂಗಳ ಜಿಟಿಜಿಟಿ ಮಳೆನೊಟ್ಟಿಗೆ ಬೀಸುವ ಸೀಂಕ್ರ್‌ಗೆ ಚಳಿನೂ ಚಳಿಗಾಳಿನೂ ಹೊಡಿತುಟ್ಟು. ಮನೆಗೆ ಹಿರಿಯಂವ ಆದ ಮೇಗಡೆ ಮನೆ ಕೊರ್ಗಜ್ಜಗಂತೂ ಕುಡ್ದ ಗ್ಯಾರ್ದ ಹಣ್ಣ್‌ನ ಸರಾಯ ಇನ್ನೂ ಪಿರಿಯದೆ ನಿದ್ದೆಲೋ ಅಲ್ಲ ಕನ್ಸ್‌ಲೋ. ಏನೇನೋ ಗೊಣ್ಗ್‌ತೊಳೊ.

ಅದೇ ಹೊತ್ತುಲಿ ಆ ತುಂಬು ಗರ್ಭಿಣಿ ಅಯ್ಯೆಗೆ ಮೆಲ್ಲಂಗೆ ಹೆರ್ಗೆ ಬೇನೆ ಸುರಾತ್. ಆಕೆನ ನಕ್ಷತ್ರದ ಹೆಸ್ರ್ ಹೇಮಾವತಿ ಆದರೂ ಸಾಕ್ಷಾತ್ ಲಕ್ಷ್ಮೀ ಸ್ವರೂಪ. ಹೆಣ್ಣ್‌ನ ಬೇನೆ ಉಸ್ರು ಕೇಳ್ದ ಗಂಡ ರಾಮಯ್ಯ ಮೆಲ್ಲನೆ ಎದ್ದ್ ಚಡಪಡ್ಸಿಕೆ ಸುರು ಮಾಡ್ದೊ. (ಹೆರ್ಗೆ ಬೇನೆ ದೈಹಿಕವಾಗಿ ಹೆಮ್ಮಕ್ಕಳಿಗಾದರೆ ಅದರ್‌ಂದಲೂ ಮೂರ್ ಪಾಲ್

ಮಾನಸಿಕವಾಗಿ ಗಂಡಂದ್ರಿಗೂ ಇದ್ದದೆ!!). ಗಂಡ ರಾಮಯ್ಯ ಸ್ವತಃ ರಾಮನ ಗುಣದವು. ಅದೆಷ್ಟೇ ಕಷ್ಟ, ನಿಷ್ಟುರ, ಅವಮಾನಗ ಬಂದರೂ ನಂಬಿಕಂಡ್ ಬಂದ ಸತ್ಯ, ಧರ್ಮನ ಬುಟ್ಟವಲ್ಲ. ಸುರೂನ ಸಣ್ಣ ಕೂಸು ಅಕ್ಕುನೊಟ್ಟಿಗೆ ಮಲ್ಗಿದ್ದ ರಾಮಯ್ಯನ ಸೋದರಿ ಕುಂಞಕ್ಕ ಮೆಲ್ಲನೆ ಎದ್ದ್ ಬಂದ್ 'ಹೆರಿಗೆ ಬೇನೆ ಸುರಾತ್‌ನೆ. ಕಾರ್‌ನ ವ್ಯವಸ್ಥೆ ಮಾಡ್, ಬೇಗ ಆಸ್ಪತ್ರೆಗೆ ಪೋಯೀಂತ' ಹೇಳಿ ಒಡ ಹುಟ್ಟಿದವಂನ ಕಾರ್ ತಾಕೆ ಬೆರ್ಸಿದೊ.

ಇತ್ತ ಗರ್ಭದೊಳಗಿದ್ದ ಕೂಸುಗೆ ಲೋಕ ನೋಡುವ ಆಸೆ. ಹೊಟ್ಟೆ ಒಳಗೆ ಮೊಗ್ಚಿ ಮೊಗ್ಚಿ ಹೊರಡುವ ತವಕ. ಅಮಾಸೆಲಿ ಸೂರ್ಯೋದಯಕ್ಕೆ ಮೊದ್ಲ್ ತೆಗ್ದ್ ಕಷಾಯಮಾಡಿ ಕುಡಿವ ಹಾಲೆಮರದ ಕೆತ್ತಲಿ 101 ಬಗೆ ಮೊದ್ದು ಇದ್ದದೆಗಡ. ಹಂಗೇ ಮನೆ ಯಜಮಾನಂಗ ಹಾಲೆ ಕೆತ್ತೆ ಕೆತ್ತಿಕೆ ಹೊರ್ಡುವ ಹೊತ್ತಿಗೆ ಆ ಹಸುಬಾಲೆ ಲೋಕಕ್ಕೆ ಬಾತ್. ಕಣ್ಣಳ್ಸಿ ಎಲ್ಲರ ಮೋರೆ ಅರ್ಳ್‌ಸಿತ್. ಕುಂಞಕ್ಕನ ಖುಸಿಗೆ ಲೆಕ್ಕನೇ ಇಲ್ಲೆ. ಸ್ವರ್ಗನೇ ಕೈಗೆ ಸಿಕ್ಕಿತ್‌ತೆಂಬಾಂಗೆ ಕೊಣ್ದಾಡ್ಯೊ. ಆತಂಕ, ಗಾಭರಿಲಿ ರಾಮಯ್ಯ ಕಾರ್ ತಕಂಡ್ ಬಾಕಾಕನ ಕೂಸು ಕುಂಞಕ್ಕನ ಕೈಲಿ ನೆಗಾಡ್ತಿತ್ತ್. ಅಂತೂ ಇಂತು ಕಡು ಸಮಯ, ದಿನಾಂತ ಹೇಳುವ ಘಳ್ಗೆಲಿ ಆಟಿ ಅಮಾಸ್ಯೆನ ಮಂಗ್ಳಾರದ ದಿನ ಇದಿಷ್ಟೂ ಬರ್ದ ನಿಮ್ಮ ಹೈದ ಹುಟ್ಟಿತ್ತ್!!!

* * * *

ನಾನೂ ಪುಂಡಿ ಬೇಸಿದೆ !!!

ಅದ್ಯಾಕೋ ಬೆಂಗ್ಳೂರ್‌ಗೆ ಬಂದಮೇಲೆ ಊರುನ ಚಾಯ/ಹಿಟ್ಟ್‌ಗ ಭಯಂಕರತೇಳುವಾಂಗೆ ನೆನ್ಪಾದೆ. ಬೊಡ್ರೊಟ್ಟಿ, ಕಲ್ತಪ್ಪ, ಓಡಿಟ್ಟ್, ಉರ್ಳಿಟ್ಟ್, ನೀರ್ ದೋಸೆ, ಪುಂಡಿ... ಹಿಂಗೆ.. ಬಗೆ ಬಗೆ. ಯಾಗೋಳು ಯೋಗ/ ರಿಸರ್ಚ್‌ಲಿ ಮುಳ್ಗಿರುವ ಈ ಸೈಂಟಿಸ್ಟ್ ತಲೆಗೆ 'ನಾನೇ ಒಮ್ಮೆ ಯಾಕೆ ಹಿಟ್ಟ್ ಮಾಡಿ ನೋಡಿಕೆ ಬೊತ್ತ್?' ಅಂತ ಹಂಗೇ ಫ್ಲಾಶ್ ಆತ್. ಆದ್ರೆ ಯಾವುದರಾಂತ ಮಾಡ್ದು. ಬೊಡ್ರೊಟ್ಟಿಗೆ ಕಾವ್ಲಿ ಇಲ್ಲೆ – ನೀರ್ ದೋಸೆ ಹೊಯ್ಯಕೆ ಗೊತ್ತ್ಲೆ!! ಕಲ್ತಪ್ಪ ಮಾಡಿಕೆ ಮೇಲೆ ಕೆಳಗೆ ಕಿಚ್ಚಿ ಹಾಕಿರೆ ಹೊಗೆ ನೋಡಿ ಅಪಾರ್ಟ್‌ಮೆಂಟ್‌ನವು ಅಗ್ನಿಶಾಮಕಕ್ಕೆ ಫೋನ್ ಮಾಡ್ರೆ ನಾ ಮತ್ತೆ ಪೋಲೀಸ್ ಸ್ಟೇಶನ್‌ಲಿ ಇರಕಾದುತ ನೆನ್ಸಿ ನನ್ನ ಐಡಿಯಾನ 'ಪುಂಡಿ'ಗೆ ತಂದು ನಿಲ್ಸಿದೆ.

ಶಾಪಿಂಗ್ ಮಾಲ್‌ನ ಯಾವುದೋ ಮೂಲೆಲಿ ಬಿದ್ದ್ ಒಟ್ಟೆ ಹೋದ ಇಡ್ಲಿಪಾತ್ರೆನ ಹುಡ್ಕಿ ತಂದೆ ರಿಸರ್ಚ್‌ಲಿ ಫಸ್ಟ್ Reference ಅಂದ್ರೆ "ಉಲ್ಲೇಖ" ಎಲ್ಲಿಂದ? ಕೂಡ್ಲೆ ಪೊಪ್ಪಂಗೆ ಪೋನ್ಮಾಡ್ದೆ (ಯಾಕಂದ್ರೆ ಮನೇಲಿ ಯಾಗೋಳು

ಪುಂಡಿ ಮಾಡ್ತಿದ್ದದೇ ಅವು!!!) ಅಕ್ಕಿ ಪದ್ನಿಕೆ ಹಾಕಿ, ಕಡ್ಚು, ಕೊದ್ದುಸಿ, ನಾದುಸಿ ಮಾಡಿಕೆ ಕೆಲ್ಸ ಸುಮಾರುಟ್ಟೂಂತ ಕೇಳಿ ಮನ್ಸ್ ಒಮ್ಮೆ ಚುಯಿಂಕ ಆತ್. ಇನ್ನೊಂದು ಉಲ್ಲೇಖ ಇಲ್ರೀಂತ ಅಮ್ಮನ ಕೇಳ್ದೆ. ಸೋ ಸಿಂಪಲ್... ಅಕ್ಕಿ ಹೊಡಿನ ನೀರ್‌ಗೆ ಹಾಕಿ ನಾದ್ಸಿರೆ ಇನ್ನೂ ಸುಲಭಾಂತ ಗೊತ್ತಾತ್. ಚೂರ್ ಕಾಯಿ ಹೆರ್ದ್ಹಾಕಿರೆ ಇನ್ನೂ ರುಚಿ!!

ಅಂತೂ ಇಂತೂ ಸಾಕಷ್ಟ್ ಅಂದ್ರೆ ವಿಮರ್ಶೆ ಮಾಡಿ ಅಕ್ಕಿಹೊಡಿ ರೆಡಿಮಾಡ್ದೆ. ಅಗಾಲದ ತಪಲೆಗೆ ನೀರು, ಎಣ್ಣೆ ಹಾಕಿ ನೀರು ಬಿಸಿ ಆದ ಹಾಂಗೆ ಚೂರು ಚೂರು ಅಕ್ಕಿಹೊಡಿ ಹಾಕಿದೆ. ಮೆಲ್ಲ ಮೆಲ್ಲಂಗೆ ಕಲ್ಸಿ ಪುಂಡಿ ಹದಕ್ಕೆ ತಂದೆ. ಒಂದು ಕೈ ನೀರ್ ಪಾಟೆಗೆ ಹಾಕಿಕಂಡ್ ಬಿಸಿ ಬಿಸಿನನೇ ಹೆಂಗೋ ಕಲ್ಸಿ ಪಾತ್ರೆಲಿ ಇಸಿದೆ. ಒಂದು ಉಂಡೆ ಕೋಳಿ ಮೊಟ್ಟೆನಾಂಗೆ, ಇನ್ನೊಂದು ಕ್ರಿಕೆಟ್ ಬಾಲ್‌ನಾಂಗೆ ಆದರೂ ಬೇಯ್ದು ಗ್ಯಾರಂಟೀಂತ ಮುಚ್ಚಳ ಮುಚ್ಚಿ ಗ್ಯಾಸ್‌ಸ್ಟವ್ ಹೊತ್ತುಸಿದೆ.

ಈಗ ನನ್ನ ರಿಸರ್ಚ್‌ನ ರಿಸಲ್ಟ್!!

10 ನಿಮಿಷ ಕಳ್ದಾಂಗೆ ಎಲ್ಲಿಂದಲೋ ಏನೋ ಕರ್‌ಂಚಿದ ವಾಸನೆ. ಹೊರಗೆ ಕಸರಾಶಿಗೆ ಕಿಚ್ಚಿ ಹಾಕ್ಯೊಳೋಂತ ನೆನ್ಸಿದೆ. ಸರೀ 20 ನಿಮಿಷ ಕಳ್ದಾಕನ ಪುಂಡಿ ಬೇತ್. ಸ್ಟವ್ ಆಫ್ ಮಾಡಿ ಇಡ್ಲಿ ಪಾತ್ರ ಮುಚ್ಚಳ ತೆಗ್ದು ನೋಡ್ರೆ... ಪುಂಡಿ ಕರ್‌ಂಚಿಟು!! ಕಾರಣ ಪುಂಡಿ ಬೇಯಕೆ ಇಡ್ಲಿ ಪಾತ್ರಕ್ಕೆ ನೀರೇ ಹಾಕಿತ್ಲೆ!! ಒಟ್ಟಿ ಹೋದ ಇಡ್ಲಿ ಪಾತ್ರೆ ನನ್ನ ರಿಸರ್ಚ್‌ನ ನೋಡಿ ಒರುಂಗಿಸಿ ನೆಗಾಡ್‌ತಿತ್ತ್!!

* * * *

ಛೇ... ಹಿಂಗೂ ಆದು ಉಟ್ಟಾ??!!

ಕುಂಟಡ್ಕ ದೊಡ್ಡಮನೆ ಪೊನ್ನಪ್ಪತೇಂಲ್ರೆ ಇಡೀ ಉಂಡೆಮಜಲ್ ಗ್ರಾಮಕ್ಕೇ ದೊಡ್ಡಜನ. ಸತ್ಯ, ಧರ್ಮಕ್ಕೆ ಹೆಸ್ರಾದ ಇವು ಭಾರೀ ಶ್ರಮಜೀವಿ. ನೋಡಿಕೂ ಹಾಂಗೆ.. ಆರೂವರೆ ಅಡಿ ಎತ್ತರದ ಆಜಾನುಬಾಹು!! ಊರುನ ಯಾವುದೇ ಕಾರ್ಯಕ್ರಮಕ್ಕೆ ಹೋದರೂ ಜನ "ಏನ್ ಪೊನ್ನಣ್ಣಾ" ಹೇಳಿ ಕೈ ಎತ್ತಿ ನಮಸ್ಕಾರ ಮಾಡಿ ಮಾತಾಡ್ಸವು. ಇಂಥಾ ಪೊನ್ನಪ್ಪನವರ್ದ್ ಐದ್ ಗಂಡ್ ಎರಡ್ ಹೆಣ್ಣ್ ಮಕ್ಕಳ ತುಂಬು ಸಂಸಾರ... ಅದರ್ಲಿ ಹಿರಿಯವನೇ ನಮ್ಮ "ಸೋಮಪ್ಪ"....

ಎಲ್ಲವ್ಕೂ ದೊಡ್ಡಂವ ಆದರ್‌ಂದ ಕರಿದು 'ಸೋಂಪಣ್ಣ'!!!! ಇವನೇ ನಮ್ಮ ಈ ಕಥೆಗೆ ನಾಯಕ. ಒಳ್ಳೆ ವಿದ್ಯೆ, ಬುದ್ಧಿ ಒಟ್ಟಿಗೆ ಒಳ್ಳೆ ಉದ್ಯೋಗಲೂ ಇದ್ದ ನಮ್ಮ ಸೋಂಪಣ್ಣಂಗೆ ಪ್ರಾಯ ತುಂಬಿಕಂಡ್ ಬಂದಾಂಗೆ ಎಲ್ಲವ್ಕೂ ಬರುವ ಆಸೆನೂ ಹುಟ್ಟಿತ್. ಅದೇ "ನಾನೂ ಒಂದು ಮೊದ್ವೆ ಆಕು!!" ಅಂತ. ಆದರೆ ಮನೆಲಿ ಅಪ್ಪನೊಟ್ಟಿಗೆ ಹೆಂಗೆ ಹೇಳ್ದು? ಮಕ್ಕ ಎಷ್ಟೇ ಬೆಳ್ದು ದೊಡ್ಡವರಾದರೂ ಅಯ್ಯೆ, ಅಪ್ಪಂಗೆ ಮಕ್ಕಳೇ ಅಲ್ಲ!! ಅದಲ್ಲೂ ನೇರ ಹೋಗಿ ಹೇಳ್ರೆ ತಮಾಷೆ ಮಾಡಿ ನೆಗಾಡ್ವೋತ ನಾಚಿಕೆ.

ಆಗ ನೆನ್ಪಾದೇ ಸೋಂಪಣ್ಣಂಗೆ ಅವನ ಚಡ್ಡಿ ದೋಸ್ತಿ ಕಾಟಿಗುಂಡಿ ಮಿಲ್ಟ್ರಿ ರಾಮಣ್ಣ!!!

ಸೋಂಪಣ್ಣ ಅರ್ಕಿಲ್‌ಲಿ ಕಾಸಿ ಬಾಳೆ ಕುರ್ಲೆ ಅಡಿಲಿ ನುರ್ಕಿ ಇಸಿದ 'ಗ್ಯಾರ್ದಣ್ಣ್'ದನ್ರೂ, ಒಂಚೂರ್ ಕಡ್ಡೆ ಉಪ್ಪಣನೂ ಹಿಡ್ಕಂಡ್ ದೋಸ್ತಿನಕ್ಕಲೆ ಹೊರ್ಟತ್. ದಾರಿಲಿ ಸಿಕ್ಕಿದ ಕಟ್ಟ, ಚೋಡಿಗಳ್ಲಿ ಕೈಕಾಲ್ ತೊಳ್ಕಂಡ್, ಯಾರೋ ಹಾಕಿದ ಅಡ್ಚಿಲ್‌ಗೆ ಬಿದ್ದ ಮೊಲನ ಕಾಡ್‌ಗೆ ಬುಟ್ಟ್‌ಕಂಡ್, ಗುಡ್ಡೆಲಿ ಸೊಪ್ಪ್ ಹೆರ್ಕ್ಂಡಿದ್ದ ಗದ್ದೆಲಿ ಹಳು ತೆಕ್ಕಂಡಿದ್ದ ಹೆಮ್ಮಕ್ಕಳೆಲ್ಲಾ ಮಾತಾಡ್ಸಿಕಂಡ್ ಕಾಟಿಗುಂಡಿ ಮನೆಗೆ ಎತ್ತ್‌ಕಾಕನ ಕೋಳಿಗಳೆಲ್ಲಾ ಮುಚ್ಚಿ ಹಾಕುವ ಹೊತ್ತ್. ಉದ್ಗಿಲ್ ತೆಗ್ಯಕಾಕನನೇ ಬೂದಿಗುಂಡಿಂದ ಎದ್ದ ನಾಯಿ ಕಚ್ಚಿಕೆ ಬಂದಾಂಗೆ ಓಡಿಬಂದರೂ, ನೆಂಟ್ರತ ಗೊತ್ತಾಗಿಯೋ ಏನೋ ಮೂಸಿಕೆ ಸುರುಮಾಡ್ತ್. ನೋಡ್ರೆ ರಾಮಣ್ಣ ಅಂಗಳಲೇ ಚುರ್ಕರ ಕುದ್ದ್ ಕಂಡ್ ಉರ್ಳ್‌ಗೆ ಬಿದ್ದ ಬರಿಂಕನ ಸಜ್ಜಿ ಮಾಡ್ತುಟ್ಟು!! ದೋಸ್ತಿ ಬಂದದರ ನೋಡಿ ಮಾಸ ಕಮ್ಮಿ ಆದೊಲ್ಲಾಂತ ನೆನ್ಸಿರೂ ಕೈಲಿದ್ದ ಕುಪ್ಪಿ ನೋಡಿ ಹೆರ್ಮಣೆನಾಂಗಿದ್ದ ಅಷ್ಟೂ ಹಲ್ಲ್ ಬುಟ್ಟ್ "ಕೋಲ್ಗೇಟ್ ಸ್ಟೈಲ್" ಕೊಟ್ಟರೆ, ರಾಮಣ್ಣನ ಹೆಣ್ಣ್ ಅಮ್ಮಣಿ ಅಂಗಳಲಿ ಉರ್ಬುಳಿ ಹೊಣ್ಯಾಕಂಡಿದ್ದ ಮಕ್ಕಳ ನೀರ್ ಚೊಂಬ್ ತಾಕೆ ಬೆರ್ಸಿ ತಾನೂ ಅಣ್ಣನ ಮಾತಾಡ್ಸಿಕೆ ಬಾತ್... ಕತ್ತಲೆಗೆ ಸೋಂಪಣ್ಣಂಗೆ ಭಾರೀ ಗಮ್ಮತ್. ಸ್ಪೆಷಲ್ ಮಿಲ್ಟ್ರಿ ರಮ್ ಬೇರೆ!! ಊಟ ಎಲ್ಲ ಆದ ಮೇಲೆ ಸೋಂಪಣ್ಣ ದೋಸ್ತಿನೊಟ್ಟಿಗೆ ಮೆಲ್ಲ ಬಂದ ವಿಷಯನ ಬಾಯ್ಬುಟ್ಟತ್. "ಯಾಗೋಳು ತಲೆದಿಂಬು ತೊಬ್ಬಿ ಹಿಡ್ದ್ ಮಲ್ಗಿ ಮಲ್ಗಿ ಸಾಕಾತ್ ಮಾರಾಯ. ಮೊದ್ವೆ ಆಕೂಂತ ಮನ್ಸಾದೆ. ಅಪ್ಪನೊಟ್ಟಿಗೆ ಹೆಂಗೆ ಹೇಳ್ದು.. ನಂಗೆ ಮೊದ್ವೆ ಮಾಡೀಂತ!!.. ನೀನೇ ಒಂದು ಉಪಾಯ ಹೇಳ್". ಮಿಲ್ಟ್ರಿ ರಮ್ ಆಗಲೇ ತಲೆಗೆ ಹಿಡ್ದಿದ್ದ ರಾಮಣ್ಣಂಗೆ ದೋಸ್ತಿನ ಕಷ್ಟಕ್ಕೆ ಒಳ್ಳೆ ಉಪಾಯ ಕೊಟ್ಟತ್. "ಸೋಂಪ... ನೀ ಹೋಗಿ ಪೊನ್ನ ಮಾವಂಗೆ ಹೇಳ್.. ಅಪ್ಪಾ... ಅವ್ವ ಒಬ್ಬಂಗೆ ಮನೆ ಕೆಲ್ಸ ಎಲ್ಲಾ ಮಾಡಿಕೆ ಭಂಗ... ತಮ್ಮಂದ್ರ್‌ಗೆ ಮೊದ್ವೆ ಮಾಡಿ... ಮನೆಗೆ ಎರ್ಡ್ಹೆಣ್ಣ್ ಮಕ್ಕ ಬಂದವೆ'.... ಆಗ ಮಾವ ಹೇಳುವೊ 'ದೊಡ್ಡಂವ ನಿನ್ನ ಬುಟ್ಟ್ ಒಳ್ಳವ್ಕೆ ಮೊದ್ವೆ ಮಾಡ್ರೆ ನೋಡ್ದವ್ ಏನ್ ಹೇಳುವೊ. ಸುರೂಗೆ ನೀ ಮೊದ್ವೆ ಆಗ್... ಮತ್ತೆ ಒಳ್ಳವ್ಕೆ'... ಆಗ ನಿನ್ನ ಮೊದ್ವೆ ಗ್ಯಾರಂಟಿ ಆದೆ" ಅಷ್ಟೇ!!!

ಮಾರ್ನೆ ದಿನ ಬೊಳ್ಪುಗೆ ಕೋಳಿಕೂಂಗಿಕೇ ಮೊದ್ಲು ಎದ್ದ ಸೋಂಪಣ್ಣ ಅಮ್ಮಣಿ ಮಾಡ್ದ ಬೊಡ್ರೊಟ್ಟಿ, ಕತ್ತಲೆನ ಗಸಿ ತಿಂಡಿ ಓಡಿಕಂಡ್ ತೇಳುವಾಂಗೆ

ಬಂದ್ ಮನೆಗೆ ಎತ್ತಿತ್. ಬಂದದೇ ಸೀದ ಅಪ್ಪನ ಮುಂದೆ ಹಾಜರ್. ಪೊನ್ನಣ್ಣ ಆಗಷ್ಟೆ ಜಾಲ್ ಕರೆಲಿ ಮಾಡ್ದ ನೆಟ್ಟಿಗೆ ನೀರ್ ಹೊಯ್ದ್ ಬಂದ್ ದೊಡ್ಡಮನೆ ಕೈಮರಲಿ ಕುದ್ದ್ ಸುಧಾರ್ಸಿ ಕಣ್ತೊಳೊ. ದೋಸ್ತಿ ಹೇಳಿಕೊಟ್ಟಾಂಗೆ ಸೋಂಪಣ್ಣ ಉರ್ಗಿತ್....

"ಅಪ್ಪಾ.. ಮನೆಲಿ ಜನ ಜಾಸ್ತಿ ಆಗಿ ಅವ್ವ ಒಬ್ಬಂಗೆ ಎಲ್ಲಾ ಕೆಲ್ಸ ಭಂಗ. ಹಂಗೇ ತಮ್ಮಂದ್ರ್‌ಗೆ ಮೊದ್ವೆ ಮಾಡ್ರೆ ಆಕಿಲೆನಾ?" ಆ ಮಾತ್‌ನ ಕೇಳಿ ಪೊನ್ನಣ್ಣಂಗೆ ಕಣ್ಣ್‌ಲಿ ನೀರ್ ತುಂಬಿ, ಮಂಜನ ಕೈ ಹಿಡ್ಕಂಡ್ "ನೀ ನನ್ನ ಮಂಜ ಅಲ್ಲಬಲ... ನೀನೇ ನಂಗೆ ಅಪ್ಪ. ಮನೆ ಜವಾಬ್ದಾರಿ ಎಲ್ಲಾ ನಾ ಹೇಳದೆ ನೀನೇ ತಕಂಡಳ. ನಿನ್ನಂಥ ಮಂಜ ಹುಟ್ಟಿಕೆ ನಾ ಎಷ್ಟ್ ಪುಣ್ಯ ಮಾಡಿರೊಕೊ!! ಆಗಲಿ.. ನೀ ಹೇಳ್ದಾಂಗೆ ತಮ್ಮಂದ್ರ್‌ಗೆ ಮಾತ್ರ ಅಲ್ಲ.. ಒಳ್ಳ ನೆಂಟ್ರ್ ಸಿಕ್ಕಿರೆ ನಿನ್ನ ತಂಗೆಕಳಿಗೂ ಒಟ್ಟಿಗೇ ಮೊದ್ವೆ ಮಾಡೊನೊ!!" ತಿರ್ಗಿ ಎಂಥಾಂತ ಹೇಳ್ದು ಸೋಂಪಣ್ಣ.. ನನ್ನ ಹಣೆಲಿ ಇಷ್ಟೇ ಬರ್ದುಟೂಂತ ನೆನ್ಸಿಕಂಡ್, ಉಪಾಯ ಹೇಳಿಕೊಟ್ಟ ದೋಸ್ತಿಗೆ "ಹುಲಿ ಹಿಡಿಯಕೆ" ಅಂತ ಬೊಯ್ಕಂಡ್ "ಕುರೆ ಸತ್ತ ಕೊರುಂಬ" ನಾಂಗೆ ತೋಟ ಕಡೆ ಹೊರ್ಟತ್. ಆರ್ತಿಂಗಳೊಳಗೆ ಸೋಂಪಣ್ಣನ ಎರ್ಡ್ ತಮ್ಮಂದಿರಿಗೂ, ತಂಗೆಕಳಿಗೂ ಒಂದೇ ಚಪ್ಪರಲಿ ಮೊದ್ವೆನೂ ಕಳ್ತ್!!! ಆದರ್‌ಂದ ನಮ್ಮ ಹೈದ ಗೂಡೆಗಳೇ... ಮೊದ್ವೆ ಆಕುಂತಿದ್ದರೆ ನೇರವಾಗಿ ಅವ್ವ, ಅಪ್ಪಂಗೆ ಹೇಳಿ. ಇಲ್ಲರೆ ಕಡೆಗೆ ನೀವೂ ಹೇಳಕಾದು.. "**ಛೇ.. ಹಿಂಗೂ ಆದು ಉಟ್ಟಾ?**"

* * * *

ಹುಡ್ಗಾಟದ "ಹುಡ್ಕಾಟ"

ಆ ಪ್ರಾಯನೇ ಹಂಗೆ... ಆಗಷ್ಟೇ ಪಿಯುಸಿ ಮುಗ್ಸಿ ದೊಡ್ಡ ಕಾಲೇಜ್‌ಗೆ ಸೇರಿದ್ದವೆ. ಕ್ಲಾಸ್‌ಲಿ ಇದ್ದರೂ ಇಲ್ಲದಿದ್ರೂ, ಲೆಕ್ಚರ್ ಮಾಡ್ದ ಪಾಠ ಕೇಳ್ರೂ ಕೇಳದಿದ್ದರೂ ಹೇಳಂವ ಕೇಳಂವ ಯಾರೂ ಇರ್ದುಲೆ. ಎಷ್ಟೇ ಗೂಡೆಗಳ ನೋಡ್ರೂ ಮನ್ಸ್‌ಗೆ ಬಿಡ್ದ್ ಹೋತ್ ಅನ್ಸಿಕೇಲೆ. ಗ್ಲಾಸ್‌ಲಿ ಅಲ್ಲದಿದ್ದರೆ ಗೊಟ್ಟೆಲಿ ಕುಡ್ಸುವಾಂಗೆ ಕದ್ದ್ ಕದ್ದ್ ನೋಡಿಕೆ ಕಾದ್‌ಕಂಡಿದ್ದವೆ. ಇನ್ನ್ ಹಾಸ್ಟೆಲ್‌ಲಿ ಇದ್ದರೆ ಅಂತೂ ಕೇಳೊಕೂಂತಲೇ ಇಲ್ಲೆ. ಅಪ್ಪನ ಬೊಯ್ಗಳಿಲ್ಲೆ. ಅಮ್ಮನ ಪರ್ರ್‌ಂಚಟ ಇಲ್ಲೆ!!!

(ಎಷ್ಟೋ ಸಲ ಅನ್ಸಿದೆ... ಮೊನ್ನ ಆಗಿ ಹುಟ್ಟಿದ ಮೇಲೆ ಒಮ್ಮೆಯಾರ್ ಹಾಸ್ಟೆಲ್ ಲೈಫ್ ಮಜಾ ಅನ್ಭವ್ಸಿಯೇ ಅನ್ಭವ್ರೊಸಕು!!) ಹಿಂಗಿರ್‌ಕಾಕನನೇ ನಮ್ಮ ತಲೆಗೆ ಎಂತ ಹೋಳ್ದರೂ "ಸಂಶೋಧನೆ" ಮಾಡೊನೊ ಎಂಬ ಸಣ್ಣ ಧೈರ್ಯ "ಹುಡ್ಗಾಟ"ಟ ಮನ್ಸ್‌ಗೆ ಹೊಳಿದು. ಹಂಗೇ ಹಾಸ್ಟೆಲ್ ಹಿಂದೆ ಮರಲಿ ಗ್ಯಾರ್ಡಣ್ಣ್ ನೋಡ್ಯಾಕನನೇ ನನ್ನ ತಲೆಗೂ ಹೊಳ್ತ್... ಎಂತ?? ಬೀಜದಣ್ಣ್ ಹೇಳ್ರೆ ನೀವ್ಗೂ ಹೊಳ್ದಿರ್ದಲ್ಲಾ?? ಅದೇ.. ಅದೇ... ಒಮ್ಮೆ

"ಗ್ಯಾರ್ದಣ್ಣ್" ದರ ಕಾಸಿ ನೋಡೊನೋಂತ!!

ಆದರೆ ಕಾಸುದು ಹೆಂಗೆ?? ಸಣ್ಣದರ್ಲಿ ಬೀಜಣ್ಣ್ ಸಿಗ್ಟ್ ಹಾಕುದರ ನೋಡಿ ಗೊತ್ತುತಷ್ಟೇ ಬುಟ್ಟು ಕಾಸುದರ ನೋಡಿಯೇ ಗೊತ್ಲೆ!! ಪ್ರೈಮರಿ ಶಾಲೆಲಿ ವಿಜ್ಞಾನಲಿ ಜಾರ್ಜ್ ಮಾಷ್ಟ್ರ "ನೀರಿನ ಭಾಷ್ಪೀಭವನ/ಭಟ್ಟಿ ಇಳಿಸುವಿಕೆ ಅಂದರೆ ಅದೇ ಮಾರಾಯ" ಹೇಳ್ದ್ ನೆನ್ಪಾತ್. ಆದರೂ ಯಾರೊಟ್ಟಿಗೇಂತ ಕೇಳ್ದು. ಕೊಡ್ಪಾಣಲಿ ಚಿಪ್ಪಿ ಇಸಿ ಕಾಸಿಕಣ್ತಿದ್ದ ದೊಡ್ಡಪ್ಪನೊಟ್ಟಿಗೆ ಕೇಳ್ರೆ ಆಕಿಲೆ. ಯಾರಿಗೂ ಗೊತ್ತಾಗದಾಂಗೆ ಪುಂಡಿಪಾತ್ರಲಿ ಕಾಸಿಕಂಬತಿದ್ದ ದೊಡ್ಡಮ್ಮನೊಟ್ಟಿಗೆ ಕೇಳ್ರೆ ಮಾಯಿಪುನ ಸುಡಿಲೇ ಸಿಕ್ಕುದು. ಇನ್ನ್ ಡ್ರಮ್ಮುಗಟ್ಟಲೆ ಕಾಸಿಸಿಕಂಬತಿದ್ದ ಮಾವನೊಟ್ಟಿಗೆ ಕೇಳ್ರೆ ಗ್ರಾಚಾರನೇ ಬುಡ್ಸ್‌ವೊ. ಅಷ್ಟೊತ್ತಿಗೆ ಕುರೆನೊಟ್ಟಿಗೆ ಇರುವ ಕೊರುಂಬನಾಂಗೆ ನನ್ನ ಎಲ್ಲಾ "ಮಹಾತ್ಕಾರ್ಯ"ಗಳ್ಗೆ ಒಟ್ಟಿಗೆ ಇರುವ ದೋಸ್ತಿ "ಎಂಪಿ" ನ ನೆನ್ಪಾತ್.

(ಮನೆಂವ್ ಎಷ್ಟೇ ಲಾಯಿಕ್‌ನ ಹೆಸ್ರಿಸಿರೂ ನಾವ್ ಕರಿದು 'ಕುಂಞಿ' ಹೆಸ್ರ್‌ಲೇ ಅಲ್ಲ) ನಾವಿಬ್ಬರೂ ಕ್ಲಾಸ್ ಬೇರೆ ಆದರೂ ಒಂದೇ ಊರವ್ ಆದರ್‌ಂದ ಬೆಸ್ಟ್ ಜೋಡಿ. ಇಬ್ಬರೂ ಸೇರಿ, ಡಿಸ್ಕಸ್ ಮಾಡಿ "ಕಾಸುವ ಪ್ಲಾನ್" ರೆಡಿ ಮಾಡ್ದೊ.

ಬೊಳ್ಪುಗೇ ಹೋಗಿ ಸುಮಾರ್ ಬೀಜಣ್ಣ್ ಹೆಕ್ಕ್ಯಂಡ್ ಬಾಕನ ದಾರಿಲಿ ಸಿಕ್ಕಿದ ಗೂಡೆಗಳಿಗೆ ತಿಂಬಕೆ ಆಸೆ ಆದೇಂತ ಸುಳ್ಳು ಬೇರೆ ಬುಟ್ಟೊ. ಹಣ್ಣ್‌ನ ಸಿಗ್ದ್ ಒಂದ್ ಪಾತ್ರಲಿ ಹಾಕಿ ಮಂಚದಡಿಲಿ ಅಣ್‌ಂಗಿಸಿ ಇಸಿದೊ. (ವಾರ್ಡನ್‌ಗೆ ಗೊತ್ತಾಕೆ ಬೊತ್ತಲ್ಲ!!) ಈಗ ನೋಡಿ ಹೊಸ ತಲೆಬಿಸಿ.. ಕಾಸುದೆಂತದರ್ಲಿ?? ಅದ್ಕೂ ಎಂಪಿ ಒಂದು ಉಪಾಯ ಕೊಟ್ಟತ್. ಕೆಮೆಸ್ಟ್ರಿ ಲ್ಯಾಬ್‌ಂದ "ದುಂಡು ತಳದ ಫ್ಲಾಸ್ಕ್" ಹಾರ್ಸಿದೊ. ಒಟ್ಟಿಗೆ ಬಿಂದ್ ಬಿರಡೆ/ಕಾರ್ಕ್ ಮತ್ತು ಟ್ಯೂಬ್!! ಸರಿ.. ಒಂದು ವಾರ ಕಳ್ದ್ ಶನಿವಾರ "ಕಾಸುವ ದಿನ" ಬಾತ್.

(ಶನಿವಾರ ಯಾಕೇಂತೇಳ್ರೆ ವಾರ್ಡನ್ ಮನೆಗೋದವೆ) ಇಡೀ ಹಾಸ್ಟೆಲ್ ಮಲ್ಗಿದ ಮೇಲೆ ಕತ್ತಲೆಗೆ 12 ಘಂಟೆಗೆ "ಕಾಸುವಕಾರ್ಯ"ಕ್ಕೆ ರೆಡೀ ಆದೊ. ನಮ್ಮ ಈ "ಹುಡ್ಕಾಟ"ಕ್ಕೆ ನಡುರಾತ್ರೆ ಅದ್ಯಾವ ಕೊಲೆ, ಪೀಡೆ ಕಣ್ಣ್ ಮುಟ್ಟ್‌ಸ್ತೊ ಏನೋ.. ಕಾಸಿಕೆ ಕಿಚ್ಚ್ ಇಲ್ಲೆ!!

"ಆಪದ್ಭಾಂದವ ಐರನ್ ಬಾಕ್ಸ್" ಮೇಜದ ಮೂಲೆಲಿ ಕುದ್ದು ನೆಗಾಡ್ತುಟ್ಟು.

ಇಸ್ತ್ರಿ ಪೆಟ್ಟಿಗೆನನೇ ಅಡ್ಡ ಹಾಕಿ ಫ್ಲಾಸ್ಕ್‌ನ ಅದರ ಮೇಲೆ ಇಸಿ ಕಾಸಿಕೆ ಸುರು ಮಾಡ್ತೊ. (ಇಸ್ತ್ರಿ ಪೆಟ್ಟಿಗೆಗೆ ಆಮ್ಲೆಟ್ ಹೊಯ್ದ್ ಹೊಯ್ದ್ ಅಭ್ಯಾಸ ಆದದ್ರಂದ ಹೆದ್ರಿಕಂಡಿರಿಕಿಲೆ!!) ಅಂತೂ ಫ್ಲಾಸ್ಕ್‌ಲಿ ಇದ್ದದ್ ಕೊದ್ದ್ ಕೊದ್ದ್ ಕರೆಲಿದ್ದ ಸಣ್ಣ ಕುಪ್ಪಿಲಿ ಒಂದ್ ಕೊಂಡೆನಷ್ಟ್ ತುಂಬಿತ್. ನಾವ್ಗೋ... ಪ್ರಪೋಸ್ ಮಾಡಿಕೆ ಹೋಕನ ಗೂಡೆನೇ ಬಂದ್ "ಐ ಲವ್ ಯೂ" ಹೇಳ್ದಷ್ಟ್ ಖುಶಿ. ಕಾಸಿದ ಮೇಲೆ ರುಚಿ ನೋಡದಿದ್ದರೆ ಆದೋ? ಹುಟ್ಟಿದಲ್ಲಿಂದಿತ್ತ ಕಂಡವರೆಲ್ಲಾ ಮನ್ಸ್‌ಲೇ ನೆನ್ಸಿದ್ ಒಂದ್ ತುಂಡ್ ನೆಕ್ಕರೆ ಉಪ್ಪಿನಕಾಯ್‌ನೂ ನೆಕ್ಯಂಡ್ ಚೂರ್ ಚೂರ್ ಹೊಯಿಕಂಡೊ. ಯಪ್ಪಾ... ಕಂಯಿ ಕರ್ಪಟೆ!! ಕರ್‌ಂಚಿದ ವಾಸನೆ ಬೇರೆ!! ಇದರ ಹೆಂಗಪ್ಪಾ ಕುಡ್ತವೇಂತ ಕಾಸವಂಗೆ, ಕುಡಿಯವಂಗೆ, ಕಾಸುದರ ಕಂಡ್ ಹುಡ್ಕಿದವಂಗೂ ಶಾಪ ಹಾಕ್ಯಂಡ್ ಫ್ಲಾಸ್ಕ್‌ನ ಲಾಯಿಕ್ ತೊಳ್ದಿಸಿದೊ.

(ನಾಳ್ದ್ ಪುನಃ ಲ್ಯಾಬ್‌ಲಿ ಇಸೊಕು... ಇಲ್ಲರೆ "ಕಾಣೆಯಾಗಿದೆ" ಸುದ್ದಿ ಬಾದು). ಕಾದ್ ಕಾದ್ ಹೊತ್ತಿ ಹೋದ ಇಸ್ತ್ರಿ ಪೆಟ್ಟಿಗೆ ನಮ್ಮ ನೋಡಿ.ಒರ್‌ಂಗುಸಿ ನೆಗಾಡ್‌ತಿತ್ತ್!!!

* * * * *

ಬೆಂಗ್ಳೂರೆಂಬ 'ಮಿಣ್ಬುಳಿ'!!!

"ಅಣ್ಣೂ... ಗಂಟೆ ಏಳಾತ್... ಎದ್ರ್... ಕಾಲೇಜ್‌ಗೆ ಹೊತ್ತಾದೆ... ಕುಂಞು ಮಾವನ ದೊಡ್ಡ ಮಂಜ ಕುಟ್ಟನ ನೋಡು.. ಇಂಜಿನಿಯರಿಂಗ್ ಮುಗ್ಸಿ ಬೆಂಗ್ಳೂರ್ಲಿ ಒಳದ್ ಗೊತ್ಲೇನಾ ನಿಂಗೆ? ತಿಂಗಳಿಗೆ ಲಕ್ಷ ಲಕ್ಷ ದುಡ್ಡದೆ...

ನೀನೂ ಹಂಗೆ ಆದು ಬೇಡನಾ?" ಬೊಡ್ರೊಟ್ಟಿ ಹೊಯ್ತಾ ಬೇಬಿಯಕ್ಕ ಮಂಜನ ಮೇಲೆ ಪರ್ರ್‌ಂಚಿಕೆ ಸುರು ಮಾಡ್ದೊ. ಅಮ್ಮನ ಮಾತ್ ಕೇಳ್ದ ಅಣ್ಣು 'ನಾನೂ ಒಂದಿನ ಹಂಗೇ ಆವೇಂತಾ' ಗೊಣ್ಗ್ಯಂಡ್ ಹಲ್ಲುಜ್ಜಿಕೆ ನೀರಡಿಗೆ ಓಡ್ತ್. ನಮ್ಮ ಕೆ.ವಿ.ಜಿ. ಗೌಡ್ರ್ ಒಂದ್ ಇಂಜಿನಿಯರಿಂಗ್ ಕಾಲೇಜ್ ಕಟ್ಟ್‌ಸಿದರ್ರ್‌ಂದ ಇಂದ್ ನಮ್ಮ ಸುಳ್ಯದ ಮೂಲೆ ಮೂಲೆನ ಹೈದ/ಗೂಡೆಗ B.E. ಮಾಡ್ತೊಳೊ. ಇಲ್ಲರೆ ಡಿಗ್ರಿನೋ ಬೇರೆನೋ ಮಾಡಿ ಕೆಲ್ಸ ಹುಡ್ಕ್ಯಂಡ್ ಹೊರ್ಡ್‌ಕಾಗಿತ್ತೇನೋ!!! ಹಂಗೇ ನಮ್ಮ ಅಣ್ಣುನೂ.. B.E. ಕಲಿತಾ ಲಾಷ್ಟ್ ಸೆಮ್‌ಲಿ Project Work ಮಾಡಿಕೆ ಬೆಂಗ್ಳೂರ್ಗೆ ಬಂದ್ ಎತ್ತಿದ ಹೈದನ ಖುಷಿಗೆ ಲೆಕ್ಕನೇ ಇಲ್ಲೆ. ಸುಳ್ಯಲಿ ಇಂಜಿನಿಯರಿಂಗ್ ಕಾಲೇಜೇ ಎತ್ತರದ ಕಟ್ಟಡ ನೋಡಿದ್ದ ಅವಂಗೆ ಬೆಂಗ್ಳೂರ್ಲಿ

ಬಿಲ್ಡಿಂಗ್‌ಗಳ ನೋಡಿ ಒಮ್ಮೆ ತಲೆ ತಿರ್ಗಿರೆ, KFC ಚಿಕನ್, McD ಬರ್ಗರ್ ನಾಲಿಗೆಗೆ ಹೊಸ ರುಚಿನೇ ತೋರ್ಸಿತ್. ಅಲ್ಲಿ ಎಂ.ಜಿ. ರೋಡ್/ ಬ್ರಿಗೇಡ್ ರೋಡ್‌ಲಿ ತೊಳ್ದ ಮೊಟ್ಟೆನಾಂಗಿರುವ ಗೂಡೆಗಳ ನೋಡಿ 'ನಾ ಜಾಬ್ ಮಾಡ್ರೆ ಬೆಂಗ್ಳೂರ್‌ಲೇ' ಹೇಳಿಕಂಡ್ ಊರ್ ಕಡೆ ಹೊರ್ಟತ್ ನಮ್ಮ ಹೈದ!!

ಇಂಜಿನಿಯರಿಂಗ್ ಮುಗ್ದಾಂಗೆ ಒಳ್ಳ ಕಂಪೆನಿಲಿ ಕೆಲ್ಸನೂ ಸಿಕ್ಕಿತ್ ನಮ್ಮ ಅಣ್ಣು ಹೈದಂಗೆ. ಬೇಬಿಯಕ್ಕಂಗಂತೂ ಖುಷಿಲಿ ಕಾಲ್ ನೆಲಲೇ ನಿಲ್ತಿಲ್ಲೆ. ಎಲ್ಲವ್ಕೂ ಫೋನ್ ಮಾಡಿ ಒಂದ್ ರೌಂಡ್ ಹೇಳಿನೂ ಆತ್ 'ನಮ್ಮ ಅಣ್ಣು ಬೆಂಗ್ಳೂರ್ಗೆ ಹೊರ್ಟುತೂಂತ!!'. ಸಿಟಿಗೆ ಬಂದ ಅಣ್ಣು ನಾಕ್ ಹೈದಂಗಳೊಟ್ಟಿಗೆ ಸೇರಿ ಒಂದ್ ರೂಮ್‌ನೂ ಮಾಡ್ತ್. ಊಟ, ತಿಂಡಿ ಹೋಟ್ಲ್/ ಇಲ್ಲರೆ ಕಂಪನಿ ಫುಡ್ಕೋರ್ಟ್!! ಬೊಳ್ಪಿಗೆ ಬರ್ಗರ್, ಮಧ್ಯಾಹ್ನ ಪಾಸ್ತಾ, ಕತ್ತಲೆಗೆ "ಅಂಬೂರ್ ಧಮ್ ಬಿರಿಯಾನಿ"!! ವೀಕೆಂಡ್ ಪಾರ್ಟಿ ಮತ್ತೆ ಸುತ್ತಿಕೆ ಮಂತ್ರಿಮಾಲ್/ ಸೆಂಟ್ರಲ್ ಮಾಲ್!! ಕಲರ್ ಕಲರ್ ಪಬ್‌ಗಳ ಮುಂದೆ ಊರ್ಲಿ ಆತಿದ್ದ "ಹೊನಲು ಬೆಳಕಿನ ಕಬಡ್ಡಿ" ಯಾವಲೆಕ್ಕ. ಇದ್ ಸ್ವರ್ಗ!!! ನಂಗೆ ಇಲ್ಲಿ ಜಾಬ್ ಸಿಕ್ಕಿಕೆ ಪುಣ್ಯ ಮಾಡಿರೊಕೂಂತ ನೆನ್ಸಿಕಂಬತಿದ್ದ ಅಣ್ಣುಗೆ ಊರ್‌ನ ನೆನ್ಪೇ ಇಲ್ಲೆ!!

ಬೆಂಗ್ಳೂರ್‌ಗೆ ಬಂದ್ ತಿಂಗ ಮೂರ್ ಕಳ್ದಾಂಗೆ ಈ ಮಾಯಾನಗರಿನ ನಿಜ ಅನುಭವ ಆಕೆ ಸುರಾತ್ ನೋಡಿ. ಸಂಬಳ ಎಷ್ಟೇ ಬಂದರೂ ತಿಂಗಳ ಕೈಲಿ ಒಳಿದು ಕೆಲವೇ ಸಾವಿರ (ಅದೂ ಗ್ಯಾರಂಟಿ ಇಲ್ಲೆ!!). ಕೇವಲ ನಾವು ಉಸ್ರಾಡುವ ಗಾಳಿ ಮಾತ್ರ ಫ್ರೀ. ಆದರೆ ಅದೂ ಹೊಗೆ, ಧೂಳು ತುಂಬಿ ಹಿಂಬತಾಕನ ಮೂಂಕುಲಿ ಕಪ್ಪು ಕಪ್ಪು ಹೊಡಿ! ಮನೆಲಿ ಕೋಳಿಗೈಪು ಮಾಡ್ದಾಕನ ಮಂಜಂಗೇಂತ ಕರಿಯಡ/ ಪಟ್ಟಕಾಯಿ ತೆಗ್ದಿಸ್ತಿದ್ದೊ ಅಮ್ಮ, ಇಲ್ಲಿ ಉಂಡರೂ ಉಣದಿದ್ದರೂ ಕೇಳಂವ ಇಲ್ಲೆ. ರೂಮ್‌ಮೇಟ್ ಬಾದೇ 12 ಘಂಟೆ ಮೇಲೆ!! ಎಲ್ಲಿ ಹೋದರೂ ಬೆಂಳ್ತೆಕ್ಕಿನೇ ಹೊರ್ತು ಕೊಸ್ಲಕ್ಕಿ ಅನ್ನ/ ಕುಡುಪೊಜ್ಜಿ/ ಒಣ್ಗಿಲ್ ಮೀನ್‌ನ ಪೊರ್ಮಳನೇ ಇಲ್ಲೆ!! ಒಮ್ಮೆ ಊರ್ಗೆ ಹೋಗಿ ಬಾಕೆ ಆಗುವ ಖರ್ಚ್ ಊರುಲಿ ಕಾಲೇಜ್‌ಗೆ ಹೋಕಾಕನ ಇಡೀ ತಿಂಗಳಿಗೇ ಸಾಕಾತಿತ್ತ್. ಫೋನ್ಲಿ ಹಳೆ ದೋಸ್ತಿಗಳೊಟ್ಟಿಗೆ ಮಾತಾಡಿ ಮಾತಾಡಿ ಫೋನ್ ಬಿಸಿ ಆತಷ್ಟೇ ಹೊರ್ತ್ ಮನ್ಸ್ ತಂಪಾತ್ಲೆ (ಕಾರಣ ಎಲ್ಲರ ಕತೆನೂ ಅದೇ!!!) ಎಲ್ಯಾರ್

ಹೊರಗೆ ಹೋಗಿ ಬರೊನಾಂತ ರೂಮ್‌ಮೇಟ್‌ನೊಟ್ಟಿಗೆ ಕೇಳ್ರೆ "ಟ್ರಾಫಿಕ್‌ಲೇ ಅರ್ಧದಿನ ಕಳೆದು ಬೇಡ" ಅಂತ ಉತ್ತರ. ಮನೆಲಿರ್ಕಾಕನ ಶಾಲೆ ಮಾವನ ಮನೆ, ಬಂಗಾರ್ಕೊಡಿ ದೊಡ್ಡತ್ತೆ ಮನೆ, ಊರು ಬೈಲ್ ಉಗ್ಗಪ್ಪನಮನೆ ಎಲ್ಲಾ ಸುತ್ತಿಕಂಡ್ ಬಾಕೆ ಆತಿತ್. ಇಲ್ಲಿ? ಊರ್‌ಗೆ ಬಂದಿರ್ಕಾಕನ 'ಬೆಂಗ್ಳೂರ್ಗೆ ಬಾಕನ ಮನೆಗೆ ಬಂದೇ ಬರೊಕು' ಹೇಳ್ದವೆಲ್ಲಾ ಫೋನ್ ಮಾಡ್ರೆ 'ನಾವು ಈವಾರ ಇಲ್ಲೆಯಾ.. ಒಂದ್ ಫಂಕ್ಷನ್ಗೆ ಹೋಕುಟ್ಟು' ಹೇಳ್ತೊಳೊ!!!

ಈ ಬೆಂಗ್ಳೂರೇ ಹೀಂಗೆ... "ಮಿಣ್ಪುಳಿ"ನಾಂಗೆ... ನೋಡಿಕೆ ಭಾರೀ ಲಾಯಿಕ್.. ಮಿಣ್ಪುಳಿ ಅಮಾಸೆ ಕತ್ತಲೆಲಿ ಮಿಣ್ಕಿ ಚೂರ್ ಬೆಳ್ಕ ತೋರ್ಸಿರ್ದೆ ಬುಟ್ಟ್ ಚಂದ್ರನಾಂಗೆ ಪೂರ್ತಿ ಬೆಳ್ಕಲ್ಲ!! ಹಂಗೇ ಬೆಂಗ್ಳೂರ್.. ಉಂಬಕೆ ಗಂಜಿ ಕೊಟ್ಟ್, ಬೊದ್ಕಿಕೆ ದಾರಿ ತೋರ್ಸಿದೇ ಹೊರ್ತ್ "ಕೊಡ್ದು ಬೊದ್ಕಲ್ಲ!!" ಆದರೂ ಊರ್‌ಲಿ B.E. ಮುಗ್ಸಿ ಬೆಂಗ್ಳೂರ್ಲಿ ಇನ್ನೂ ಕೆಲ್ಸಕ್ಕೆ ಪರ್ದಾಡಿಕಂಡ್ ಇರವ್ಕಿಂತ ನನ್ನ ಕಥೆ ಎಷ್ಟೋ ಮೇಲ್.

'ಕುರ್ಡ್‌ಗಿಂತ ಕೋಸ್ ಮೇಲೂಂತ' ನೆನ್ಸಿಕಂಡ್, ಮಾರ್ನೆ ದಿನದ ಡ್ಯೂಟಿಗೆ ಹೊರ್ಡುವ ಚಿಂತೆಲೇ ಮಲ್ಗಿಗೆ ಹೊರ್ಟತ್ ಅಣ್ಣು!!

* * * *

ಮರೆಯಕ್ಕೇ ಆಗದ ಏಪ್ರಿಲ್ ಒಂದ್!!!

"ಓಯ್... ಹಿಂದೆ ನೋಡು... ಯಾರೋ ನಿನ್ನ ಕರ್ದವೆ".. ತಿರ್ಗಿರೆ ಯಾರು ಇಲ್ಲೆ!!.. "ಎಪ್ರಿಲ್ ಫೂಲ್... ಎಪ್ರಿಲ್ ಫೂಲ್"... ನೋಡ್ರೆ ದೋಸ್ತಿ 'ಕೆಬಿಲಿ ಗಾಳಿ ಹುಗ್ಗಿದ ಕರ್ ನಾಂಗೆ' ಹಾರಿ ಕೊಣ್ಕಂಡ್ ನೆಗಾಡ್ತುಟ್ಟು.. ನಾವು ಚಪ್ಪೆಮೋರೆ ಹಾಕಿ ಒರುಂಗಿಸಿ ಮುಂದೆ ಹೋದವೆ. ಈ ಮಂಗಾಟ ನಾವೆಲ್ಲ ಪ್ರೈಮರಿ ಶಾಲೆಲಿ ಇರ್ಕಾಕನ ಅನ್ಭವ್ಸಿದವೆ. ಹಂಗೇ ಇಂದ್ ಎಪ್ರಿಲ್ ಒಂದ್.. ಮತ್ತೆ ಅದೇ "ಫೂಲ್ಸ್ ಡೇ"... ಮೂರ್ಖರ ದಿನ.. ಅದೆಷ್ಟೇ ಎಪ್ರಿಲ್ ಒಂದ್ ಬಂದ್ ಹೋದರೂ ನಾ ನನ್ನ ದೋಸ್ತಿ "ಎಂಪಿ"ನ ಫೂಲ್ ಮಾಡ್ದ್ ಮಾತ್ರ ಮರ್ತೇ ಹೋದ್ಲೆ. ಅಂವ ಬರೇ ಪಾಪದ ಹೈದ. ನಾ ಎಷ್ಟ್ ಉಪದ್ರ ಕೊಟ್ಟರೂ ಬುಟ್ಟ್ ಹೋಕಿಲೆ.. ನಳ್ನಾಂಗೆ!! (ದೋಸ್ತಿ ಹೇಳ್ದು ಅದ್ಕೇ ಅಲ್ಲ). ಆ "ಎಂಪಿ" ಬೇರೆ ಯಾರೂ ಅಲ್ಲ. ನನ್ನ "ಹುಡ್ಗಾಟದ ಹುಡ್ಕಾಟ"ಲಿ ನನ್ನೊಟ್ಟಿಗೆ "ಇಸ್ತ್ರಿಪೆಟ್ಟಿಗೆ ಮೇಲೆ, ದುಂಡು ತಳದ ಫ್ಲಾಸ್ಕ್‌ಲಿ ಗ್ಯಾರ್ದಣ್ಣ್ ದರ ಕಾಸಿಕೆ ಕೈ ಜೋಡ್ಸಿದ್ದ ಅದೇ ಕೊರುಂಬ!!!"

ಮಾರ್ಚ್ 31ಕ್ಕೇ ಎಂಪಿ ಮಲ್ಗಿದ ಮೇಲೆ ಮೆಲ್ಲ ಅಂವನ ಮೊಬೈಲ್ ತೆಗ್ದ್, ಅದರ್ಲಿ ನನ್ನ್ ಹೆಸ್ರ್‌ನ

"Aritel Customer Care" ಅಂತ ಬದ್ಲಾಯ್ಸಿ, ಸದ್ದಿಲ್ಲದ ಕೊತ್ತಿನಾಂಗೆ ಹೋಗಿ ಮಲ್ಗಿದೆ. (ಹಳೇ ನೋಕಿಯಾ ಮೊಬೈಲ್.. ಪಾಸ್ ವರ್ಡ್ಗಾಕಿ ಇಸಿಕೆ ಅದೇಂತಲೂ ಗೊತ್ಲೆ... ಕೆಪ್ಪಂಗೆ). ಮಾರ್ನೆ ದಿನ ಬೊಳ್ಪಿಗೆ ಘಂಟೆ 11 ಕಳ್ದರೂ ಇಂವ ರೂಮುಂದ ಹೊರಗೆ ಬಾದೇ ಕಾಂಬೊದ್ಲೆ. ಹೋಗಿ ನೋಡ್ರೆ 'ಜಾತ್ರೆಲಿ ಐಸ್ಕ್ರೀಂ ಕೊಡ್ಸದ ಮಕ್ಕ ಕುಸು ಕುಸು ಮರ್ಡುವಾಂಗೆ' ತಲೆದಿಂಬೊಳಗೆ ಮೋರೆ ಇಸಿ ಕುಸುಕುಸು ಮಾಡ್ತುಟ್ಟು. ಎದ್ರಿಸಿ ಕೇಳ್ದೆ...

"ಯಾವ ಗೂಡೆನ ಹುಲಿ ಹೊತ್ತತೂಂತ ಹಿಂಗೆ ನರ್ಕಿಯ? ಅಲ್ಲಾ.. ಮೊನ್ನೆ ಹಾಯ್ ಹೇಳ್ದಗೂಡೆ ಇಂದ್ ಅಣ್ಣಾಂತ ಮೆಸೇಜ್ ಮಾಡಿಟಾ ಹೇಂಗೆ!!". ಅಂವ ತಲೆದಿಂಬುಂದ ತಲೆ ಎತ್ತದೆ ಕೈಲಿದ್ದ ಮೊಬೈಲ್ ನನ್ನ ಮುಸುಂಡ್ಗೆ ಹಿಡ್ತ್. ನೋಡ್ರೆ "ಪ್ರಿಯರೇ.. ನಮಸ್ಕಾರ.. ನೀವು ಈ ಹಿಂದಿನ ದಿನಗಳಲ್ಲಿ ನಮ್ಮ ಇತರೆ ಚಂದಾದಾರರಿಗೆ ಅನುಚಿತ ಕರೆ, ಅಶ್ಲೀಲ ಸಂದೇಶಗಳನ್ನು ಕಳುಹಿಸಿದ್ದು, ನಿಮ್ಮ ಕುರಿತಾಗಿ ದೂರು ದಾಖಲಾಗಿದೆ. ಹಾಗಾಗಿ ನಿಮ್ಮ ಸಂಪರ್ಕವನ್ನು ಕಡಿತಗೊಳಿಸಲು ಪ್ರಥಮವಾಗಿ ಪೊಲೀಸ್ ವಿಚಾರಣೆಗೆ ಒಳಪಡುವುದು ಅತೀ ಅವಶ್ಯ. ಸದ್ಯದಲ್ಲೇ ನಮ್ಮ ಅಧಿಕಾರಿಗಳು ಪೋಲೀಸರೊಂದಿಗೆ ಆಗಮಿಸಿ ನಿಮ್ಮ ಮೊಬೈಲನ್ನು ವಶಪಡಿಸಿ ವಿಚಾರಣೆ ನಡೆಸುವರು. ದಯವಿಟ್ಟು ಸಹಕರಿಸಿ. ಧನ್ಯವಾದಗಳು". Sent From : Aritel Customer Care.. ಇಂವ ಎದ್ದ್‌ಕುದ್ದ್ "ನಾ ಯಾರಿಗೆ ಏನ್ ಅನ್ಯಾಯ ಮಾಡ್ಯಳೆ? ಯಾವ ಗೂಡೆಗಳ ನಂಬರ್ರೂ ನನ್ನಕ್ಕಲೆ ಇಲ್ಲೆ. ಬಂದ ಮೆಸೇಜ್‌ಗಳ ಸರಿ ಓದಿಕೂ ಗೊತ್ಲೆ. ಇನ್ನ್ ನಾ ಯಾರಿಗೇಂತ ಕಳ್ಸಿನೆ. ನನ್ನ ಬಗ್ಗೆ ನಿಂಗೆ ಗೊತ್ಲೆನಾ?.. ಇನ್ನ ಪೋಲೀಸ್ ಬಂದೋಂತ ಗೊತ್ತಾದರೆ ಅಪ್ಪ ನನ್ನ ಬೆರ್ಸಿ ಬೆರ್ಸಿ ಬೊಡ್ಯವೋ..." ಹೇಳಿಕಂಡ್ ಕಣ್ಣ್‌ಲಿ ಮೂಂಕುಲಿ ನೀರ್ ಅರ್ಸಿಕೆ ಸುರು ಮಾಡ್ತ್. "ಸರಿ ಬುಡ್... ಎಲ್ಯೋ ತಪ್ಪಿ ಬಂದಿರೊಕು. ಸತ್ಯಕ್ಕೂ ಕಂಪ್ಲೇಂಟ್ ಬಂದಿದ್ದರೆ ಅವು ಒಮ್ಮೆ ಕಾಲ್ ಮಾಡಕಾಯ್ತಲ್ಲ! ಅಷ್ಟಕ್ಕೂ ಅವು ಸುರೂಗೆ ಬರ್ಲಿ. ನಮ್ಮ ಬಂಗಾರ್ಕೊಡಿ ಬಾವ ಹೆಂಗೂ ರಾಜಕೀಯಲಿರವು. ಪೋಲೀಸ್‌ಗಳ ಲಾಯಿಕ್ ಗುರ್ತ ಇರವು. ಅವರೊಟ್ಟಿಗೆ ಹೇಳೊನೊ. ನೀ ಎದ್ದ್.. ಹೋಗಿ ಹಲ್ಲುಜ್ಜೂಂತ" ಹೇಳಿ ಬಾತ್ರೂಮ್‌ಗೆ ಎತ್ತಿಕಂಡೇಹೋಗಿ ಬುಟ್ಟೆ (ಬುಟ್ಟದಲ್ಲ ಹಂಞ ನೋಡ್ರೆ ಬಿಸಾಡ್ದಾಂಗೇ!!)

ಮಧ್ಯಾಹ್ನ ಕಳ್ದ್ ಹಿಂಬತಾದರೂ ಇಂವ ಸುಧಾರ್ಸುವ ಯಾವ ಲಕ್ಷಣನೂ

ಇಲ್ಲೆ.

"ಕಪ್ಪೆ ಆದ ಕೋಳಿನಾಂಗೆ" ತೂಂಗ್ಯಂಡೇ ಉಟ್ಟು.

'ಇಂದ್ ಹೆಂಗೂ ರಜೆ... ಬಾ ಹೋಗಿ ಚಾಯ ಕುಡ್ಕಂಡ್ ಬರೋನೊ'ತ ಅರ್ಧ ಚಡ್ಡಿಲಿದ್ದವಂಗೆ ಫುಲ್ ಪ್ಯಾಂಟ್ಹಾಕ್ಸಿ ಎಳ್ಕಂಡೇ ಹೊರ್ಟೆ. ಒಟ್ಟಿಗೆ ಇನ್ನೊಬ್ಬ ದೋಸ್ತಿನೂ ಹಚ್ ನಾಯಿನಾಂಗೆ ಒಟ್ಟೀಗೇ ಬಾತ್. ಕುರೆ ಸತ್ತ ಕೊರುಂಬನಾಂಗಿದ್ದ ಎಂಪಿನ ಮೋರೆ ನೋಡಿ ಏನಾತ್‌ತ ಕೇಳಿ, ವಿಷಯ ತಿಳ್ದ್, ಮೊಬೈಲ್‌ಲಿ ಇದ್ದ ಮೇಸೇಜ್ ಓದಿನೂ ನೋಡ್ತ್. ಅವಂದ್ ಚೂರ್ ಕಂಪ್ಯೂಟರ್ ತಲೆ! ಮೆಸೇಜ್ ಬಂದ ನಂಬರ್‌ನ ನೋಡಿ.. 'ಈ ನಂಬರ್ ಎಲ್ಲೋ ನೋಡ್ದಂಗೆ ಉಟ್ಟಲ್ಲಾ, ತಡಿ... ನನ್ನ ಮೊಬೈಲ್ಲಿ ಸರ್ಚ್ ಮಾಡೊನೊ'ತ ತೋಟೆ ಹಾಕಿತ್. ಅವಂದರ್ಲಿ ಹುಡ್ಕಿ ನೋಡ್ರೆ ಕಥೆ ಎಂತ.. ಮೆಸೇಜ್ ಬಂದದ್ ನನ್ನ ನಂಬರ್‌ಂದ!!! ವಿಷಯ ಗೊತ್ತಾತಲ್ಲ!! ನಮ್ಮ ಎಂಪಿದ್ ಬೊಬ್ಬೇ ಬೊಬ್ಬೆ.

'ನೀ ನನ್ನ ಹಿಂಗೂ ಬಕ್ರಾ ಮಾಡ್ದ??!! ನಿನ್ನ ಕಾಲ್ ಹಿಡ್ದ್ ನೆಲಕ್ಕೆ ಬೊಡ್ದನೆ. ಸೊಂಟಕೆ ಕಲ್ಲ್‌ಕಟ್ಟಿ ಹಳ್ಳಕ್ಕೆ ಹಾಕಿನೆ...' (ಹೈದಂಗಳ ಕೆಲವು ಬೊಯ್ಗಳ್‌ಗಳ ಹೇಳಿಕೆ ಆದುಲೆ... ಎಡ್ಜಷ್ಟ್ ಮಾಡಿಕಣಿ!!) ಅಂತೂ ಮಾಡ್ದ ಕಿತಾಪತಿಗೆ ನನ್ನ ಕೈಯಿಂದಲೇ ಚಾಯದೊಟ್ಟಿಗೆ ಗೋಬಿಮಂಚೂರಿನೂ ತಿನ್ಸಿ ಸಮಾಧಾನ ಮಾಡಿ ಹಾಸ್ಟೆಲ್‌ಗೆ ಕರ್ಕಂಡ್ ಬಂದೆ. ಅಂದ್‌ನ ಕಾಲಕ್ಕೆ ಅದ್ "ಕುರೆಕೆಲ್ಸಾಂತ" ಅನ್ಸಿರೂ ಇಂದ್ ನೆಗಾಡಿಕೆ ಲಾಯಿಕಾದೆ. ಅದ್ಕೇ ಅಲ್ಲ ಹೇಳ್ದು... ನಾವು ಯೌವ್ವಂನಲಿ ಸುಮಾರ್ ತರ್ಲೆ ಕಿತಾಪತಿಗ ಮಾಡೊಕು.. ಇಲ್ಲರೆ ಪ್ರಾಯ ಆದ ಮೇಲೆ ನೆಗಾಡಿಕೆ ಎಂತದೂ ಇರ್ದುಲೆ!!

* * * *

ಪಾಚುನ ಕಟ್ಟ !!!

"ಕಟ್ಟ" ಹೇಳ್ರೆ ಅರೆಭಾಷೆಲಿ "ಒಟ್ಟಿಗೆ ಸೇರ್ಸಿ ಇಸುದು" ಅಂತ ಅರ್ಥ. ಕನ್ನಡಲಿ ಹೇಳ್ದಾದರೆ "ಕಟ್ಟು". ಅಂದರೆ ಸೌದೆಹೊರೆ, ಹುಲ್ಲು ಹೊರೆ ಇದ್ಕೆ ಸೌದೆ ಕಟ್ಟ, ಹುಲ್ಲುಕಟ್ಟ ಅಂತ ಹೇಳುವೆ. ಇನ್ನೊಂದು ನೀರ್ ಹರ್ದ್ ಹೋದರ ತಡೆಯಕೆ ಹಾಕುದು, ಅದೇ ನೀರ್ಕಟ್ಟ (ಶುದ್ಧ ಕನ್ನಡಲಿ ಒಡ್ಡು/ ಕಿಂಡಿ ಅಣೆಕಟ್ಟು). ಇನ್ನ್ ಕೋಳಿಕಟ್ಟ ನೀವ್‌ಗೆಲ್ಲಾ ಗೊತ್ತೇ ಉಟ್ಟು!!! ನಾ ಈಗ ಹೇಳಿಕೆ ಹೊರ್ಟದ್ "ಪಾಚುನ ನೀರ್ ಕಟ್ಟ". ಊರೊಳಗೆ ಪ್ರಗತಿ ಪರಕೃಷಿಕ ಹೆಸ್ರ್ ಮಾಡ್ದ ನಮ್ಮ ಪಾಚು, ಕೃಷಿಲಿ ಬಗೆ ಬಗೆ ಪ್ರಯೋಗ ಮಾಡ್ತಿತ್ತ್. ಹಡ್ಲ್ ಬಿದ್ದಗದ್ದೆಗಳೆಲ್ಲಾ ಟಿಲ್ಲರ್ ಹೊಡ್ದ್ ವರ್ಷಲಿ ಮೂರು ಬೆಳೆ ತೆಗೆವ ಆಸೆ. ಆದರೆ ಸುಗ್ಗಿ ಬೆಳೆಗೇ ನೀರ್ ಅಲ್ಲಿಂದಲ್ಲಿಗೆ, ಇನ್ನ್ ಏಣೆಲ್‌ಗೆಲ್ಲಿಂದ್?? ಕಾರಣ ಆಧುನೀಕತೆ!! ಅದೇಂಗೆ?? ಹಿಂದೆಲ್ಲಾ ಚೊಂಟೆಲಿ ನೀರ್ ಗೋಂಚ್‌ತಿದ್ದೊ. ಈಗ ಕರೆಂಟ್ ಪಂಪ್ ಬಂದ್ ನೀರ್ ಆರ್ಕಾಕನಮುಟ್ಟ ಪಂಪ್ ನಿಲ್ಸುವ ಗೊಡವೆನೇ ಇಲ್ಲೆ (ಮೆಸ್ಕಾಂನವು ಸಿಂಗಲ್ ಫೇಸ್ ಕೊಟ್ಟರೆ ಮಾತ್ರ ಪಂಪ್ ಆಫ್ ಆದು!!!). ಹಂಗಾಗಿ ಹಳ್ಳಗಳ್ಲಿ ಡಿಸೆಂಬರ್ ತಿಂಗಳ್ಲೇ ಪಾರೆ ಕಲ್ಲ್‌ಗ ಎದ್ದ್ ಕುದ್ದಿದ್ದವೆ. ಮಾರ್ಚ್ ತಿಂಗಳ್ಲಿ 3 ದಿನ ಮಳೆ ಬಂದರೆ ಸಾಕ್. ಹಳ್ಳಲಿ

ನೀರ್ ತುಂಬಿ ಹರ್ದದೆ. ಮಳೆ ನೀರಲ್ಲ!? ಯಾರೂ ಪಂಪ್ ಸ್ಟಾರ್ಟ್ ಮಾಡುದ್ಲೆ. ಅದರ್‍ರಿಂದಾಗಿ!! ಆಗ ನಮ್ಮ ಪಾಚುಗೆ ಹೊಳ್ದ ಐಡಿಯಾನೆ ಗದ್ದೆ ಕರೆಲಿದ್ದ ಚೋಡಿಗೆ "ಕಟ್ಟ ಕಟ್ಟುದು".

ನೆರೆಕರೆಯವರೊಟ್ಟಿಗೆ ಎಲ್ಲಾ ಕೇಳಿ ಕಟ್ಟ ಹಾಕುವ ದಿನ ನಿಘಂಟ್ ಮಾಡ್ಯಾತ್. ಆಕಿಲೇಂತ ಹೇಳ್ದವು ಯಾರೂ ಇಲ್ಲೆ. ಎಲ್ಲವ್ಕೂ ನೀರ್ ಸಿಕ್ಕಿದಲ್ಲೇಂತ ಕುಸಿನೊಟ್ಟಿಗೆ ಕೆಳಗೆಡೆನ ತೋಟಕ್ಕೆ ನೀರ್ ಚೋಂಪ್‌ವ ಕೆಲ್ಸ ಒಳ್ದದೆ ಎಂಬ ಸಮಾಧಾನ. ಸಿಡ್ಲ್ ಹೊಡ್ದ್ ಸತ್ತ, ಮುಂಡ್ತಿರಿ ಆಗಿ ಕುಬೆ ಚೊಯ್ಯ್‌ಂಗಲೆ ಆದ ಕೊಮ್ಮ್‌ಗಳೆಲ್ಲಾ ಸಿಗ್ದ್ ಗಟ್ಟಿ ಮುಟ್ಟ್‌ನ ತಟ್ಟೆಮಾಡಿಕಂಡೊ. ಕೆಲ್ಸಕ್ಕೆ ಬಂದವ್ಕೆಲ್ಲ ಕೋಳಿ ಗೈಪುನ ಗಮ್ಮತೂ ಆತ್. ಒಟ್ಟಿಗೆ ಹನೀಸ್ಟನೀಸ್ ಗ್ಯಾರ್ದಣ್ಣ್‌ದೂ!! ಅಂತೂ ಭರ್ಜರಿ ಕಟ್ಟ ಕಟ್ಟಿ ಗದ್ದೆ, ತೋಟಗಳಿಗೆ ನೀರ್ ಬುಟ್ಟೊ. ಅದರೊಟ್ಟಿಗೆ ನಮ್ಮ ಪಾಚುನ ದೆಸೆನೇ ಬದ್ಲಾತ್.. ಕೃಷಿ ಜಾಸ್ತಿ ಆಗೀಂತ ನೆನ್ಸಿದರಿಯಾ.. ಖಂಡಿತಾ ಅಲ್ಲ... ನಮ್ಮ ಪಾಚು ಹಾಕಿದ "ಫೇಸ್‌ಬುಕ್ ಫೋಟೋ"ನೇ ಕಾರಣ!!??

ಫೇಸ್‌ಬುಕ್‌ಲಿ ಬಂದ ಫೋಟೋ ನೋಡಿ ಪಾಚುನ ಕಟ್ಟಕ್ಕೆ ಸುಮಾರ್ 'ಲೈಕ್'ಗೆ ಒಟ್ಟಿಗೆ ಒಂದಷ್ಟ್ ಶುಭಹಾರೈಕೆಗ ಬಾತ್. ಅದರೊಟ್ಟಿಗೆ ಒಂದ್ ಗೂಡೆನ "ಫ್ರೆಂಡ್ರಿಕ್ವೆಷ್ಟ್" ಕೂಡ!! ಗೂಡೆ ಹಂಚಿಮನೆ ಲಚ್ಚಣ್ಣನ ಎರಡ್ನೇ ಮಗ್ಳ್ ಅಮ್ಮಣಿ. ಆ ಗೂಡೆ ಎಂ.ಎಸ್.ಡಬ್ಲೂ ಓದಿ ಸಮಾಜ ಕಾರ್ಯಲಿ ಇರವ್ಳ್. ಪಾಚುನ ಸಮಾಜಮುಖಿ ಕಾರ್ಯನೋಡಿ ಅಮ್ಮಣಿಗೂ ಅವನ ಬಗ್ಗೆ ಒಳ್ಳೆ ಮನ್ಸ್ ಅಷ್ಟೆ. ಫೇಸ್‌ಬುಕ್ ಪರಿಚಯ ದಿನ ಆದಷ್ಟ್ ಗಟ್ಟಿ ಆಕಂಡ್ ಬಾತ್. ಮನೆಯವ್ಕೂ ಹೇಳಿ ಹೊಸ ನೆಂಟಸ್ತಿಕೆ ಶುರ್ ಮಾಡೋಣೋಂತ ನೆನ್ಸಿದೊ. ಆದರೆ ಭೇಟಿ ಆಕೊಲ್ಲಾ?? ಅಂತೂ ಪಾಚುನ "ಫಸ್ಟ್ ಡೇಟಿಂಗ್" ಫಿಕ್ಸ್ ಆತ್. ಎಲ್ಲರಾಂಗೆ ಚೆನ್ನಕೇಶವ ದೇವಸ್ಥಾನಲೋ, ಆಲ್ ಸೀಸನ್ ಹೋಟೆಲ್ಲೋ ಅಲ್ಲ. ಪರಿಚಯಕ್ಕೆ ಕಾರಣ ಆದ "ನೀರ್ ಕಟ್ಟದ ಕರೆಲಿ"!!! ಸರಿ... ನಮ್ಮ ಪಾಚುನೂ, ಅಮ್ಮಣಿನೂ ಕಟ್ಟದ ಹಕ್ಕಲೆ ಎತ್ತಿದೊ. ಅಲ್ಲಿಗೆತ್ತಿ ನೋಡ್ರೆ ಎಂತ? ಕತ್ತಲೆನ ರಣ ಮಳೆಗೆ ನೀರ್ ತುಂಬಿ, ಕಟ್ಟ ಒಡ್ದ್, ಹಾಕಿದ್ದ ಕೊಮ್ಮ್‌ನ ತಟ್ಟೆ ಎಲ್ಲಾ ಬೊಳ್ಳಲಿ ಹೋಗುಟು!! ಅಲ್ಲಿದ್ದ ಎರ್ಡ್ ಎಸ್‌ಂಡ್‌ಗ ಕೊಂಬಲಿ ಒರ್‌ಂಗಿಸಿ ಮೋಟೆ ಸೇರ್ದೊ. ಪಾಪ ಪಾಚು... ಮನ ಮೆಚ್ಚಿದ ಗೂಡೆಗೆ ತನ್ನ ಕಾರ್ಯನ ತೋರ್ಸಿಕೆ ಹೋಗಿ ಹೊಗ್ಳಿ ಹೊಗ್ಳಿ ಅಗ್ಳ್ ಹರ್‌ಂಡಿದಾಂಗಾತ್!! ಆದರೂ ಪರ್ವಾಗಿಲ್ಲೆ.. ಹೈದ, ಗೂಡೆಗ ಹೊಸ ಜೀವನ ಕಟ್ಟುವ ಬಗ್ಗೆ ಮಾತಾಡಿಕಣ್ತಾ ದೊಡ್ಡವ್ಕೆ ತಿಳ್ಸಿಕೆ ಹೊರ್ಟೊ.

* * * *

ದ್ಯಾವಂಮಕ್ಕನ ಸೊಸೆ.....

ಓಟೆಕಜೆ ದೊಡ್ಡಮನೆಗೆ ನಮ್ಮ ದ್ಯಾವಂಮಕ್ಕ ಸೊಸೆ ಆಗಿ ಬಾಕನ ಅವ್ಕಿನ್ನೂ ಪ್ರಾಯ 16 ನಡಿತಿತ್ತಷ್ಟೇ. ಕಟ್ಟಪುಣಿ ತ್ಯಾಂಪಣ್ಣನ 6 ಮಕ್ಕಳ್ಲಿ ಸುರುನಂವೇ ದೇವಮ್ಮ.. ಊರವ್ಕೆಲ್ಲಾ "ದ್ಯಾವಂಮ್ಮ"!! ಆಗಲೇ ಪ್ರಾಯ 40ಕ್ಕೆ ಹಕ್ಕಲೆ ಎತ್ತಿದ್ದ ಓಟೆಕಜೆ ಭೋಜಪ್ಪನ ಮೊದ್ವೆ ಆಕೆ ಏನೇನೂ ಮನ್ಸಿಲ್ಲದಿದ್ದರೂ ಅವಳ್ಂದ ಮತ್ತೆ ಹುಟ್ಟಿದ 4 ತಂಗೆಕಳ ಮೋರೆ ನೋಡಿ, ಒಟ್ಟಿಗೆ ತ್ಯಾಂಪಣ್ಣನ ಬಡ್ತನನ ಕಂಡ್ ಗಟ್ಟಿ ಮನ್ಸ್‌ಲಿ ಓಟೆಕಜೆ ಸೇರ್ದೊ. ಮೊದ್ವೆ ಆಗಿ ಎರ್ಡ್ ವರ್ಷಕ್ಕೆ ಹುಟ್ಟಿದವಂನೇ ಮನೋಜ್. ಹುಟ್ಟಿದ 6 ತಿಂಗಳಿಗೇ ಅವಂನದೆಸೆನೋ ಅಲ್ಲಾ ಭೋಜಪ್ಪಣ್ಣನ ಆಯಸ್ಸೇ ಅಷ್ಟಿದ್ದದೋ ಗೊತ್ಲೆ... ದೊಡ್ಡ ಹಳ್ಳಕ್ಕೆ ಮೀನ್‌ಕಡ್ಯಕೆ ಹೋದವ್ ಕಯಲಿ ಕಂತಿ ಸ್ವರ್ಗಸೇರ್ದೊ. ಇದ್ದ ಒಬ್ಬನೇ ಮಂಜನ 'ಬೆಸಗೆಲಿಸಿರೆ ಮೊಸಿ ಓಡಿದು, ನೆಲಲಿ ಬುಟ್ರೆ ಕೇರ್ದ ಸೆಗ್ಣಿ ಅಂಟುದು' ತೇಃಳುವಾಂಗೆ ಅಯ್ಯೆ ಅಪ್ಪ ಎಡ್ರೂ ಆಗಿ ಸಾಂಕಿದೊ ದ್ಯಾವಂಮಕ್ಕ. ಓದುದಲ್ಲೂ ಉಶಾರಿದ್ದ ಮನೋಜ ಇಂಜಿನಿಯರೂ ಆತ್. ಕೆಲ್ಸ?? ನಮ್ಮ ಎಲ್ಲಾ ಹೈದ, ಗೂಡೆಗಳಾಂಗೆ ಬೆಂಗ್ಳೂರ್ಗೆ ಎತ್ತದೆ ಕೃಷಿ, ಮನೆಕಡೆ ನೋಡಿಕಂಡಿತ್. ಅತ್ತೆಗೊಂದು ಕಾಲ ಸೊಸೆಗೊಂದು ಕಾಲದಾಂಗೆ ನಮ್ಮ ದ್ಯಾವಂಮಕ್ಕಂಗೂ

ನಾನೂ ಅತ್ತೆ ಆಗಿ ಮೆರೆಯೊಕೂಂತ ಆಸೆ ಚಿಗುರ್ತುಟ್ಟು. ಸುರಾತ್... ಮಂಜಂಗೆ ಹೆಣ್ಣುಡ್ಕಿಕೆ!!!

ನಾಕ್ ಕಡೆ ವಿಚಾರ್ಸಿ ಹಳೇ ನೆಂಟ್ರ್ ಗಡಿಕಲ್ಲ್ ಶೇಷಪ್ಪರ ಮಗ್ಳೊಂದಿಗೆ ಕುರುಂಜಿಯವ್ರ ಹಾಲ್‌ಲಿ ಭರ್ಜರಿಯಾಗಿ ಮೊದ್ವೆನೂ ಕಳ್ತ್. ತೆಳ್ಳಂಗೆ, ಬೆಳ್ಳಂಗೆ ತೊಳ್ದ ಮೊಟ್ಟೆನಾಂಗಿರುವ ಗೂಡೆ ಓದಿದ್ ಫುಲ್ ಚರ್ಚ್ ಶಾಲೆಲೇ. ಅದೇನೋ ಗೂಡೆ ಮನೆ ಕಡೆ ಇದ್ದವ್ರೂ, ಆರಾಮಲಿ ಇರಕ್ ಅಂತ ನೆನ್ಸಿ ಒಪ್ಪಿತ್ತ್. ಆದರೆ ಅತ್ತೆ ಬುಡೊಕಲ್ಲ?? ಕೆಲ್ಸ ಮಾಡ್ದಷ್ಟೂ ಮುಗ್ಯಕಿಲ್ಲೆ.. ದ್ಯಾವಂಮಕ್ಕಂಗೆ ಅದ್ ಮಾಡ್ದ್ ಸಮಾಧಾನನೂ ಆಕಿಲೆ.. ಆಚೆ ಮನೆ ಸುನಂದಕ್ಕನೊಟ್ಟಿಗೆ ಬಾಯಿ ಬುಟ್ಟ್ ಹೇಳ್ದೊ ಕೂಡ.. "ಅಲ್ಲಯಾ.. ಬಟ್ಟೆ ಒಗ್ದ್ ಹರ್ಗಿ ಹಾಕಿಕೂ ಗೊತ್ಲೆ.. ನೇಕೆಲಿ ಒಣ್‌ಗಿಲ್ ಬೊಳ್ಳಿಕಾರ್ ಮೀನ್ ನೇಲ್ಸಿದಾಂಗಿದ್ದದೆ. ಅದ್ಕೆ ಗೆಣ್ಸ್ ಬೇಸಿಕೂ ಗೊತ್ಲೆ. ಇನ್ನೆಲ್ಲಿಂದ ಹಿಟ್ಟ್ ಮಾಡ್ದು. ಕಲ್ತಪ್ಪ ನಾಯಿ ನಾಲಿಕೆನಾಂಗಾಗಿತ್ತ್. ಗುಡ್ಸಿರೆ ಮೂಲೆಮೂಲೆಲಿ ಕಾಡ್ ಹಂಗೇ ಹಾರಿಕಂಡಿದ್ದದೆ!! ಎಂಥ ಮಾಡ್ದು... ಮೇಲೆ ನೋಡಿ ಉಗ್ದರೆ ನಮ್ಮ ಮೋರೆಗೇ ರೆಟ್ಟುದೂಂತ ಸುಮ್ಮನೆ ಒಳೆ.. ಅಷ್ಟೇ." ಆದರೂ ಸೊಸೆ ದೀಪಿಕಾ ಸಮಾಧಾನದ ಗೂಡೆ. ಅತ್ತೆನ ಪಿರಿಪಿರಿ ಕಂಡರೂ ಕಾಣದಾಂಗೆ ಸುಮ್ಮನೆ ಇರ್ತಿತ್ತ್. ಎಷ್ಟಾದರೂ ಹಿರಿಯವ್... ಇದಲ್ಲನಾ "ಜನರೇಶನ್ ಗ್ಯಾಪ್".

ದಿನ ಕಳ್ದಾಂಗೆ ದೀಪಿಕಾಂಗೆ ಮನೆಲೇ ಇರ್ದು ಭಂಗ ಆಗುತ್ತುಟ್ಟು. ಓದಿದ ಗೂಡೆ. ಸಮಾಜದ ಪರಿಚಯ ಇರುವವ್ಳ್. ಅದ್ಕೇ ನೆರೆಕರೆನ ಹೆಣ್ಣ್ ಮಕ್ಕಳ ಸೇರ್ಸಿಕಂಡ್ "ಬಫೆ" ಮಾಡುವ ಕಾರ್ಯ ಸುರುಮಾಡಿಟು. ಇದರ್ದಾಂಗಿ ನಾಕ್ ಜನರ ಪರ್ಚಯದೊಟ್ಟಿಗೆ ಆ ಬಡ ಹೆಣ್ಣ್ ಮಕ್ಕಳಿಗೆ ಜೀವನಕ್ಕೂ ಸಹಾಯ ಆತ್. ಆದರೆ ದ್ಯಾವಂಮಕ್ಕ? ಅವರ ಚಾಳಿ ಇನ್ನೂ ಬುಟ್ಟೋತ್ಲೆ. ದೀಪಿಕಾನೂ ಮಹಿಳಾ ಮಂಡಲ, ಸ್ತ್ರೀ ಶಕ್ತಿಂತ ಸುಮಾರ್ ಕಡೆ ಸೇರಿಕಂಡ್ ಸರಕಾರಂದ ಸಿಗುವ "ವಿಶೇಷ ವ್ಯಕ್ತಿ" ಪುರಸ್ಕಾರಕ್ಕೆ ಆಯ್ಕೆ ಆತ್. ಆ ದಿನ ಸಮಾರಂಭಕ್ಕೆ ಮನ್ಸಿಲ್ಲದ ಮನ್ಸ್‌ಂದ ಹೊರ್ಟೊ ದ್ಯಾವಂಮಕ್ಕ. ಸೇರ್ದ ಸಭೆಲಿ ದೀಪಿಕಾನ ಅಭಿಪ್ರಾಯ ತಿಳ್ಸಿಕೆ ವೇದಿಕೆಗೆ ಕರ್ದೊ. ಅವ್ಳ್ ಹೇಳ್ದ ಮಾತ್‌ಗಳ ಕೇಳಿ ದ್ಯಾವಂಮಕ್ಕನ ತಲೆಗೆ ಮರಬಿದ್ದಂಗಾತ್.

"ನನ್ನ ಸಾಧನೆಗೆ ಸ್ಫೂರ್ತಿ ನನ್ನತ್ತೆ ದೇವಮ್ಮ. ಸಣ್ಣದರ್ಲಿ ಗಂಡನ ಕಳ್ಕಂಡರೂ ಜೀವನ ಕಳ್ಕಂಡತ್ಲೆ. ಹೆಣ್ಣೊಂದು ಗಂಡಾಗಿ ಮಂಜನ ಬೆಳ್ಸಿದೊ. ಅಷ್ಟ್ ಮಾತ್ರ ಅಲ್ಲ.. ಅಷ್ಟ್ ಕಲ್ತ ಮಂಜನ ಬೆಂಗ್ಳೂರ್, ಹೊರದೇಶಕ್ಕೆ ಬೆರ್ಸದೆ ಒಬ್ಬ ಉತ್ತಮ ಕೃಷಿಕ ಆಗಿ ಮಾಡ್ದೊ. ಈಕೆನೇ ನಿಜವಾದ ತಾಯಿ. ಅದ್ಕೇ ಹೇಳ್ದು 'ಹೆಣ್ಣು ಸಮಾಜದ ಕಣ್ಣು'. ನಾ ಇಂಥವರ ಸೊಸೇತೇಳಿಕೆ ಹೆಮ್ಮೆ ಆದೆ." ಇತ್ತ ದ್ಯಾವಂಮಕ್ಕ ಕೊನೆಗೂ ಗುಡ್ಸಿಟ್ಟ ಕುಂಟು ಮ್ಯಾಪುನೇ ಗತೀಂತ, ನಾಚಿಕೆ ಆದರೂ ತೋರ್ಸಿಕಣದೆ ಸೊಸೆನ ಹೊಗ್ಳಿಕಂಡ್ ಮನೆ ಕಡೆ ಹೊರ್ಟೊ.

* * * *

ಹೀಂಗೊಬ್ಬ ಭಾಷೆ ಇಲ್ಲದಂವ...

ಒಬ್ಬಂಗೆ ಎಷ್ಟ್ ಹೇಳ್ರೂ ಅರ್ಥ ಆಗದಿದ್ದರೆ, ಅರ್ಥ ಮಾಡಿಕಣದಿದ್ದರೆ... ಕೆಪ್ಪನಾಂಗೆ ಮಾಡಿಕಂಡಿದ್ದರೆ ನಾವ್ ಅವಂಗೆ ಹೇಳುವ ಸರ್ವೇಸಾಮಾನ್ಯ ಮಾತ್ "ಅವಂಗೆ ಭಾಷೆ ಇಲ್ಲೆಯಾ!!". ಮೊನ್ಸ ಆಗಿ ಹುಟ್ಟಿದವಂಗೆ ಭಾಷೆತೇಂಳ್ಳು ಅತೀ ಅಗತ್ಯ. ಅದ್ ಒಳ್ದವರೊಟ್ಟಿಗೆ ಮಾತಾಡಿಕೆ ಆಗಿರ್ದು. ಅವನ ಭಾವನೆಗಳ ಅರ್ಥ ಮಾಡಿಕಂಬಕೂ ಆಗಿರ್ದು. ಶುದ್ಧ ಕನ್ನಡಲಿ ಹೇಳ್ದಾದರೆ "ಸಂವಹನ ಮಾಧ್ಯಮ". ಎಲ್ಲವ್ಕೂ ಇನ್ನೊಬ್ಬ ಹೇಳ್ದರ ಅರ್ಥ ಮಾಡಿಕಂಬಕೆ ಅವರೊಳಗೆ ಒಂದ್ ಭಾಷೆ ಬೇಕು. ಅದೇ ಮಾತೃಭಾಷೆ!! ನಂಗೆ ಅದ್ ಅರೆಭಾಷೆ!! ಈ ವಿಷಯಕ್ಕೆ ಬಾಕನ ನಾವ್ಗೆ ಪಿಯುಸಿಲಿ ಕನ್ನಡ ಪಾಠ ಮಾಡ್ತಿದ್ದ ಬಾಲಣ್ಣ ಮಾಷ್ಟ್ರ ನೆನ್ಪಾದೆ. (ನಂಗೆ ಅವು ಬರೇ ಗುರುಗಳಲ್ಲ. ನಾ ಚಡ್ಡಿ ಹಾಕೊಕೂಂತ ಗೊತ್ತಾಕನನೇ ಅವರ ಮಕ್ಕಳೊಟ್ಟಿಗೆ ನಂಗೂ ಗಂಜಿ ಕೊಡ್ತಿದ್ದ ಪಿತೃಸ್ವರೂಪ ಪೂಜ್ಯರ್.)

ಅವು ಹೇಳ್ದಿದ್ದೊ "ಕನ್ನಡ ಮೀಡಿಯಂಲಿ ಕಲ್ತವು ಕನ್ನಡ ಲಾಯ್ಕಿ ಕಲ್ತ್ ಅದರ ಮೂಲಕ ಇಂಗ್ಲೀಷ್ ಅರ್ಥ ಮಾಡಿಕಂಡವೆ. ಆದರೆ ಇಂಗ್ಲೀಷ್ ಮೀಡಿಯಂಲಿ ಕಲ್ತವ್ಕೆ ಅತ್ತ ಪೂರ್ತಿ ಇಂಗ್ಲೀಷನೂ ಅಲ್ಲ. ಇತ್ತ ಸರಿಯಾಗಿ ಕನ್ನಡನೂ ಬಾದ್ಲೆ. ಒಟ್ಟಾರೆ

ಅವರೊಂದು 'ಭಾಷೆ ಇಲ್ಲದವರು'!!!!"

ಹಂಗೇ.... ನಾನೂ ಒಬ್ಬ ಭಾಷೆ ಇಲ್ಲದವಾಂತ ನಂಗೆ ಅರ್ಥ ಆದ್ ಜರ್ಮನಿಗೆ ಬಂದ್ ಎತ್ತಿದ ಮೇಲೆನೇ. ಬೆಂಗ್ಲೂರ್‌ಲಿ ಇರ್ಕಾಕನ ಆದರೆ ಎಲ್ಲರೊಟ್ಟಿಗೆ ಕನ್ನಡ ತಪ್ಪಿರೆ ಇಂಗ್ಲೀಷ್. (ಬೆಂಗ್ಳೂರ್‌ಲಿ ಬೊದ್ಕಿಕೆ ಕನ್ನಡ ಬೇಕೂಂತಲೇ ಇಲ್ಲೆ. ಬರೇ ಇಂಗ್ಲೀಷ್ ಗೊತ್ತಿದ್ದರೆ ಸಾಕ್. ಬೀಡ ಮಾರಂವನೂ ಇಂಗ್ಲೀಷ್‌ಲಿ ಮಾತಾಡ್ದೆ. ಇನ್ನೆಲ್ಲಿಂದ ಕನ್ನಡ ಒಳಿದು!!!) ನಾವ್ಗೆಲ್ಲ ಒಂದ್ ವಿಷಯ ತಲೆಗೆ ಬಂದ್ ಹೊಗ್ಗಿಟು. ಇಂಗ್ಲೀಷ್ ಒಂದ್ ಭಾಷೆ ಬಂಧರೆ ಸಾಕ್, ಎಲ್ಲಿ ಬೇಕರೂ ಬೊದ್ಕಿ ಬರಕ್‌ಂತ. ಎಲ್ಲಾ ಬರೇ ಲೊಟ್ಟೆ ಮಾರ್‌ರ್ರೆ!! ಸುರೂನ ಸಮಸ್ಯೆ ಸುರು ಆದ್ ನಂಗೆ ಯೋಗ ಕಲ್ಸ್‌ಕಾಕನ. ಶ್ವಾಸ ತಕಂಡ್ ಬುಡಿಕೆ ಕಲ್ಸಿಕೆ ಸುರುಮಾಡ್ದೆ. ಹೆಂಗೆ? ಮೂಂಕುನ ತೋರ್ಸಿ ಶ್ವಾಸ ದೀರ್ಘ ಒಳಗೆ ತಕಂಡ್ ಹಂಗೇ ಬುಟ್ಟೆ. ಎಲ್ಲವೂ ಹಂಗೇ ಮಾಡ್ದೊ. ನಂಗೆ ಒಮ್ಮೆಗೇ ಖುಸೀನೂ ಆತ್. ಇವ್ವೆಲ್ಲಾ ಲಾಯ್ಕ್ಲಿ ಕಲ್ತೋಂತ. ನಾ ಕಾಲೆತ್ತಿರೆ ಅವೂ ಕಾಲೆತ್ತುದು. ಕೈ ಎತ್ತಿರೆ ಅವು ಕೈ ಎತ್ತುದು!! ಆದರೆ ಅವ್ವು ನಾ ಮಾಡ್ದರ ನೋಡಿ ಹಂಗೆ ಮಾಡ್ತೊಳೋಂತ ಅರ್ಥ ಆದ್ ಯಾಗ ಗೊತ್ತುಟಾ... ಸೊರ್ತ ನಿಲ್ಕಾಕನ ಆಚೆ ಈಚೆ ಜಾರ್ದ ನನ್ನ ಬಟ್ಟೆ ಸರಿ ಮಾಡಿಕಂಡರೆ ಅವ್ವುನೂ ಬಟ್ಟೆ ಸರಿ ಮಾಡಿಕಂಡವೆ!! ಎಂಥಾ ಅವಸ್ಥೆ ಮಾರ್‌ರ್ರೆ ನಂದ್!! ಆಗ ನಂಗೆ ನೆಂಪಾದ್ ನನ್ನ ಜರ್ಮನ್ ಗುರು ಶ್ರೀಮತಿ ಸಚಿತ್ರ ಅರುಣ್!! (ಒಂದಕ್ಷರವಂ ಕಲಿಸಿದಾತಂ ಗುರು ಅಂತ ಹೇಳುವೆ) ಹಂಗೆ ಅವಳ ಮೂಲಕ ಕಲ್ತ್ ಈಗ ಕೈ ಎತ್ತಿಕೆ ನಾನೂ ಕೈ ಎತ್ತಿತೋರ್ಸೊಕುತಿಲ್ಲೆ. ಬಾಯಿಲಿ ಹೇಳ್ರೆ ಕೈ ಎತ್ತುವೆ!!!

ಊಟದ ಸಮಯಲಿ ಲಾಯಿಕ್ ಲಾಯಿಕ್‌ನ ಹಣ್ಣ್‌ಗ ತಿಂಬಕೆ ಸಿಕ್ಕಿದೆ. ಮತ್ತೆ ತಿನ್ನಕ್ ಅಂತ ಕಟ್ಟಿಕಂಡ್ ಹೋಕೆ ನಮ್ಮದೇ ಸ್ಟೈಲ್‌ನ "ಪ್ಲಾಸ್ಟಿಕ್ ತೊಟ್ಟೆ" ನೆನ್ಪಾತ್. ಆದರೆ ಹೇಂಗೇತ ಕೇಳ್ದು?? ಬಲ್ದ ಕೈ ತೋರು ಬೆರ್ಳ್‌ಲಿ ಚೌಕದ ಹಾಂಗೆ ಮಾಡಿ ಇಡೀ ಕೈ ಒಳಗೆ ಹುಗ್ಗುಸಿದಂಗೆ ಆಕ್ಷನ್ ಮಾಡಿ "ಕವರ್... ಕವರ್" ಅಂತ ಹೇಳ್ದೆ. ಅಲ್ಲಿದ್ದಂವ ಪಳಪಳ ಹೊಳಿವ ತೊಟ್ಟೆ ಒಂದ್ ತೆಗ್ದು ಕೊಟ್ಟತ್. ಆಗ ನೆನ್ಸಿದೆ ಎಲ್ಲಾ ಭಾಷೆಗಿಂತ ಕೈ ಭಾಷೆನೇ ಮೇಲ್ ಅಂತ!! ಇನ್ನೊಂದಿನ ಕುಡಿವ ನೀರ್ ತಕಣೊನೊತ ಒಂದ್ ಸಣ್ಣ "ಕೆಫೆಟೇರಿಯಾ" ಕ್ಕೆ

ಹೋದೆ. (ಇಲ್ಲಿ ನೀರ್ ಬಾಟ್ಲಿಲೇ ಸಿಕ್ಕುದು. ಅದರ ರೇಟ್ ನೋಡ್ರೆ; ನೀರ್ ಗಿಂತ ಬಿಯರ್ ರೇಟ್ ಕಮ್ಮಿ!!) ನಮ್ಮ ಶುದ್ಧ ಭಾರತೀಯ ಸ್ಟೈಲ್‌ಲಿ ಹೆಬ್ಬೆರ್ಳ್ ಎತ್ತಿ, ಒಳ್ದ ಬೆರ್ಳ್‌ಗಳ ಮೊಡ್ಚಿ, ಮೊಣಕೈ ಬೊಗ್ಗ್‌ಸಿ 'ಕುಡಿಯಕೆ ಬೇಕೂಂತ' ಕೇಳ್ದೆ. ಆ ಸೇಲ್ಸ್ ಆಂಟಿ ಒಂದ್ ದೊಡ್ಡ ಬಾಟ್ಲಿ ಬಿಯರ್ ಎದ್ರ್ ತಂದ್ ಇಸಿತ್!! ಖುಶಿ ಪಡೊಕೋ ಬೇಜಾರ್ ಮಾಡಿಕಣೋಕೋಂತ ನೀವೇ ಹೇಳಿ!! ಇದ್ ಕಥೆ ಆಕಿಲೆತ ಅಲ್ಲಿ ಫ್ರಿಡ್ಜ್‌ಲಿ ಇದ್ದ ನೀರ್ ಕುಪ್ಪಿನ ತೋರ್ಸಿದೆ. ಅಂತೂ ಕುಡಿಯಕೆ ನೀರ್ ಸಿಕ್ಕಿತ್. ಎಲ್ಲಾ ಭಾಷೆಗಿಂತ "ಕೈ ಭಾಷೆ" ಮೇಲ್ ಹೌದು. ಆದರೆ ಅದ್ ಎಲ್ಲಾ ಕಡೆ ಅಲ್ಲಾಂತ ಅರ್ಥ ಆತ್ ಬುಡಿ. ಮಾಮೂಲಿನ ಬ್ರೆಡ್, ಬಟರ್ ತಿಂದ್ ತಿಂದ್ ಬೋರ್!! ಕೋಳಿಗ್ಯೆಪಾರ್ ಮಾಡಿಕಣಕ್‌ಂತ ಮಾಸ ತಾಕೆ ಸೂಪರ್ ಮಾರ್ಕೆಟ್‌ಗೆ ಹೋದೆ. ನೋಡ್ರೆ ಬಗೆ ಬಗೆ, ಬಣ್ಣ ಬಣ್ಣ ಚಿತ್ರ ವಿಚಿತ್ರ ಸೈಜ್‌ನ ಮಾಸದ ತುಂಡುಗ. ಯಾವ ಯಾವ ಜಾತಿನ ಮಾಸ ಉಟ್ಟೋ... ಅವ್ಕೇ ಗೊತ್ತು!! ಅಲ್ಲೂ ನೋಡ್ರೆ ಸೇಲ್ಸ್ ಆಂಟಿ ಯಾವುದು ಬೇಕೂಂತ ಜರ್ಮನ್ ಭಾಷೆಲಿ ಕೇಳ್ತ್. (ಅದ್ ಹೆಂಗೆ ಕೇಳ್ತ್‌ಂತ ಗೊತ್ಲೆ. ಆದರೆ ಕೇಳ್ದ ವಿಷಯ ಅದೇಂತ ಗೊತ್ತಾತ್. ಅದ್ಕೆ ಭಾಷೆ ಬೇಡ ನೋಡಿ. ಕಾಮನ್ ಸೆನ್ಸ್ ಸಾಕ್!!) ನಾ ಮಾಸದ ಪೀಸ್‌ಗಳ ಕಡೆ ಕೈ ತೋರ್ಸಿ "ಕೊಕ್ಕೊಕ್ಕೋ"ತ ಹೇಳ್ದೆ. ಓ ದೇವಾ.... ಆ ಆಂಟಿ ನೆಗಾಡಿಕಂಡ್ "ಓಹ್ ಚಿಕನ್" ಅಂತ ಒಂದರ ಕಟ್ಟಿಕೊಟ್ಟತ್. ನಾ ಇನ್ನೊಮ್ಮೆ ಭಾಷೆ ಇಲ್ಲದಂವಾದೆ!!!

* * * *

ಬಾಲೆಕ್ಯಕ್ಕನ ಬಾಲ್ಯದಾಟಿಕೆ!!

ಊರೊದ್ದೆಟ್ಟಿ ತಮ್ಮಣ್ಣ ಗೌಡ್ರ ನಾಕ್ ಗಂಡ್, ಮೂರ್ ಹೆಣ್ಣ್ ಮಕ್ಕಳ ಪೈಕಿ ಕಡೇ ಗಂಡ್ ಸಂತಾನನೇ ಹೊದ್ದೆಟ್ಟಿ ಬೆಳ್ಳಿಯಪ್ಪ ಗೌಡ. ಬೆಳ್ಳಿ ಹೊಳ್ಪಿದಾಗೆ ಅವರ ವಿದ್ವತ್ ಕೂಡಾ ಹೊಳಿತಿದ್ದದಿಕೆ ಸಾಕ್ಷಿನೇ ಅವು ಬರ್ದ ಯಕ್ಷಗಾನ ಪ್ರಸಂಗ "ಉದಂಕ ಚರಿತೆ"!! ಬೆಳ್ಳಿಯಪ್ಪ ಗೌಡ್ರ ನಾಕ್ ಹೆಣ್ಣ್, ಎರ್ಡ್ ಗಂಡ್ ಸಂತಾನಲಿ ಸುರೂನ ಹಿರಿಯಕ್ಕನೇ ನಮ್ಮ "ಬಾಲಕಿ". ಎಲ್ಲವ್ಕೆ ಮೋಕೆನ "ಬಾಲೆಕ್ಯಕ್ಕ". ಹುಟ್ಟಿದ್ ಹೊದ್ದೆಟ್ಟಿಲಿ ಆದರೂ ಬೆಳ್ದದೆಲ್ಲಾ ಸೋದರಮಾವನ ಮನೆಲಿ. ಸತ್ಯಕ್ಕೂ ಹೇಳ್ರೆ ಅದ್ ಬರೇ ಮನೆ ಅಲ್ಲ... ಸ್ವರ್ಗ ಸಂಸಾರ... ಕುಡೆಕಲ್ಲು ಉಕ್ರಪ್ಪ ಗೌಡ, ದೇವಮ್ಮನೇ ಅದರ ಹೀರಿಕರ್. ಮಾವನ ಮನೆಲಿ ಪ್ರಾಯಕ್ಕೆ ಬಾಕನ ಮುಟ್ಟ ಸೊಕ್ಕಿದೇ ಸೊಕ್ಕಿದ್. ಸ್ಥಾನಂದ ಆಚೆ ಕರೆಲಿರುವ ಹುಣ್ಸುಳಿ ಮರ ಅರೆ ಹೊಡಿ ಆದೇ ಇವರ ಉರ್ತಕೊಳ್ಳಿಗೆಗಡ!! ಇನ್ನ್ ಮನೆ ಅಟ್ಟದ ಮೆಟ್ಲ್ ಅಲ್ಗದೆ ಒಳ್ದದ್ ದೇವಮ್ಮಜ್ಜಿನ ಪುಣ್ಯ!! ಹಿಂಗಿರ್ಕಾಕನ ನಮ್ಮ ಬಾಲೆಕ್ಯಕ್ಕ ಹೊದ್ದೆಟ್ಟಿಗೆ ಬಂದ್ ತಂಬೂರ್ದೇ ಚೋಪರಾಗಿ. ಅಂದ್ ಮಗ್ಗ್ಳ ಹೊದ್ದೆಟ್ಟಿ ಸುಬ್ಬಕ್ಕನ ಮನೆಗೆ ದೇವಮ್ಮಜ್ಜಿ ಪುಳ್ಳಿ ಬಾಲೆಕಿನ ಕರ್ಕಂಡ್ ಬಂದ ದಿನ ಗಮ್ಮತೇ ಗಮ್ಮತ್. ಒಂದಿನ ಕಡ್ಡೆ ಉಪ್ಪಣ ಗೈಪಾದರೆ ಮಾರ್ನೆ ದಿನ ಅಳಿಯ ಬೆಳ್ಳಿಯಪ್ಪ ಹೊಡ್ಡ ಹೊಳ್ಕೆ ಗೈಪು. ಇನ್ನ್ ಕೋಳಿ,

ಮೀನ್‌ಗೆ ಬರ ಎಲ್ಲಿ? ಬಗೆ ಬಗೆ ಬಾರಣೆ ಗಮ್ಮತ್ ನೋಡ್ದ ಬಾಲೆಕ್ಯಕ್ಕಂಗೆ ವಾಪಾಸ್ ಕುಡೆಕಲ್ಲ್‌ಗೆ ಅವ್ವನೊಟ್ಟಿಗೆ ಹೋಕೆ ಮನ್ಸೇ ಇಲ್ಲೆ. (ಇಲ್ಲಿ ಯಾಗೋಳು ಹಿಂಗೇ ಗಮ್ಮತಿದ್ದದೆತ ನೆನ್ಸ್ಯೊಳೊ!!). ಕಡೆಗೂ ಉರ್ಯೋರ್ಳುಂದಲೂ ಕಡೆಗಟ್ಟಾಗಿ ಮರ್ಟ್‌ಕಂಡಿರುವ ಪುಳ್ಳಿನ ಬುಟ್ಟೇ ಹೋದೊ ದೇವಮ್ಮಜ್ಜಿ. ನಾಕ್ ದಿನಲೇ ಬಾಲೆಕ್ಯಕ್ಕಂಗೆ ಗೊತ್ತಾತ್ ಅವು ಚೋಪರಾಗೊಳೊತ!! ಬಗೆ ಬಗೆ ತಿನ್ಸ್ ಅವ್ವ ಬಂದಿರ್ಕಾಕನ ಮಾತ್ರ. ಈಗಳೋ... ಯಾಗ ನೋಡ್ರೂ ಒಂದೇ ಬಗೆ.. ಗಂಜಿ, ಪೊಜ್ಜಿ!!

ಚೋಪರಾಗಿ ಹುಟ್ಟಿದ ಮನೆ ಸೇರ್ದ ಬಾಲೆಕ್ಯಕ್ಕಂಗೆ ಸುಮ್ಮನೆ ಕಾಲ್ ನೀಂಡಿ ಕುದ್ರಿಕೆ ಎಲ್ಲ್ಯಾದೆ.. ಯಾಗ ನೋಡ್ರೂ ಕುಂಡೆ ಹರಿವಷ್ಟ್ ಕೆಲ್ಸ!! (ಎಷ್ಟ್ ಮಾಡ್ರೂ ಮುಗ್ಯದ ಕೆಲ್ಸಕ್ಕೆ ನಮ್ಮ ಅರೆಬಾಸೆಲಿ ಇದರ್‌ಂದ ಮೇಲೆನ ಪದ ಇಲ್ಲೆ ಅನ್ಸಿದೆ!!) ಎಷ್ಟಾದರೂ ಬೇಸಾಯದ ಕುಟುಂಬ.. ಅದ್ಕೇ ಹೇಳ್ದಲ್ಲಾ.... ಬೇಸಾಯ ಮಾಡ್ದಂವ ಬೇಗ ಸಾಯ!! ಒಟ್ಟೊಟ್ಟಿಗೆ ತಮ್ಮ ತಂಗೆಕಳ ಚಾಕ್ರಿ ಬೇರೆ!! ಅಪ್ಪ ಬೆಳ್ಳಿಯಪ್ಪಂಗೂ ಮಗ್ಳ್ ಒಟ್ಟಿಗಿದ್ದರೇ ಕೆಲ್ಸ ಸರಾಗಾದು.. ಅದರ್ಲೂ ಮುಖ್ಯ ಕೆಲ್ಸ ಗ್ಯಾರ್ದಣ್ಣ್ ಸರಾಯ ಕಾಸಿಕೆ. ಅಂತೂ ಮಗ್ಳಿಲ್ಲದೆ ನಿಮೂರ್ತಿ ಇಲ್ಲೆ.

'ನೀ ಬಂದರೆ ಬಾರೀ ಲಾಯ್ಕ್ ಬಂದದೆ'ತ ಪೂಸಿನೂ ಹೊಡ್ಕಂಡವೆ!! ಒಂದಿನ ಹಿಂಗೇ ಸಿಗ್ಗಾಕಿದ ಹಣ್ಣ್‌ನ ಮಡ್ಕೆಲಿ ತುಂಬ್ಸಿದೇ ತಲೆಲಿ ಇಸಿಕಂಡ್ ಬೀಜ ಕೊಚ್ಚಿಲಿ ಕಾಸಿಕೆ ಅಪ್ಪನೊಟ್ಟಿಗೆ ಹೊರ್ಟೋ ಬಾಲೆಕ್ಯಕ್ಕ. ಮಟ ಮಟ ಮಧ್ಯಾಹ್ನ ಕರ್ಗೆಲ್ ನಾತನ ತಲೆಲಿಸಿಕಂಡ್ ಕಣ್‌ಂಗ ಕರೆಲಿ ಬೀಸರ ಬೀಸರ ಹೋತಿದ್ದವ್ಕೆ ಯಾವ ಪೀಡೆ ಕಣ್ಣಾಕಿತೋ ಗೊತ್ತೆ. ಲಂಗಕೊಡಿ ಕಿಂಕ್‌ಣಿ ಬೆರ್ಳ್‌ಡೆಗೆ ಚೊಡ್ಚಿ, ಎಡ್ಗಿ ಬೀಳಕಾದವು ಅಲ್ಲಿಗೇ ಆದರ್ಸಿಕಂಡೊ. ಮೈ ಏನೋ ಆದರ್ಸಿಕಂಡತ್.. ಆದರೆ ಮಡ್ಕೆ ಎಲ್ಲಿ ಕೇಳ್ದ್?? ಮಡ್ಕೆನ ಬುಡ ಒಡ್ದ್, ಕರ್ಗೆಲ್ ಹಣ್ಣ್ ತಲೆ, ಮೋರೆಲಿ ಅರ್ಕಂಡ್, ಮಡ್ಕೆನ ಕಂಠ ಮಾತ್ರ ಇವರ ಕುತ್ತಿಗೆಲಿ ನೇಲ್ತಟ್ಟ್!! ಹಳ್ಸೆಲ್ ಕರ್ಗೆಲ್ ನಾತ... ಬಾಯಿ ದೊಂಡೆ ಇಡೀ ಕಯಿಂಪೆ!!

"ಎಂತ ಕೂಸು" ತೇಳ್ದ ಅಪ್ಪ ಬೆಳ್ಳಿಯಪ್ಪಂಗೆ" ಕೂಸು ಅಲ್ಲಾ... ಕೂಸುನಪ್ಪ!!"ತ ಬೊಯ್ಕಂಡೇ ಮೀಯಕೆ ಚೋಡಿಗೆ ಓಡ್ರೊ.

ಬೆಳ್ಳಿಯಪ್ಪ ಗೌಡ್ರೂ ಯಾಗೋಳು ಸರಾಯ ಕಾಸಿಕೆ ಎಳೆ ಬಾಲೆ ಮನ್ಸ್‌ನ ಬಾಲೆಕ್ಯಕ್ಕನನೇ ಕರ್ಕಂಡ್ ಹೋದಕ್ಕೂ ಒಂದ್ ಮಹತ್ತರ ಕಾರಣನೂ ಉಟ್ಟು.

ಬಾಲೆಕ್ಯಕ್ಕನ ದೊಡ್ಡ ತಂಗೆ ಕಾಳಿ ಗೂಡೆ ಭಯಂಕರ ಕಿಲಾಡಿ. ಕರ್ಕಂಡೋದರೆ ಕಾಸಿದಲ್ಲಿಂದ ಚೂರಾರ್ ಹೊಯಿಕಣದೆ ಹೊರ್ಡಿಕಿಲ್ಲೆ. ಕಡೆಗೆ ನೋಡ್ರೆ ಕಾಸಿದವಂಗೆ ಏನಿಲ್ಲದಿದ್ದರೂ ಎರ್ಡ್ ಬೆರ್ಳ್‌ನಷ್ಟಾರ್ ಕಮ್ಮಿ ಆಗಿದ್ದದೆ!!

ಇದ್ ಕುಪ್ಪಿ ಗ್ಲಾಸ್‌ಗೆ ಹೊಯಿದ ಗ್ಯಾರ್ಡಣ್ಣ್ ದರ ಅಳ್ತೆ ನೋಡ್ವ ಹಳೇ ಕ್ರಮ. ಕುಪ್ಪಿ ಗ್ಲಾಸ್‌ನ ಅಡಿಂದ ಸರೀಯಾಗಿ ನಡು ಬೆರ್ಳ್, ಕೊಡಿ ಬೆರ್ಳ್‌ನ ಮಟ್ಟಕ್ಕೆ ಸರೀ ಸಿಕ್ಕೊಕು. ಅಲ್ಲಿಗೆ ಒಂದ್ ಹಾದಾ.. ಥರ್ಟಿ, ನೈಂಟಿಗಳ ಪ್ರಮಾಣಗಳೇ ಅಲ್ಲಿತ್ಲೆ...!!) ಜೋನಿ ಬೆಲ್ಲದ ಭರಣಿಂದ ಎಲ್ಲವೂ ಬೆರ್ಳ್ ಕಂತ್‌ಸಿ ತೆಗ್ದರೆ ಕಾಳಿ ಗೂಡೆ ಮಾತ್ರ ಕಂತ್‌ಸಿದ ಜಾಗೆನ ಅಲ್ಲಿಗೇ ಪೂಜಿ ಬುಡ್ದು. ಆಗ ತೆಗ್ದದ್ ಗೊತ್ತಾದ್ಲೆ ಅಲ್ಲ!!!

ಕಡೆಗೂ ಇನ್ನೊಂದ್ ದಿನ ಮಗಳ ಕರ್ಕಂಡ್ ಕಾಸಿಕೆ ಹೊದೊ ಬೆಳ್ಳಿಯಪ್ಪ. ಮಡ್ಕೆಗಳೆಲ್ಲಾ ಲಾಯಿಕ್‌ಲಿ ಇಸಿ, ಕರೆಲಿ ಗುಂಬ (ಸರಾಯ ತೆಗಿವ ಸಣ್ಣ ಬಾಯಿನ ಮಡ್ಕೆ)ನನೂ ಅಂಡ್‌ಸಿ ಇಸಿದೊ. ಮೇಲೆ ಮಡ್ಕೆಲಿ ನೀರ್ ಬಿಸಿ ಆದದರ ಬದ್ಲಾಯ್ಸಿಕೆ 'ನೋಡಿಕ ಕೂಸು'ತೇಳಿ ಚಣ್ಣೀರ್ ತಾಕೆ ಚೋಡಿಗೋದೊ. ಈ ಗುಂಬಲಿ ಹನಿ ಹನಿ ಸರಾಯ ಕೂಡ್ದೇ ನೋಡಿಕೆ ಕುಸಿ... ಆ ಘಮನ.. ಆಹಾ... ಸರಾಯದ ಸುದ್ದತೆ ನೋಡಿಕೆ ಒಂದ್ ಕ್ರಮ ಉಟ್ಟು. ಒಂದ್ ಒಣ್ಗಿಲ್ ಮಡ್ಲ್ (ಸೋಗೆ ಕೊಡಿ, ಬಾಳ್ಲೆಕೀಂತೂ ಆದೆ)ನ ಸರಾಯಕ್ಕೆ ಕಂತ್‌ಸಿ ಮತ್ತೆ ಕಿಚ್ಚಿಗೆ ಹಿಡ್ದರೆ ಒಮ್ಮೆಗೆ ಅದ್ಕೆ ಕಿಚ್ಚಿ ಹಿಡ್ಕಂಡದೆ. ನೀಲಿ ನೀಲಿ ಕಿಚ್ಚಿ. ಅಲ್ಲಿಗೆ ಸರಾಯ 100% ಶುದ್ಧ!! ಒಬ್ಬನೇ ಚುರ್ಕರ ಕುದ್ದ್‌ಕಂಡ್ ಕಾಲ್ ಚೆನ್ನೆರ್ಪ್‌ಸಿ ಕಂಬೊದು ಯಾರಿಗೇ ಆದರೂ ಹಿಂಸೆನೇ. ಹಂಗೇ ಕುದ್ದಿದ್ದ ಬಾಲೆಕ್ಯಕ್ಕಂಗೂ ಸರಾಯ ಎಷ್ಟ್ ತುಂಬಿಟುತ ನೋಡಿಕೆ ಆಸೆ. ಅಪ್ಪ ಹೆಂಗೂ ಹಕ್ಕಲೆ ಇಲ್ಲೆ.... ನೋಡೊನೊತ ಎರ್ಡ್ ಮಡ್ಲ್ ಕಿಚ್ಚಿ ಹೊತ್ತ್‌ಸಿ ಅದರ್ನೇ ಗುಂಬದಕ್ಕಲೆ ಹಿಡ್ದೊ!!! ನೋಡೀ... ಕಿಚ್ಚಿ ಹಿಡ್ಕಂಡದೇ ಸರಾಯಕ್ಕೆ!! ಭೋಃಗ್ಗತ ಅಷ್ಟೆತ್ತರಕ್ಕೆ ಹೊತ್ತಿದ ಕಿಚ್ಚಿ ನಿತ್ತದ್ ಗುಂಬಲಿದ್ದ ಸರಾಯ ಒತ್ತರೆ ಹೊತ್ತಿ ಆರ್ದ ಮೇಲೆನೇ!! ಕಿಚ್ಚಿಕಂಡ್ ಓಡಿಬಂದ ಬೆಳ್ಳಿಯಪ್ಪ ಸರಾಯ ಹೋತಲ್ಲಾತ ಹನೀಸೂ ಸಿಟ್ಟ್ ಮಾಡಿಕಣದೆ 'ನಿಂಗೆ ಏನಾತ್ಲೆಲ್ಲಾ ಕೂಸು'ತ ಹೆದ್ರಿ ಚಂಡಿ ಆಗಿ ದರ್ಮುತಿದ್ದ ಬಾಲೆಕ್ಯಕ್ಕನ ಮನೆಗೆ ಕರ್ಕಂಡ್ ಹೊರ್ಟೊ. ಅಂತೂ ಬಾಲೆಕ್ಯಕ್ಕನ ಬಾಲ್ಯದಾಟಿಕೆಂದ ಅಪ್ಪ ಬೆಳ್ಳಿಯಪ್ಪಂಗೆ ಇನ್ನೊಮ್ಮೆ ಸರಾಯ ಇಲ್ಲದಾಂಗಾತ್!!

* * * * *

ಚಿಲ್ಲರೆ ಪ್ರಸಂಗ !!!

ಆಟಿ ತಿಂಗಳ ಜಿಟಿಜಿಟಿ ಮಳೆ. ಬೊಳ್ಪುನ ಚಳಿಗೆ ಬೆಚ್ಚನೆ ಗುಡಿ ಹೊದ್ದ್ ಮಲ್ಗಿದ್ದರೂ ನನ್ನ ಹೆಣ್ಣ್‌ನ ಪರ್ಽಂಚಟಕ್ಕೆ ವೊಲ್ಲಿ ಒಳಗೆ ಬೆಗ್ರಿಕೆ ಸುರಾತ್. ಮತ್ತೇನಿಲ್ಲೆ....

"8 ಗಂಟೆ ಬಸ್ಸ್‌ಲಿ ಸುಳ್ಯಕೆ ಎತ್ತೊಕು... ಎದ್ರಿಯಾ... ಶಾಲೆ ಮಕ್ಕಳಾಂಗೆ ಎಷ್ಟೊಂತ ಮಲ್ಗಿರೆ!!!" ನಾ ವೊಲ್ಲಿ ಎಳ್ದ್ ಮೋರೆ ಮುಚ್ಚಿಕಂಡರೂ ಅದರ ಎಳ್ದ್, ನೂಕಿ, ಮಂಚಂದ ಹೊಣ್ಕ್‌ಸಿ ಎದ್ರಿಸಿ ನೀರಡಿ ಕೊಟೆಗೆಗೆ ಬೆರ್ಸಿತ್. (ಒಂದರ್ಥಲಿ ನೋಡ್ರೆ ಅದ್ ಬೆರ್ಸಿದಲ್ಲ.... ನನ್ನ ಬಿಸಾಡ್ತ್!! ತಿರ್ಗಿ ಹೇಳುವಾಂಗೆ ಉಟ್ಟಾ!!??)

ವಿಷಯ ಸಿಂಪಲ್... ಕೃಷ್ಣಸ್ಟೋರ್‌ಲಿ ಸಾರಿ ಮೇಳ!! ಲೇಟಾದರೆ ಒಳ್ಳ ಒಳ್ಳ ಸೀರೆ ಮುಗ್ದದೆ. ಹೊತ್ತಾದರೆ ಜನಗಳ ನೋಡೊಕಷ್ಟೆ. ಯಾಪೆಗೆ ಹತ್ತಿದ ಉಬರ್ ಮೀನ್‌ಗಳಾಂಗೆ ಮಿಜಿ ಮಿಜಿ ಹೇಳ್ತಿದ್ದವೆ!!! ನೆರೆಕರೆ ದೋಸ್ತಿಗಳೊಟ್ಟಿಗೆ ಇದ್ ಒಂದ್ ತಿಂಗಳ್‌ಂದ ಹೇಳ್ತುಟ್ಟು....

'ನಂಗೆ ಇವು ಈ ಸರ್ತಿ ಸೀರೆ ಮೇಳಲಿ 10 ಸೀರೆ ತೆಗ್ದ್ ಕೊಟ್ಟವೆಗಡ!!' ಈ ಡಯಲಾಗ್‌ಗೆ ನಾ ಖುಷಿ ಪಡೊಕೋ ತಲೆಬಿಸಿಮಾಡಿಕಣೊಕೋ ಗೊತ್ತಾಗದೆ, ಗಡಿಬಿಡಿಲಿ ಹೊಯ್ದ

ಓಡಿಟ್ಸ್‌ನಾಂಗಿರುವ ಬೊಡ್ರೊಟ್ಟಿ ತಿಂದ್ ಓಡಿಕಂಡೇ ಬಂದ್ ಬಸ್ಟ್ಯಾಂಡ್‌ಗೆ ಎತ್ತಿದೊ.

ಬಚ್ಚಾವ್!! ಬಸ್ ಹೋತ್ಲೆ. ಬುಲ್ಲೆಟ್‌ನಾಂಗೆ ಬುಡ್ತಿದ್ದ ಶ್ವಾಸ ಮೆಲ್ಲ ಮೆಲ್ಲ ಬುಲ್ಡೋಝರ್ ಹದಕ್ಕೆ ಬಾತ್. ಅದೇ ಸ್ಪೀಡ್‌ಲಿ ಬಸ್ಸ್ ಕೂಡ!!! ಬಸ್ಸ್‌ಲಿ ಕುದ್ರಿಕೆ ಜಾಗೆ ಇಲ್ಲೆ. ಎಲ್ಲವೂ ಪೇಟೆಗೆ ಹೊರ್ಟವೇ!! ಹಂಗೂ ಹಿಂಗೂ ಜನರ ಎಡೆಲಿ ನುಗ್ಗಿ ಒಂದ್ ರಾಡ್‌ಗೆ ಒರ್ಗಿ ನಿತ್ತೆ. (ನನ್ನ 'ದೊಡ್ಡಾ' ಜೀವ ನೋಡಿ ಹೆದ್ರಿಯೋ ಏನೋ.... ಅಲ್ಲಿಗೆ ಎತ್ತಿಕೆ ಸೆರೆ ಮಾಡಿ ಕೊಟ್ಟವ್ಕೆಲ್ಲಾ ಒಂದ್ ದೊಡ್ಡ ನಮಸ್ಕಾರ!!) ಹಂಞಾ ಹೊತ್ತ್ ಕಳ್ದ್ ನೋಡ್ರೆ ಇನ್ನೊಂದ್ ರಾಡ್‌ಗೆ ಒರ್ಗಿ ನಿತ್ತ ಗೂಡೆ ನನ್ನ ನೋಡಿ ಮೋರೆ ಕರೇಲಿ ನೆಗಾಡ್ತುಟ್ಟು. ಯಾರೋ ಹೊಸ ಗೂಡೆ!! ಯಾರೂಂತ ಗೊತ್ತಾತ್ಲೆ. ಬೊಟ್ಟ್, ಕೆಬಿದ್, ಕೈದ್, ತುಟಿದ್, ಬಟ್ಟೆ ಎಲ್ಲಾ ಮ್ಯಾಚಿಂಗ್ ಮ್ಯಾಚಿಂಗ್... ಪಿಂಕ್!!! ಎಲ್ಲಿ ನನ್ನ ಯಜಮಾಂತಿ ನೋಡ್ದೆನಾಂತ ನೋಡ್ರೆ ಅದ್ ಸಿಕ್ಕಿದ ಹೆಮ್ಮಕ್ಕಳೊಟ್ಟಿಗೆ ಬಿಝೀ!! ಏನಪ್ಪಾ... ಲಡ್ಡು ಬಂದು ಬಾಯಿಗೆ ಬಿತ್ತಾ!! ಅಂತ ಖುಷಿಲಿ ನಾನೂ ತಿರ್ಗಿ ನೆಗಾಡ್ದೆ. ಆದರೂ ಗೂಡೆ ಯಾರೂಂತ ನಂಗೆ ಗೊತ್ತಾತ್ಲೆ. ಅಂತೂ ಬಸ್ಸ್ ನಿಲ್ಸಿದಲ್ಲೆಲ್ಲಾ ಗೂಡೆ ನನ್ನ ನೋಡಿ ನೆಗಾಡ್ದು, ನಾ ತಿರ್ಗಿ ಸ್ಮೈಲ್ ಕೊಡ್ದು ಮುಂದುವರ್ತ್. (ಒಟ್ಟ್ 11 ಸರ್ತಿ) ಸುಳ್ಯಕ್ಕೆ ಎತ್ತಿದೇ ಗೊತ್ಲೆ. ಯಾರೋ ಒಬ್ಬ ರಶ್‌ಲಿ ಕಾಲ್‌ಗೆ ಮೆಟ್ಟ್‌ಕಾಕನೇ ಗೊತ್ತು.. ಬಸ್ಸ್ ಬಸ್ಟಾಂಡ್‌ಲಿ ನಿತ್ತುಟ್ಟೂಂತ!!

ಬಸ್ಸ್ ಇಳಿಂಯುಕಾಕನೊವ್ಮ್ಮೆ ಲಾಸ್ಟ್ ಸರ್ತಿ ಅದರ ನೆಂಪು ಮಾಡಿಕಣೊನೋಂತ ಕಣ್ಣ್‌ಲೇ ಹುಡ್ಕಿ ನೋಡಿ ನೆಗಾಡ್ದೆ. ಅದುನೂ ಪೋರ್ಲುಲಿ ನೆಗಾಡ್ತ್. ಒಟ್ಟಿಗೆ ನನ್ನ ಹೆಣ್ಣ್ ಕೂಡ ಅದರ ನೋಡೊಕೋ!! ನೋಡ್ರೆ ಅದರ ಕಣ್ಣ್, ಮೋರೆ ಪಿಂಕ್ ಹೋಗಿ ಕೆಂಪಾಗುಟು!! ಅಂಗಡಿ ಹೆಂಗೂ ಇಲ್ಲಿಯೇ ಹಕ್ಕಲೆ ಉಟ್ಟಲ್ಲಾಂತ ಬಸ್ಸ್ ಇಳ್ದ್ ನಡ್ಕಂಡ್ ಹೊರ್ಟೊ. ಆ ಗೂಡೆ ಮಾತ್ರ ನನ್ನ ತಲೆಂದ ಹೋತೇಲೆ. ಯಾರಾಗಿರ್ದು ಅದ್??!! ನನ್ನ ಕ್ಲಾಸ್‌ಮೇಟ್ ಅಂತೂ ಅಲ್ಲ. ಯಾರಾರ್ ನನ್ನ ಕ್ಲಾಸ್‌ಮೇಟ್‌ನ ತಂಗೆನಾ? ಅಲ್ಲ... ಮೊನ್ನೆ ಬೆಂಗ್ಳೂರ್‌ಂದ ಬಾಕನ ಬಸ್ಸ್‌ಲಿ ಸಿಕ್ಕಿದ ಗೂಡೆ ದೀಪಿಕಾನ? ಅದೂ ಅಲ್ಲ... ನನ್ನಪ್ಪನ ಸ್ಟೂಡೆಂಟ್‌ಗಳ ಪೈಕಿ ಯಾರಾರ್ ಆಗಿದೋರ್ ಹೆಂಗೆ? ಅಂತೂ ನನ್ನ ತಲೆಗೆ ಹೊಳ್ತ್‌ಲೆ. ಅಷ್ಟೊತ್ತಿಗೆ ಒಟ್ಟಿಗೆ ನಡ್ಕಂಡ್ ಬರ್ತಿದ್ದ ನನ್ನ ಹೆಣ್ಣ್ ಕುತ್ತಿ ಕುತ್ತಿ ಕೇಳಿಕೆ ಸುರು ಮಾಡ್ತ್.

'ಯಾರ್ ಯಾ ಆ ಗೂಡೆ. ಭಾರೀ ಲಾಯ್ಕ್‌ಲಿ ನೆಗಾಡ್ತೊಳರ!'

'ನಂಗೆ ಗೊತ್ಲೇ ಮಾರಾಯಿತ್ತಿ' ಹೇಳ್ದಕ್ಕೆ ಅವ್ರು 'ಮತ್ತೆಂತಕೆ ಅದ್ ನಿಮ್ಮ ಹಿಂದೆಕಂಡೇ ಬರ್ತುಟ್ಟು??!!'

ತಿರ್ಗಿ ನೋಡ್ರೆ... ಹೌದು... ಆ ಗೂಡೆ ನನ್ನ ಹಿಂದೆಕಂಡೇ ಉಟ್ಟು. ನಾನೂ ಒಮ್ಮೆ ಬ್ರೇಕ್ ಹಾಕಿ ನಿತ್ತೆ. ಪುನಃ ಅದೇ ಸ್ಟೈಲ್. ನೀ ಯಾರೂಂತ ಕೇಳಿಕೆ ಬಾಯಿ ತೆಗ್ಯಕೆ ಮೊದ್ಲೇ ಆ ಗೂಡೆನ ಪ್ರಶ್ನೆ ನಂಗೆ ಹಾರಿ ಬಾತ್. ಅದೇ ಪ್ರಶ್ನೆಲಿ ನನ್ನ ಹೆಣ್ಣ್‌ನ ಡೌಟೂ ಹಾರಿ ಹೋತ್. **"ಅಣ್ಣಾ... ನಿಮ್ಮೊಟ್ಟಿಗೆ 2000 ದ ನೋಟುಗೆ ಚಿಲ್ಲರೆ ಉಟ್ಟಾ??"**

* * * * *

ಚಿನ್ನಮ್ಮಕ್ಕನ ಚಿಣೆತಿಂಟೆಲಿ....

ಯಾಗ ನೋಡ್ರೂ ನೀರಡಿ ಕೊಟೆಗೆನ ಬೂದಿ ಗುಡ್ಡೆಲಿ ಬೆಚ್ಚಂಗೆ ಮಲ್ಕ್ಯಂಡಿರುವ ಬೊಳ್ಳು ನಾಯಿ ಇಂದ್ ಜಾಲ್ ಕರೆಂದ ಅರೆಬಾಯಿಸುದರ ಕೇಳ್ದ ಚಿನ್ನಮಕ್ಕಂಗೆ ಗೊತ್ತಾತ್ ಯಾರೋ ಬಾರದವೇ ಬಂದೊಳೊತ. ನಾಕ್ ದಿನಂದ ಹೊಯ್ತಿರುವ ರಣ ಮಳೆಂದಾಗಿ ಕರೆಂಟೂ ಇಲ್ಲೆ.... ಒಟ್ಟಿಗೆ ಸಾರ್ ಗ್ಯಾಸೂ ಇಲ್ಲೆ!!

(ಕರೆಂಟ್ ಇಲ್ಲದೆ ಮಿಕ್ಸಿ ತಿರ್ಗುದು ಹೆಂಗೆ? ಅರೆಪ್ಪು ಕಡೆದಾರ್ ಹೆಂಗೆ? ಇದ್ದದರ್ನೇ ಪಲ್ಯ ಮಾಡಿ ಸುಧಾರ್ಸ್ತೊಳೊ!!) ಕಡೆಗೂ ಗುಡ್ಸಿಟ್ಟ ಕುಂಟು ಮಾಯಿಪೇ ಗತಿಂತ ನೀರ್ ನೋಡದೆ ವರ್ಸನೇ ಕಳ್ದಿದ್ದ ಕಡ್ಕಲ್ಲ್‌ನ ಭಾರೀ ಭಂಗಲಿ ತೊಳ್ಕಂಡಿದ್ದವು, ಚಂಡಿ ಕೈನ ಸೆರ್‌ಂಗ್ ಕೊಡಿಗೆ ಒರ್ಸಿಕಂಡ್ ಯಾರ್ ಬಂದೊಳೊತ ನೋಡಿಕೆ ಹೊರ್ಟೊ. ಮಳೆಲೇ ಬರ್ತಿರವ್ಕೆ ನೀರ್ ಚೊಂಬು ತಾದೆಂತಕೆತ ಹೇಳಿಕಂಡೇ ಬಂದ ಮನೆ ಯಜಮಾಂತಿ ಚಿನ್ನಮ್ಮಕ್ಕಂಗೆ ಜಾಲ್‌ಂದಾಚೆ ಉದ್ಗಿಲ್‌ಂದೀಚೆ ಕಂಡ ರೂಪನೇ ಅಪ್ರೂಪ. ಚಂಡಿಯಾಕೆಬೊತ್ತುತ ಎತ್ತಿಕಟ್ಟಿದ ಸೀರೆ ಮೊಣ್ಕಾಲ್‌ಂದ ಮೇಲೆ ಬಂದುಟು!! ಹನಿ ಮಳೆಗೆ ಮೂಂಡಿ ಕೆಸದ ಸೊಪ್ಪುನನೇ ತಲೆಮೇಲೆ ಅಡ್ಡಕ್ಕೆ ಹಿಡ್ಕಂಡ್ ಬಾತಿರುವ ಆಚೆಕರೆ ನೀಲಮ್ಮಕ್ಕ ಆಟಿ ಕಳೆಂಜ ಬರ್ತಿರುವಾಂಗೆ ಕಂಡದ್

ಮಾತ್ರ ಸುಳ್ಳಲ್ಲ!! ಕೂದಲ್ ಹಣ್ಣಾದರೂ ತಂಜಣೆ ಬುಡದ ನೀಲಮ್ಮಕ್ಕನ ಮುಂದೆ ಚೆರ್‌ಂಜೆಲಕ್ಕಿ ಯಾವ ಲೆಕ್ಕ?? ಒಗ್ಡ್ ಹಿಂಡದ ಬಟ್ಟೆನಾಂಗೆ ನೀರ್ ಹನ್ನುಸುತಿರ್ವವರ ಚಿಣೆತಿಂಟೆಲೇ ನಿಲ್ಲ್‌ಸಿ ಚಾಯಕೆ ನೀರಿಸಿನೆತೇಃಳಿ ಹೊರ್ಟೊ ಚಿನ್ನ ಮಕ್ಕ.

ಮಾತೆಯರ ಮಾತ್ ಕತೆಗೆ ಮುದದಿಂದ ಮುನ್ನುಡಿಯೇಕೆ?

"ಎಂಥಾ ರಣ ಮಳೆ ಚಿನ್ನಮ್ಮಕ್ಕಾ... ಬಾನ್ ನೋಡಿ ಎಷ್ಟ್ ದಿನ ಕಳ್ತೊ!! ಬೈಪಣೆಲೆದ್ರುವ ಬಿಳ್ಗ್‌ಲ್ ಅಳ್‌ಂಬು ನೇಕೆಲಿ ನೆಲ್ತಿರುವ ಬಟ್ಟೆಲಿ ಎದ್ರಿಕೆ ಒಂದ್ ಬಾಕಿ ಅಷ್ಟೆ. ಹಟ್ಟಿ ಅಂತೂ ಚೋಳ್ ಚೋಳಾಗಿ ಕಂಪ ಗದ್ದೆನಾಂಗಾಗುಟು. ಕಡೆಗೆ ಕರ್‌ಬುಡುವ ಕೆಂಪಿ ಹಸ್‌ನ ಬಿಚ್ಚಿಕಂಡೋಗಿ ನೀರಡಿ ಕೊಟೆಗೆಲಿ ಕಟ್ಯಳೆ ಗೊತ್ತುಟಾ? ತೋಟಲ್ಯಂತೂ ನೀರ್ ನಿತ್ತ್ ಉಜಿರ್ ಕಣಿನೂ ಕೊಮ್ಮಿನ ಬುಡನೂ ಒಂದೇ ಆಗುಟು. ಗೊನೆ ಹಾಕಿದ ಬಾಳೆಗೆಲ್ಲಾ ಬುಡ ಪೊರ್ದ್ ಅಡ್ಡಬಿದ್ದೊಳೊ. ನಿಮ್ಮ ಬಾವ ಒಬ್ಬ... ಗೊನೆ ಅಲ್ಲೇ ಇದ್ದರೆ ಕರ್ಗುದುತ ತಂದ್ ತಂದ್ ಮೂಲೆಲಿ ಅಡ್ಕಿಸುವೆ. ಒಂದ್ ವಾರಂದ ಬಾಳೆಕಾಯಿ ಉಪ್ಪ್‌ಕರಿ ಮಾಡಿ ಮಾಡಿ ಬಿಡ್ದೋತ್. ಅಂಗಳ ಇಡೀ ಒರ್ತೆ ಎದ್ದ್ ಗೊದ್ದಂಗ ಮಿಜಿ ಮಿಜಿ ಕಂಡದೆ. ಈ ಸರ್ತಿ ಉಬರ್ ಅಂಗಳಕೇ ಹತ್ತುದೇನೋ!! ಇನ್ನ್ ಕರೆಂಟ್‌ನ ಕತೆ ಹೇಳಿ ಸುಖ ಇಲ್ಲೆ... ಮೊನ್ನೆ ನೆಡಿರ್ಲ್ ಒಮ್ಮೆ ಮಿಣ್ಕಿದಾಂಗಾತ್. ಬೆಂಗ್ಳೂರ್‌ಂದ ಹೈದ ಪೋನ್ ಮಾಡ್ರೆ ಮಾತಾಡಿಕೆ ಮೊಬೈಲ್‌ಲಿ ಚಾರ್ಜರ್ ಉಟ್ಟಾ?? ನಿನ್ನೆ ಮುಟ್ಟ ಒಂದ್ ಕುಟ್ಟಿಯಾರ್ ಇತ್ತ್... ಇಂದ್ ಅದೂ ಇಲ್ಲೆ... ಸತ್ತೇ ಹೋಗುಟು. ನಿನ್ನೆ ಮನೆಕಡೆ ಬಂದ ತಿಮ್ಮ ಹೇಳ್ತ್. ಲಚ್ಚಣ್ಣನ ಮನೆಲಿ ಎಲ್ಲವೂ ಜನ್ರೇಟ್ಲಿ ಕರೆಂಟ್ ಬುಟ್ಟ್ ಮೊಬೈಲ್ ಚಾರ್ಜ್ ಮಾಡಿಕಂಡವೆಗಡ!! ಹಂಗೆ ಇದ್ದೂಕ ಚೂರ್ ಮಾಡಿಕಣೊನೊತ ಹೊರ್ಟೆ. ಬೊಳ್ಪುಂದ ಚೂರ್ ಬೊಯಿಪು ನೋಡಿ ಕೊಡೆ ಬೇಡಾತ ಗ್ರೇಸಿ ಹೊರ್ಟದ್. ಚಾಕಟೆ ಮರಂದ ಇತ್ತ ಚೋಡಿ ಕರೆ ಪಾಲ ದಾಟ್ಯೋಳಷ್ಟೆ.. ಅಷ್ಟೊತ್ತಿಗೆ ಪುನಃ ಸುರಾತ್ ನೋಡಿ.. ಮಳೆ ಮಾರಿ.. ನಿಮ್ಮ ಬೇಲಿ ಕರೆಲಿದ್ದ ಮೂಂಡಿ ಕೆಸದ ದಂಟ್ ಮುರ್ದ್ ಹಿಡ್ಕಂಡ್ ಬಂದೆ... ಬೊಯ್ಬಡಿ ಬಲರ್ಯಾ.. ಅಲ್ಲಾ ಚಿನ್ನಮಕ್ಕ.. ನಂಗೊಂದು ಸಂಸಯ... ಈ ಮಳೆಗೂ ಏನಾರ್ ಉರ್ಚಟ ಹಿಡ್ದುಟಾ ಹೆಂಗೆ??!!... ತೋ.... ಇದರ ಪಡೆ ಮುತ್ತಿಕೆ...." ಈ ನಮೂನೆ ಜಿರ್‌ಂಜಿಲ್ ಸುರಾದರೆ ತಿರ್ಗಿ ಜವಾಬು ಕೊಡಿಕಾರ್ ಪುರ್ಸೊತೆಲ್ಯುಟ್ಟು ಚಿನ್ನಮ್ಮಕ್ಕಂಗೆ. ಅವು ನೀಲಮ್ಮಕ್ಕನ ಬಾಯಿ ನೋಡಿಯೇ

ಬಾಕಿ!!

ಪುರ್ಸೊತಿಲ್ಲದೆ ಹೊಯಿತಿದ್ದ ನೀಲಮ್ಮಕ್ಕನ ಮಳೆ ಪುರಾಣಕ್ಕೆ ಅಡ್ಡ ಹಾಕಿದ್ ಅವರ ಚಪ್ಪಲ್!! ಹೆಂಗೆ ಗೊತ್ತುಟಾ? ತೊಳ್ಸಿಕಟ್ಟೆಂದ ಆಚೆ ಬುಟ್ಟ ಚಪ್ಪಲ್ ಮಳೆ ನೀರ್‌ಲಿ ಪಾಂಬಿಕಂಡ್ ಹೋತುಟ್ಟು. ಕರಿಕಪ್ಪು ಏಮೆನಾಂಗೆ ಕಂಡ ಚಪ್ಪಲ್‌ನ ಅಗ್ಯಕ್ಕೆ ಬೊಳ್ಳು ನಾಯಿ ಹೋದರ ಕಂಡ್, ತಿಂಟೆಂದ ತೊಬ್ಕಂತ ಹಾರಿ ನೀಲಮ್ಮಕ್ಕ ಚಪ್ಪಲ್ ತೆಗ್ದಿಸಿಕಂಡೊ. ಸಿಕ್ಕಿದೇ ಚಾನ್ಸ್‌ತ ಚಿನ್ನಮ್ಮಕ್ಕನೂ "ನೀರ್ ಕೊದ್ದ್ ಆರ್ತೇನೋ.... ಚಾಯ ತನ್ನೆ!!"ತ ಮನೆ ಒಳಗೆ ಓಡ್ದವು ಬಾಕನ ಒಂದ್ ಕೀಂತ್ ಬಾಳ್ಲೆಲಿ ಸಜ್ಜಿಗೆನೂ ಹಿಡ್ಕಂಡೊಳೊ...

"ಎಲ್ಲರ ಮನೆ ದೋಸೆ ತೂತಾದರೆ ನಮ್ಮಲ್ಲಿ ಪುಂಡಿನೂ ತೂತಾಂಗುವಾಂಗೆ ಆಗುಟು ನೀಲಮ್ಮಕ್ಕ. ಮನೆ ಹಿಂದೆ ಬರೆ ಜರ್ದ್ ನೀರ್ ನಿತ್ತ್ ಕಂಬಳ ಗದ್ದೆನಾಂಗಾಗುಟು. ಕಣಿ ಕೆರ್ದ್ ಕೊಡಿಕೆ ತಿಮ್ಮನ ಬಾಕೆ ಹೇಳ್ರೆ, ಬನ್ನೆತೇಂಳ್ದಂವ ನಾಪತ್ತೆ. ಅಂವನ ಹುಲಿ ಹೊರಿಕೆ.. ಒಮ್ಮೆ ಬಂದರೆ ಕಳ್ಸಿಬುಡಿ ಆತಾ... ಬೇಸಾಯ ಮಾಡ್ದಂವ ಬೇಗ ಸಾಯಗಡ. ಈ ವರ್ಸ ಮಾತ್ರ ಕೊಮ್ಮುನ ನಂಬಿ ಕುದ್ದವೂ ಕೊಟ್ಟೆಕಾಯಿ ಕಟ್ಟಿದೊ!!

ಕರೆಂಟ್ ಇಲ್ಲದೆ ನಂಗೂ ಸಜ್ಜಿಗೆ, ಪದ್‌ಂಜಿಲೀ ದಿನ ಬೊಳ್ಪಾತುಟ್ಟು... ತಕಣಿ ಈ ಸಜ್ಜಿಗೆ... ಒಮ್ಮೆ ಮುಗ್ಸಿಬುಡಿ.. ಒಳ್ದರೆ ಮತ್ತೆ ಆ ನಾಯಿನೂ ತಿಂಬೊದ್ಲೆ!!! ಅದರ ಹಾಂಕರನೇ!! ಇರಿ ನೀವ್ಗೆ ಒಂದ್ ಹಳೆ ಕೊಡೆ ಕೊಟ್ನೆ. ಕಡ್ಡಿ ನಾಕ್ ಮುದುರ್ಟು ಅಷ್ಟೆ. ಇನ್ನೊಮ್ಮೆ ಇತ್ತ ಬಾಕನ ತಂದ್ ಬುಡಿ ಮಾತ್ರ.. ಮಗಳೂ ಮೊನ್ನೆ ಮನೆಗೆ ಬನ್ನೆತ ಹೊರ್ಟ್‌ಕಂಡಿತ್ತ್. ಈ ಮಳೆಗೆ ಬಂದರೆ ಎಂತ ಮಾಡ್ದು? ಕೂಸುನ ಉಚ್ಚೆ ಬಟ್ಟೆ ಒಗ್ದ್ ಒಣ್ಗಿಗೆ ಬೆಸೆಗ್ಯಡಿಲಿ ನೇಲ್ಸೊಕಷ್ಟೆ.. ಅದ್ಕೆ ನಾನೇ ಬೇಡಂತೇಳ್ದೆ. ಇರಿ ನಾ ಕೂಡೆ ತಂದ್ ಕೊಟ್ನೆ"ತ ಒಳಿಗೋದೊ.

'ಹಾಂಕರ'ತ ಹೇಳ್ದ್ ಇಪ್ಕೆನಾ ನಾಯಿಗೆನಾತ ಸರಿ ಅರ್ಥ ಆಗದೆ ನೀಲಮ್ಮಕ್ಕ ಬೆಚ್ಚ ಬೆಚ್ಚ ಚಾಯನ ಬಾಯಿಗಿಸಿ ಲೋಟೆ ಕೊಡಿಂದ ಹೀಂಪಿಕೆ ಸುರು ಮಾಡ್ದೊ.

* * * * *

ಕುಂಞಪ್ಪನ ಚಂಡ್ರಪುಳಿ...

ಇಂದನೇ... ಬೆಳ್ಗಾರ್‌ನ ರಣ ಗಾಳಿಗೆ ಕಾಡ್ ಮಾಯಿನ ಹಣ್ಣ್ ಸುಮಾರ್ ಉದ್ರಿಟು. ಮಾಂಬಳ ಹೊಯ್ಯುವಷ್ಟು ಇಲ್ಲೆ. ಮಧ್ಯಾನ ಉಂಬಕೆ ಚಂಡ್ರಪುಳಿ ಮಾಡ್. ಊರ್‌ಲಿ ಆಗಿನ ಆಗಿ ಮೀನ್, ಮಾಸ ತಿನ್ನದೆ ಬಾಯಿ ಚಪ್ಪೆ ಚಪ್ಪೆ ಆದೆ!! ಹೇಳಿ ತೋಟ್ಟೆಲಿದ್ದ ಮಾಯಿನಹಣ್ಣ್‌ನ ಒಲೆಚಿಂಟೆ ಕರೆಲಿ ಇಸಿದೊ ನಮ್ಮ ಕುಂಞಪ್ಪ. ಮನೆಲಿ ಕುಂಞಪ್ಪನೂ, ಅವರ ಹೆಣ್ಣ್ ಶಾಂತಕ್ಕನೂ ಇಬ್ಬರೇ ಒಳದ್. ಮಕ್ಕ ಇಬ್ಬರೂ ಇಂಜಿನೀಯರ್‌ಗ. ದೊಡ್ಡಂವ ಜರ್ಮನಿಲಿ, ಸಣ್ಣಂವ ಅಮೇರಿಕಲಿ. ಮನೆಲಿ ಇವೇ ಇಬ್ಬರು. ಒಂದೊತ್ತಿಗೆ ಮಾಡ್ರೆ ಮೂರ್ ಹೊತ್ತ್ ಉಂಬ ಸುಖೀ ಕುಟುಂಬ!!?? ಶಾಂತಕ್ಕ ಬಂದ್ ನೋಡ್ದೊ.. ಹತ್ತ್ ಮಾಯಿನ ಹಣ್ಣ್ ಉಟ್ಟು.... ಮಕ್ಕಳಾರ್ ಇದ್ದರೆ ಮನ್ಸ್ ಕೊಟ್ಟ್ ಚಂಡ್ರಪುಳಿ ಮಾಡಕಾಯಿತ್. ಅದಲ್ಲೂ ಸಂಣ್ಣಂವ ಸುನಿಲ್‌ಗಂತೂ ಚಂಡ್ರಪುಳಿ ಹೇಳ್ರೆ ಜೀವ. ಮೂರ್ ಮೂರ್ ಸರ್ತಿ ಇಕ್ಕ್‌ಸಿಕಂಡ್ ಉಂಬೊದು. ನಾವ್ಗೆ ಇಬ್ಬರಿಗೂ ಹೇಂಗೇ ಮಾಡ್ರೂ ಆದೇಂತ ಹೇಳಿಕಂಡ್ ಮಕ್ಕಳ ನೆನ್ಪಾಗಿಯೋ ಏನೋ ಕಣ್ಣ್ ಕರೆಂದ ನೀರ್ ಒರ್ಸಿಕಂಡ್ ಮಾಯಿನ ಹಣ್ಣ್‌ನ ತೊಳ್ಯಕೆ ತಕಂಡ್ ಹೊರ್ಟೊ. ಕುಂಞಪ್ಪಂಗೂ ಹಂಗೇ ಅನ್ಸಿರೂ ಕಂಡರೂ ಕಾಣದಾಂಗೆ ಮಾಡಿಕಂಡ್ ನೀರಡಿ ಕೊಟೆಗೆಗೆ ಎತ್ತಿದೊ.

ನಮ್ಮ ಕುಂಞಪ್ಪಗೊಂದು ಹಳೇ ಅಭ್ಯಾಸ. ಅದಂಥಾ ದುರಾಭ್ಯಾಸ ಏನೂ ಅಲ್ಲ.. ಎಂಥಾತೇಳ್ರೆ ಮಧ್ಯಾನ 12 ಗಂಟೆ ಮೇಲೆ ಚೂರು ಮಲ್ಗುದು. (ಕೆಲವೊಮ್ಮೆ ಚೂರು ಅಲ್ಲ... ಫುಲ್ ಆದೂ ಉಟ್ಟು.... ಮತ್ತೆ 3 ಗಂಟೆ ಮೇಲೆ ಎದ್ದ್ ಉಂಬೊದು). ಹಂಗೇ ಇಂದುನೂ ಆತ್. ತೋಟದ ಜೆಟ್ ಚೇಂಜ್ ಮಾಡಿ ಮನೆಗೆ ಬಂದವ್ ಅಲ್ಲೇ ಐಮರದ ಮೇಲೆ ಉದ್ದಾನೆ ಮಲ್ಕ್ಯಂಡೊ. ಮಲ್ಗಿದವ್ಗೆ ಒಳ್ಳ ನಿದ್ದೆ.... ಗೊತ್ತೇಲೆ... ಚೂರ್ ಹೊತ್ತ್‌ಲಿ ಕೆಳಗೆ ಮನೆ ಪುಂಡು ಅಂವನ ಎರ್ಡ್ ಹೊಡಿ ಮಕ್ಕಳ್ನೂ ಕೋಸಿಕಂಡ್ ಬಾತ್.

"ಚಿಕ್ಕವ್ವಾ... ಹೆಣ್ಣ್ ಅದರ ಅಕ್ಕನ ಮನೆಲಿ ಸತ್ಯನಾರಾಯಣ ಪೂಜೇಂತ ಹೋಗುಟು. ಒಟ್ಟಿಗೆ ಕರ್ಕಂಡ್ ಹೋದರೆ ಲಗಾಡಿ ತೆಗಿವೋಂತ ಇವೆರ್ಡ್‌ರ ನಂಗೆ ಕಟ್ಟಿ ಹೋತ್. ಮೊನ್ನೆ ಈ ಮಕ್ಕಳೊಟ್ಟಿಗೆ ಹೇಳಿದ್ದೆ ಅವ್ವನ ಹಸ್ ಕರ್ ಹಾಕಿಟೂಂತ. ಪೀಡ್ಸಿ ಪೀಡ್ಸಿ ಇಂದ್ ಹೊರ್ಡಿಸಿಕಂಡ್ ಬಂದೋಂತ" ಹೇಳಿ ಇಸ್ ಮುಳ್ಳ್‌ನಾಂಗಿದ್ದ ಹಲ್ಲ್ ಬುಟ್ಟ ಪುಂಡು ಬಂದದಕ್ಕೆ ಸೂನ್ ಒಪ್ಪ್‌ಸಿರೆ, ಮಕ್ಕ ಆಗಲೆ ಹಟ್ಟಿಲಿ ಕರ್‌ನೊಟ್ಟಿಗೆ ಮಂಜಣೆ ಸುರು ಮಾಡಿ ಆಗುಟು. ಮಧ್ಯಾನದ ಹೊತ್ತ್‌ಗೆ ಬಂದವರ ಹಂಗೇ ಕಳ್ಸುದು ಬೇಡಾಂತ ಶಾಂತಕ್ಕ ಮಕ್ಕಳಿಗೆ ಉಂಬಕೆ ಇಕ್ಕಿದೊ. ಮಕ್ಕಳೋ ಅವ್ವನ ಚಂಡ್ರಪುಳಿ ಲಾಯಿಕಾಗುಟೂಂತ ಹೇಳಿಕಂಡ್ ಕೊರ್ರ್‌ಂಟ್, ಚೋಲಿನ ಸುರ್ಪಿಕಂಡ್ ತಿಂದರೆ ಶಾಂತಕ್ಕಂಗೆ ಫಾರಿನ್ಲಿರುವ ಪುಳ್ಳಿಕಳ ನೆನ್ಪಾಗಿ ಸಮಾ ಉಣಿನೇ ಮಕ್ಕಳೇಂತ, ಚಿರ್ರ್‌ಂಬಿ ಚಿರ್ರ್‌ಂಬಿ ಮಾಡ್ದ ಚಂಡ್ರಪುಳಿನ ಗೋಂಚಿ ಗೋಂಚಿ ಸೊರ್ದೊ.

ನಿದ್ದೆ ಅಮಾಲ್‌ಲಿದ್ದ ಕುಂಞಪ್ಪಂಗೆ ಏನೇನೋ ಕನ್ಸ್. ಜೋರ್ ಮಳೆ ಬಂದಾಂಗೆ, ತೊಡಿಕ್ಕ್ಯಾನ ಜಾತ್ರೆಲಿ ಇದ್ದಾಂಗೆ, ಪುಳ್ಳಿಕ ಜಾತ್ರೆಲಿ ಐಸ್‌ಕ್ರೀಂ ತಿಂಬಕೆ ಎಳ್ಕಂಡ್ ಹೋದಾಂಗೆ... ಏನೇನೋ... ಅಸ್ಪಷ್ಟ. ಕಣ್ಣ್ ಬುಟ್ಟ್ ನೋಡ್ರೆ ಗಂಟೆ 2 ಕಳ್ದ್ ಹತ್ತ್ ನಿಮ್ಮ ಆಗುಟು. ಒಟ್ಟೊಟ್ಟಿಗೆ ಹೊಟ್ಟೆನೂ ಇಸಿದೆ. ಸಡನ್ ಆಗಿ ನೆನ್ಪಾತ್ ಹೆಣ್ಣ್ ಚಂಡ್ರಪುಳಿ ಮಾಡಿಟೂಂತ!! ಎದ್ದ್ ಹೋಗಿ ಮೋರೆ ತೊಳ್ದ್ ಸೀದ ಅಡ್ಗೆ ಕೋಣೆಗೆ ಹುಗ್ಗಿದೋ. ಮಾಮೂಲಿಗಿಂತ ಅರ್ಧಸೆಡೆ ಜಾಸ್ತಿನೇ ಇಕ್ಕ್ಯಂಡ್ ಚಂಡ್ರಪುಳಿ ಹಾಕ್ಯಂಬಕೆ ತಪಲೆನ ಮುಚ್ಚಳ ತೆಗ್ದರೆ ಅದರ್ಲಿ ಎಲ್ಲ್ಯುಟ್ಟ್ ಚಂಡ್ರಪುಳಿ?? ಒಂದ್ ಚಮ್ಚ ರಸನೂ ಸೌಂಟ್‌ಲಿ ಒಂದ್ ತಿರ್ರ್‌ಂಟೆಲ್ ಚೋಲಿನೂ ಒಳ್ದುಟು ಅಷ್ಟೇ. ಕೊರ್ರ್‌ಂಟ್‌ನ ಕುರುಹೇ ಇಲ್ಲೆ!!! ಪಾಪ ಕುಂಞಪ್ಪ... ಒಂದ್ ಕಡೆಂದ ಸಿಟ್ಟೂ ಬಂದದೆ.. ಬೇಜಾರೂ ಆದೆ... ಉಂಡ್

ಮಲ್ಗಿದ್ದ ಶಾಂತಕ್ಕ ಗಂಡ ಎದ್ದದ್ ಗೊತ್ತಾಗಿ "ಪುಂಡುನೂ ಮಕ್ಕಳೂ ಬಂದ್ ಉಂಡ್ ಹೋದೊ.. ನೀವು ಎಷ್ಟೊತ್ತಿಗೆ ಎದ್ದರೇಂತ ಗೊತ್ಲೆ. ಅದ್ಕೆ ಎಂತನೂ ಮಾಡ್ತ್ಲೆ. ನೀವು ಉಪ್ಪ್ ಮೆಣ್ಸ್ ಚಿರ್‌ಂಬಿಕಂಡ್ ಉಣಿ. ಕತ್ತಲೆಗೆ ಏನಾರ್ ಮಾಡೊನೊ"ತ ಹೇಳಿ ಮಲ್ಗಿದಲ್ಲಿಂದಲೇ ಶಾಸನ ಹೊರ್ಡಿಸಿದೊ. ಹೆಣ್ಣ್ ಹೇಳ್ದ ಮೇಲೆ ಇನ್ನೆಂಥ!!?? ಹಂಗೇ ಉಂಡ್ ತೋಟ ಕಡೆ ಹೊರ್ಟೊ. ಒಟ್ಟಿಗೆ ಒಂದ್ ಶಪಥನೂ ಮಾಡಿಕಂಡ್... "ನಾ ಇನ್ಸ್ ಮೇಲೆ ಮಧ್ಯಾನ ಮಲ್ಗುದ್ಲೆ... ಮಲ್ಗಿರೊ ಉಂಡ ಮೇಲೆನೆ!!"

* * * * *



ಡಾ. ಪುನೀತ್ ರಾಘವೇಂದ್ರ ಕುಂಟುಕಾಡು

ಸುಳ್ಯ ಸೀಮೆ ತೊಡಿಕಾನ ಗ್ರಾಮದ ಪ್ರತಿಷ್ಠಿತ ಕುಂಟುಕಾಡು ಮನೆತನದ ಶ್ರೀ ರಾಮಯ್ಯ ಮಾಸ್ತರ್ ಮತ್ತು ಶ್ರೀಮತಿ ಲಕ್ಷ್ಮೀ ಟೀಚರ್ ದಂಪತಿಗಳ ಮಂಙ ಪುನೀತ್, ಅವರ ಪ್ರಾಥಮಿಕ ಶಿಕ್ಷಣನ ಸುಳ್ಯ ಸೈಂಟ್ ಬ್ರಿಜಿಡ್ಸ್, ಕನ್ನಡ ಮಾಧ್ಯಮಲಿ ಕಲ್ತವ್. ಮುಂದೆ ಸುಳ್ಯ ಕೆವಿಜಿಲಿ ಹೈಸ್ಕೂಲ್, ಅರಂತೋಡುಲಿ ಪಿಯುಸಿ ಮುಗ್ಸಿ ಉಜಿರೆ ಶ್ರೀ ಧ.ಮಂ. ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕಾಲೇಜ್‌ಲಿ ಬಿ.ಎನ್.ವೈ.ಎಸ್. ವೈದ್ಯಕೀಯ ಪದವಿ ಪಡ್ದೊ. ವೃತ್ತಿ ಜೀವನನ ಪುತ್ತೂರು ಸರಕಾರಿ ಆಸ್ಪತ್ರೆಲಿ ವೈದ್ಯರಾಗಿ ಸುರು ಮಾಡ್ದವು ಮೂರು ವರ್ಷ ಸೇವೆ ಮಾಡಿ ಉನ್ನತ ಶಿಕ್ಷಣಕ್ಕೆ ಪುನಃ ಉಜಿರೆಗೆ ಹೋದೊ. ಯೋಗ ವಿಜ್ಞಾನಲಿ ಎಂ.ಡಿ. ಪದವಿ ಪಡ್ದ್ ಬೆಂಗಳೂರು ಜಿಗಣಿಲಿ ಇರುವ ವಿಶ್ವದ ಸುರೂನ ಯೋಗ ವಿಶ್ವವಿದ್ಯಾಲಯಲಿ ಉದ್ಯೋಗಕ್ಕೆ ಸೇರ್ದೊ. ಸದ್ಯಕ್ಕೆ ಅಲ್ಲಿರುವ ಪ್ರಕೃತಿ ಚಿಕಿತ್ಸೆ ಕಾಲೇಜ್‌ಲಿ ಉಪನಿರ್ದೇಶಕರಾಗಿ, ಆಸ್ಪತ್ರೆನ ತಜ್ಞ ವೈದ್ಯರಾಗಿಯೂ ಕಾರ್ಯ ಮಾಡ್ತೊಳೊ. ಇವರ ಸಂಶೋಧನೆ ಕೆಲ್ಸ ಅಸ್ತಮಾ ಕಾಯಿಲೆಗೆ ಯೋಗ ಚಿಕಿತ್ಸೆ ಈಗಾಗಲೇ ಅಮೇರಿಕದ ವೈದ್ಯಕೀಯ ಜರ್ನಲ್‌ಲಿ ಪ್ರಕಟ ಆಗುಟು. ಪಾರ್ಶ್ವವಾಯು ಪೀಡಿತರಿಗೆ ಯೋಗ ಹೆಂಗೆ ಉಪಕಾರ ಆದುತ ಜರ್ಮನ್‌ಲಿ ಅಧ್ಯಯನ ಮಾಡಿ ಬಂದವು. ವೃತ್ತಿಲಿ ವೈದ್ಯರಾದರೂ ಪ್ರವೃತ್ತಿಲಿ ಆರೋಗ್ಯ ಮಾಹಿತಿ ನೀಡುವ ಕಾರ್ಯಲಿ ಇವು ಯಾಗೋಳು ಮುಂದೆ. ಮಡಿಕೇರಿ ಆಕಾಶವಾಣಿಲಿ 'ಚೈತನ್ಯ ಲಹರಿ' ಬಾನುಲಿ ಸರಣಿ ನಡ್ಸಿಕೊಟ್ಟೊಳೊ. ಶಿಕ್ಷಕರಿಗೆ ಯೋಗ ಪ್ರಶಿಕ್ಷಣ ಕೊಡಿಕೆ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿ ಆಗಿಯೂ ಅನುಭವ ಹೊಂದ್ಯೊಳೊ. ಪೇಸ್ಬುಕ್‌ಲಿ 'ಸೂರಡಿ' ಅಂತ ಒಂದ್ ಪುಟ ಮಾಡಿ ಗೌಡ ಜನಾಂಗ ಮರ್ತೋಗ್ತಿರುವ ಕ್ರಮ, ಪದ್ಧತಿಗಳ ಹುಡ್ಕಿ ತೆಗಿತಾ ಅರೆಬಾಷೆ ಸಂಸ್ಕೃತಿನ ಒಳ್ಸಿ, ಬೆಳ್ಸುವ ಕಾರ್ಯ ಮಾಡ್ತೊಳೊ.

ಇವರ ವಿಳಾಸ :
ಡಾ. ಪುನೀತ್ ರಾಘವೇಂದ್ರ ಕುಂಟುಕಾಡು
ಅರಂತೋಡು ಪೋಸ್ಟ್
ಸುಳ್ಯ, ದ.ಕ.–574314

Ptd @ Sri Krishna Printers. 94481 35592